ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಡಿಸೆಂಬರ್ 14 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 236 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಧಮ್ಕಿ ಹಾಕಿದರೆ ನಾವ್ಯಾರು ಹೆದರಲ್ಲ...!

ಮೂಲ ಸೌಕರ್ಯ ಸಂಬಂಧ ಸರ್ಕಾರಕ್ಕೆ ಎಚ್ಚರಿಕೆ ನೀಡಿದ ಉದ್ಯಮಿಗಳಿಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಎಚ್ಚರಿಕೆ

ಬೆಂಗಳೂರು, ಡಿ.13(ಕೆಎಂಶಿ)–ಮೂಲ ಸೌಕರ್ಯ ಪಡೆಯಲು ಸರ್ಕಾರಕ್ಕೆ ಧಮ್ಕಿ ಹಾಕಿದರೆ, ಇಲ್ಲಿ ಹೆದರುವವರು ಯಾರೂ ಇಲ್ಲ ಎಂದು ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ಉಸ್ತುವಾರಿ ಹೊಣೆ ಹೊಂದಿರುವ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಖಡಕ್ ಎಚ್ಚರಿಕೆ ನೀಡಿದ್ದಾರೆ.



ವಿಧಾನಸೌಧದಲ್ಲಿ ನಡೆದ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಸರ್ಕಾರ ಇರುವುದೇ ಜನರ ಸೇವೆಗೆ, ನಾವು ಅಧಿಕಾರಕ್ಕೆ ಬಂದ ನಂತರ ಸಮರ್ಪಕ ಕುಡಿಯುವ ನೀರು ಹಾಗೂ ವಿದ್ಯುತ್ ಕಲ್ಪಿಸಿದ್ದೇವೆ.

ನಗರದ ಸೌಂದರ್ಯೀಕರಣ ಹಾಗೂ ಮೂಲಸೌಕರ್ಯ ಕಲ್ಪಿಸುವ ಉದ್ದೇಶದಿಂದ ದೊಡ್ಡ ದೊಡ್ಡ ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆ. ಅವು ಕಾರ್ಯಗತವಾಗಲು ಸಮಯಾವಕಾಶ ಬೇಕು.

ಮೂಲಸೌಕರ್ಯ ಕಲ್ಪಿಸಲು ಸಾರ್ವಜನಿಕರಿಂದ ತೆರಿಗೆ ರೂಪದಲ್ಲಿ ಸಂಪನ್ಮೂಲ ಸಂಗ್ರಹಿಸಲೇಬೇಕು, ಇದರಿಂದಲೇ ಅಭಿವೃದ್ಧಿ ಕೈಗೊಳ್ಳುತ್ತೇವೆ. ನಿಮ್ಮ ಸಂಘಟನೆಯ ಕಿರಣ್ ಹೆಬ್ಬಾರ್ ಎಂಬುವವರು ನನಗೆ ಪತ್ರ ಬರೆದು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ, ಇದು ನಮ್ಮ ಹತ್ತಿರ ನಡೆಯುವುದಿಲ್ಲ. ಆತನಿಗೆ ಸ್ವಲ್ಪವೂ ಕಾಮನ್‌ಸೆನ್ಸ್ ಇದ್ದಂತಿಲ್ಲ. ನಾವು ಬೇರು ಮಟ್ಟದಿಂದ ಬಂದವರು, ಭ್ರಮೆಗಳನ್ನು ಇಟ್ಟುಕೊಂಡು ಪತ್ರ ಬರೆಯುವುದು, ಮಾತನಾಡುವುದನ್ನು ಬಿಡಿ ಎಂದು ನೇರವಾಗಿ ಎಚ್ಚರಿಸಿದರು.

ನಾನೂ ಒಬ್ಬ ಉದ್ಯಮಿ, ಸಾವಿರಾರು ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿದ್ದೇನೆ. ಕೆಲವರಿಗೆ ಕಟ್ಟಲು ಜಾಗವನ್ನೂ ನೀಡಿದ್ದೇನೆ ಮಿಸ್ಟರ್ ಹೆಬ್ಬಾರ್, ನೀನು ನನಗೆ ಧಮ್ಕಿ ಹಾಕುತ್ತೀಯಾ, ಎಲ್ಲ ಅಪಾರ್ಟ್‌ಮೆಂಟ್‌ಗಳು ಕಾನೂನು ಚೌಕಟ್ಟಿನಲ್ಲಿ ಇವೆಯೇ?

ಆಯಿತು, ಸರ್ಕಾರ ಏನು ಕ್ರಮ ಕೈಗೊಳ್ಳಬೇಕೋ ತೆಗೆದುಕೊಳ್ಳುತ್ತೆ. ನೀನೇನು ಮಾಡುತ್ತೀಯೋ ಮಾಡು, ನ್ಯಾಯಾಲಯಕ್ಕೆ ಹೋಗುತ್ತೀಯಾ ಹೋಗು, ಅಲ್ಲಿ ನಿಮ್ಮ ಅಪಾರ್ಟ್‌ಮೆಂಟ್‌ಗಳ ಕಾನೂನು ಉಲ್ಲಂಘನೆಗಳನ್ನು ದಾಖಲೆ ಸಹಿತ ಇಡುತ್ತೇವೆ ಎಂದು ಎಚ್ಚರಿಸಿದರು.

ನಮ್ಮ, ನಿಮ್ಮ ಬಾಂಧವ್ಯ ಚೆನ್ನಾಗಿದ್ದರೆ, ಇಬ್ಬರಿಗೂ ಅನುಕೂಲ. ಅದನ್ನು ಬಿಟ್ಟು ಧಮ್ಕಿ ಹಾಕಿದರೆ ಇಲ್ಲಿ ಹೆದರುವವರು ಯಾರೂ ಇಲ್ಲ, ಅದೂ, ನೀನು ನನಗೇ ಧಮ್ಕಿ ಹಾಕಿದ್ದೀಯಾ ಎಂದು ನುಡಿದರು.

ಇಂದು 'ಎಸ್.ಜೆ.ಮಾನ್ಯ' ಅವರಿಂದ ಸ್ವಪ್ನ ಮಾಲಿಕಾ ಕನಸುಗಳಿಂದ ನೇಯ್ದ 'ಭರತನಾಟ್ಯ' ಪ್ರದರ್ಶನ

ಮೈಸೂರು, ಡಿ.13(ಜಿಎ)– ಮೈಸೂರಿನ ಭರತಾಂಜಲಿ ನೃತ್ಯ ಶಾಲೆಯ ವಿದ್ಯಾರ್ಥಿ ಹಾಗೂ ಡಾ.ಶೀಲಾ ಶ್ರೀಧರ್ ಮತ್ತು ಶಾಶ್ವತಿ ರಘುನಂದನ್ ಅವರ ಶಿಷ್ಯೆ ಎಸ್.ಜೆ. ಮಾನ್ಯ ಅವರು ಸ್ವಪ್ನ ಮಾಲಿಕಾ ಕನಸುಗಳಿಂದ ನೇಯ್ದ ಮಾಲೆ 'ಭರತ ನಾಟ್ಯ' ಪ್ರದರ್ಶನವನ್ನು ಡಿ.14ರಂದು ಸಂಜೆ 6ಕ್ಕೆ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಪ್ರಸ್ತುತಪಡಿಸಲಿದ್ದಾರೆ ಎಂದು ಡಾ.ಶೀಲಾ ಶ್ರೀಧರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಭರತನಾಟ್ಯ ಪ್ರದರ್ಶನಕ್ಕೂ ಮುನ್ನ ನಡೆಯಲಿರುವ ಸಭಾ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎಸ್.ಮಲ್ಲಿಕಾರ್ಜುನ ಸ್ವಾಮಿ, ನಾದತರಂಗಿಣಿ,ಯುಎಸ್‌ಎ ನಿರ್ದೇಶಕರಾದ ಉಷಾಚಾರ್, ಕರ್ನಾಟಕ ಸುಗಮ ಸಂಗೀತ ಪರಿಷತ್ತು ಮೈಸೂರು ನಗರ ಘಟಕದ ಅಧ್ಯಕ್ಷ ಡಾ.ನಾಗರಾಜ್ ವಿ.ಬೈರಿ, ಬೆಂಗಳೂರು ರಾಜರಾಜೇಶ್ವರಿ ಕಲಾನಿಕೇತನ ನಿರ್ದೇಶಕರಾದ ಡಾ.ವೀಣಾಮೂರ್ತಿ ವಿಜಯ್ ಅವರು ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಎಸ್.ಜೆ.ಮಾನ್ಯ ಅವರ ಭರತನಾಟ್ಯ ಕಾರ್ಯಕ್ರಮಕ್ಕೆ ಶಾಶ್ವತಿ ರಘುನಂದನ್, ಕಲೈಮಾಮಣಿ ಕೆ.ಹರಿಪ್ರಸಾದ್, ಕೆ.ಪಿ.ಅನಿಲ್‌ಕುಮಾರ್, ಆರ್.ತ್ಯಾಗರಾಜನ್, ಅನಂತನಾರಾಯಣನ್ ಅವರು ಸಹಕಲಾವಿದರಾಗಿರುವರು ಎಂದು ಅವರು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್.ಜೆ ಮಾನ್ಯ ಮತ್ತು ಅವರ ತಾಯಿ ಸುಜಾತ ಜಯಕುಮಾರ್ ಉಪಸ್ಥಿತರಿದ್ದರು.

ಡಿ.21ರಂದು ರಾಷ್ಟ್ರೀಯ ಮಟ್ಟದ ಯೋಗಾಸನ ಚಾಂಪಿಯನ್‌ಶಿಪ್

ಮೈಸೂರು, ಡಿ.13(ಜಿಎ)–ವಿಶ್ವ ಮಾನವ ಯೋಗ ಶಿಕ್ಷಣ ಸಂಸ್ಥೆಯ ಬೆಳ್ಳಿ ಹಬ್ಬದ ಅಂಗವಾಗಿ ಡಿ.21ರಂದು ಬೆಳಗ್ಗೆ 11 ಗಂಟೆಗೆ ಜಗನ್ಮೋಹನ ಅರಮನೆ ಯಲ್ಲಿ ರಾಷ್ಟ್ರೀಯ ಮಟ್ಟದ ಯೋಗಾಸನ ಚಾಂಪಿಯನ್‌ಶಿಪ್ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಯೋಗ ಕುಮಾರ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಶಿರಡಿ ಸಾಯಿಬಾಬ ಭಿಕ್ಷಾ ಕೇಂದ್ರದ ಡಾ.ಲಕ್ಷ್ಮೀ ಶ್ರೀನಿವಾಸ ಗುರೂಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಉದ್ಯಮಿ ಗೋವಿಂದೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಜಿ.ಟಿ.ದೇವೇಗೌಡ, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಜಿಎಸ್‌ಎಸ್ ಪ್ರತಿಷ್ಠಾನದ ಸಂಸ್ಥಾಪಕ ಶ್ರೀಹರಿ ದ್ವಾರಕನಾಥ್ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಅಂದು ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಬೇಬಿ ಮಠದ ಪೀಠಾಧಿಪತಿಗಳಾದ ಡಾ.ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಉದ್ಯಮಿ ನಾರಾಯಣ ರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಂ.ಶಿವಣ್ಣ, ಕಾವೇರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ದಯಾನಂದ್, ಯೋಗ ಒಕ್ಕೂಟದ ಗೌರವ ಅಧ್ಯಕ್ಷ ಟಿ. ಜಲೇಂದ್ರಕುಮಾರ್ ಸೇರಿದಂತೆ ಮತ್ತಿತರರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಯೋಗಾಸನ ಸ್ಪರ್ಧೆಯೂ 8 ವರ್ಷದಿಂದ 56 ವರ್ಷ ಮೇಲ್ಪಟ್ಟ ಹಿರಿಯ ಪುರುಷರು ಮತ್ತು ಮಹಿಳೆಯರು ಸೇರಿದಂತೆ 8 ವಿಭಾಗದಲ್ಲಿ ನಡೆಯಲಿದೆ ಚಾಂಪಿಯನ್ ಆಫ್ ಚಾಂಪಿಯನ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ, ಟ್ರೋಫಿ ಜೊತೆಗೆ 'ವಿಶ್ವಮಾನವ ಚಾಂಪಿಯನ್' ಬಿರುದು ನೀಡಿ ಗೌರವಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ 9900154552, 9916099190 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಕಿರಣ್ ದೇವಯ್ಯ, ಕೆ.ಪಿ.ಗೀತಾ, ಕೆ.ಜೆ.ದೇವರಾಜ್, ಬಿ.ಪಿ.ಮೂರ್ತಿ, ಎನ್.ಅನಂತ್ ಉಪಸ್ಥಿತರಿದ್ದರು.

ಇಂದು ಲಯನ್ಸ್ ಪ್ರಾಂತೀಯ ಸಮ್ಮೇಳನ

ಮೈಸೂರು, ಡಿ.13(ಜಿಎ)– ಅಂತರ ರಾಷ್ಟ್ರೀಯ ಲಯನ್ಸ್ ಸಂಸ್ಥೆಯ ಜಿಲ್ಲೆ 317ಜಿ ಪ್ರಾಂತೀಯ ಸಮ್ಮೇಳನ ಪ್ರಾಂತ್ಯ 7 ಅನ್ನು 'ಬದುಕಿ ಬದುಕಲು ಬಿಡಿ' ಘೋಷ ವಾಕ್ಯದಡಿ ಮೈಸೂರಿನ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಸಭಾಂಗಣದಲ್ಲಿ ಡಿ.14ರಂದು ಬೆಳಗ್ಗೆ 8.30ಕ್ಕೆ ಆಯೋಜಿಸಲಾಗಿದೆ ಎಂದು ಪ್ರಾಂತೀಯ ಅಧ್ಯಕ್ಷ ಹೆಚ್.ಸಿ.ಕಾಂತ ರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನವನ್ನು ಹಿರಿಯ ಸಿವಿಲ್ ನ್ಯಾಯಾಧೀಶರಾದ ಕೆ.ಕೆ.ಅಮರ್‌ನಾಥ್ ಉದ್ಘಾಟಿಸಲಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಾನವ–ಪ್ರಾಣಿ ಸಂಘರ್ಷ ಹೆಚ್ಚಳವಾಗುತ್ತಿರುವುದರಿಂದ 'ಬದುಕಿ ಬದುಕಲು ಬಿಡಿ' ವಿಷಯ ಕುರಿತು ಗ್ರೀನ್ ಆಸ್ಕರ್ ಪ್ರಶಸ್ತಿ ಪುರಸ್ಕೃತರಾದ ಕೃಪಾಕರ ಸೇನಾನಿ ಮಾತನಾಡಲಿದ್ದಾರೆ. ಈ ಸಂದರ್ಭದಲ್ಲಿ ಜಿಲ್ಲಾ ರಾಜ್ಯೋತ್ಸವ ಪುರಸ್ಕೃತರಾದ ರಂಗನಾಥ್ ಮೈಸೂರು ಅವರನ್ನು ಅಭಿನಂದಿಸಲಾಗುತ್ತಿದೆ ಎಂದರು.

ಸಮ್ಮೇಳನದಲ್ಲಿ ಅನೇಕ ಸೇವಾ ಕಾರ್ಯಗಳನ್ನು ಹಮ್ಮಿಕೊಂಡಿದ್ದು, ಮಹಿಳೆ ಯರಿಗೆ ಹೊಲಿಗೆ ಯಂತ್ರ ನೀಡಲಾಗುತ್ತದೆ. ಶಿವಕುಮಾರ್ ಎಂಬುವರು ಲಯನ್ಸ್ ಸಂಸ್ಥೆಯ ಹೆಸರಿಗೆ ಪಿರಿಯಾ ಪಟ್ಟಣದ ಬೇಗೂರು ಗ್ರಾಮದಲ್ಲಿ ಎರಡು ಎಕರೆ ಜಮೀನನ್ನು ದಾನವಾಗಿ ನೀಡಲಿದ್ದಾರೆ. ಅಲ್ಲಿ ಮುಂದಿನ ದಿನಗಳಲ್ಲಿ ಗ್ರಾಮೀಣ ಭಾಗದ ಯುವಕರು ಮತ್ತು ಮಹಿಳೆಯರಿಗೆ ಅನುಕೂಲವಾಗುವಂತೆ ತರಬೇತಿ ಕೇಂದ್ರಗಳನ್ನು ಆರಂಭಿಸಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಎನ್.ಕೃಷ್ಣೇಗೌಡ, ಟಿ.ಎನ್.ವೆಂಕಟೇಶ್, ಆರ್.ಹೆಚ್.ನಾಗರಾಜ್, ಜಿ.ವಿ.ಬಾಲು, ಸಿ.ಆರ್.ಗಿರೀಶ್ ಉಪಸ್ಥಿತರಿದ್ದರು.

ಎಲ್.ವೆಂಕಟಕೃಷ್ಣ ಶಾಸ್ತ್ರಿ ನಿಧನ



ಮೈಸೂರು: ಮೈಸೂರು ವಿದ್ಯಾರಣ್ಯಪುರಂ ನಿವಾಸಿ ಹಾಗೂ ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಮಾಜಿ ಉಪಾಧ್ಯಕ್ಷರು, ಹಾಲಿ ನಿರ್ದೇಶಕರಾದ ಎಲ್.ವೆಂಕಟಕೃಷ್ಣ ಶಾಸ್ತ್ರಿ ಅವರು ನಿನ್ನೆ (ಶುಕ್ರವಾರ) ನಿಧನರಾದರು. ಇವರಿಗೆ 86 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ, ಇಬ್ಬರು ಪುತ್ರರು, ಮೊಮ್ಮಕ್ಕಳು, ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಚಾಮುಂಡಿ ಬೆಟ್ಟದ ತಪ್ಪಲ ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ ಇವರು ಖಿದ್ದರ್ ಕೋ–ಆಪರೇಟಿವ್ ಸೊಸೈಟಿಯ ಹಾಲಿ ನಿರ್ದೇಶಕರು, ಬ್ರಾಹ್ಮಣ ಸಭಾದ ನಿರ್ದೇಶಕರೂ ಆಗಿ ಐವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಶ್ರೀಯುತರು ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯದ ನಿವೃತ್ತ ನೌಕರರೂ ಆಗಿದ್ದರು.

ರಾಜ್ಯ ಸರ್ಕಾರ ಯಾರನ್ನೂ ಓಲೈಸುತ್ತಿಲ್ಲ, ಯಾರನ್ನೂ ನಿರ್ಲಕ್ಷಿಸುತ್ತಿಲ್ಲ

ಬ್ರಾಹ್ಮಣ ಸಮುದಾಯ ಮಾತ್ರವಲ್ಲ, ಎಲ್ಲಾ ಸಮುದಾಯದಲ್ಲೂ ಸಮಸ್ಯೆಗಳಿವೆ

ಮೈಸೂರಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟನೆ

ಮೈಸೂರು, ಡಿ.13(ಜಿಎ)– ರಾಜ್ಯ ಕಾಂಗ್ರೆಸ್ ಸರ್ಕಾರ ಕೆಲವರನ್ನು ಓಲೈಸುತ್ತಿದೆ, ತಮ್ಮನ್ನು ನಿರ್ಲಕ್ಷಿಸುತ್ತಿದೆ ಎಂಬ ಭಾವನೆ ಯಾರಿಗೂ ಬೇಡ, ಸರ್ಕಾರ ತನ್ನ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಎಲ್ಲಾ ಸಮುದಾಯದ ಏಳಿಗೆಗೆ ಶ್ರಮಿಸುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ಮೈಸೂರಿನ ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಪ್ರ ವಿದ್ಯಾರ್ಥಿಗಳಿಗೆ ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ನಗರದ ಕೃಷ್ಣಮೂರ್ತಿಪುರ ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಆಯೋಜಿಸಿದ್ದ ಮೈಸೂರು, ಬೆಂಗಳೂರು ವಿಭಾಗದ ವಿಪ್ರ ವಿದ್ಯಾರ್ಥಿಗಳಿಗೆ ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ, ವಿಪ್ರ ಸ್ವ ಉದ್ಯಮ ಸ್ಥಾಪನೆ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬ್ರಾಹ್ಮಣ ಸಮುದಾಯದಲ್ಲಿ ಮಾತ್ರವಲ್ಲ, ಎಲ್ಲ ಸಮುದಾಯಗಳಲ್ಲಿಯೂ ಸಮಸ್ಯೆಗಳಿವೆ. ಇದು 21 ನೇ ಶತಮಾನ, ವಿಜ್ಞಾನ, ತಂತ್ರಜ್ಞಾನ ಮುಂದುವರಿದಿದೆ ಎಂಬ ಕಾರಣದಿಂದ ಎಲ್ಲವೂ ಸರಿ ಇದೆ ಎನ್ನಲಾಗದು. ಮುಂದುವರಿದ ಸಮಾಜ ಎಂದುಕೊಂಡರೂ ಏನಾದರೂ ಸಮಸ್ಯೆ ಇದ್ದೇ ಇರುತ್ತದೆ. ಹೀಗಾಗಿ ಅಂತಹವುಗಳಿಗೆ ಸೂಕ್ತವಾಗಿ ಸ್ಪಂದಿಸಬೇಕು. ಸರ್ಕಾರ ನಮ್ಮ ಕಡೆ ನೋಡುತ್ತಿಲ್ಲ ಎಂಬ ಭಾವನೆ ಯಾರಿಗೂ ಬೇಡ ಎಂದು ತಿಳಿಹೇಳಿದರು.

ರಾಜ್ಯದ ವಿಪ್ರ ಸಮುದಾಯದವರ ಅಭಿವೃದ್ಧಿಗೆ ಏನಾದರೂ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಈ ಹಿಂದೆ ಸಿದ್ದರಾಮಯ್ಯ ಅವರ ಗಮನ ಸೆಳೆದಾಗ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಸಹಮತ ವ್ಯಕ್ತಪಡಿಸಿದ್ದರು. ಹೀಗಾಗಿ ಸ್ಥಾಪನೆಯಾಗಿದೆ. ಈಗಲೂ ಸಹಾ ಪ್ರತಿ ವರ್ಷವೂ ಸಾಕಷ್ಟು ಹಣ ಸಿಎಂ ಸಿದ್ದರಾಮಯ್ಯ ಮಂಡಳಿಗೆ ನೀಡುತ್ತಿದ್ದಾರೆ. ಮುಂದಿನ ಬಜೆಟ್‌ನಲ್ಲಿ ಹಣವನ್ನು ಇನ್ನಷ್ಟು ಹೆಚ್ಚಿಸುವ ಬಗ್ಗೆ ಸಿಎಂ ಜೊತೆ ಚರ್ಚಿಸಲಾಗುವುದೆಂದು ಭರವಸೆ ನೀಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ನಮ್ಮ ಪರ ಇಲ್ಲ ಎಂದು ಹಲವರು ಬೇಸರಗೊಂಡಿದ್ದಾರೆ. ಆದರೆ ಸರ್ಕಾರ ಎಲ್ಲರನ್ನೂ ಒಂದೇ ರೀತಿ ನೋಡುತ್ತಿದೆ. ನಮಗೆ ರಾಜ್ಯದ ಒಟ್ಟಾರೆ ಅಭಿವೃದ್ಧಿ ಮುಖ್ಯ. ವ್ಯವಸ್ಥೆಯಲ್ಲಿ ಎಲ್ಲರೂ ಒಟ್ಟಾಗಿರಬೇಕು, ದ್ವೇಷ, ವಿಭಜನೆ ಸಲ್ಲ. ಸಮುದಾಯಗಳನ್ನು ಒಡೆಯುವುದು ಸುಲಭ, ಒಗ್ಗೂಡಿಸುವುದು ಕಷ್ಟ. ಆದರೆ ನಮ್ಮ ಸರ್ಕಾರ ಎಲ್ಲರನ್ನೂ ಒಗ್ಗೂಡಿಸುವ ಕೆಲಸ ಮಾಡುತ್ತಿದೆ ಎಂದು ಸ್ಪಷ್ಟಪಡಿಸಿದರು.

ನಮ್ಮ ಸರ್ಕಾರ ಅರ್ಚಕರ ತಸ್ತೀಕ್ ಹೆಚ್ಚಳ ಮಾಡಿದೆ. ಈ ಹಿಂದೆಯೂ ಸಿಎಂ ಆಗಿದ್ದಾಗ ಸಿದ್ದರಾಮಯ್ಯ ತಸ್ತೀಕ್ ಎರಡು ಬಾರಿ ಹೆಚ್ಚಳ ಮಾಡಿದ್ದರು. ಹೀಗಾಗಿ ನಮ್ಮದು ಬ್ರಾಹ್ಮಣ ವಿರೋಧೀ ಸರ್ಕಾರ ವಲ್ಲ. ಪುರೋಹಿತರು, ಅರ್ಚಕರು, ಅಡುಗೆ ಮಾಡುವವರು, ಜ್ಯೋತಿಷಿಗಳೇ ಮೊದಲಾದ ಅಸಂಘಟಿತರಿಗೆ ಸೌಲಭ್ಯ ನೀಡಲು ಕ್ರಮ ಕೈಗೊಳ್ಳಲಾಗಿದೆ. ನಮ್ಮ ಸರ್ಕಾರದ ಗ್ಯಾರಂಟಿಗಳು ಯಾವುದೇ ಒಂದು ಧರ್ಮ, ಸಮುದಾಯ, ಜಾತಿಗಲ್ಲ. ಎಲ್ಲರಿಗೂ ಅನ್ವಯವಾಗುತ್ತಿವೆ. ಕೆಲವರು ಇವುಗಳಿಂದಾಗಿ ಸರ್ಕಾರದಲ್ಲಿ ಹಣವಿಲ್ಲ ಎನ್ನುತ್ತಾರೆ. ಆ ರೀತಿ ಆಗಿದ್ದಿದ್ದರೆ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಇಂತಹ ಕಾರ್ಯಕ್ರಮ ನಡೆಯುತ್ತಿತ್ತೆ ಎಂದು ಪ್ರಶ್ನಿಸಿದರು.

ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಮಾತನಾಡಿ, ಸಚಿವ ದಿನೇಶ್ ಗುಂಡೂರಾವ್ ಅವರ ಕಾರ್ಯ ವೈಖರಿ ವಿಪ್ರ ಸಮುದಾಯದಲ್ಲಿ ಸ್ವಾಭಿಮಾನ ಮೂಡಿಸುತ್ತಿದೆ. ಅವರು ದಿವಂಗತ ದಿನೇಶ್ ಗುಂಡೂರಾವ್ ಅವರ ಉತ್ತಮ ಪರಂಪರೆ ಮುಂದುವರಿಸಿದ್ದಾರೆ. ವಿಪ್ರ ಸಮುದಾಯಕ್ಕೆ ವಿದ್ಯೆಯೇ ಪ್ರಮುಖ ಅಂಗ. ವಿದ್ಯೆಯಾಗಿ ಬದುಕನ್ನೇ ಮೀಸಲಿಟ್ಟವರಾಗಿದ್ದಾರೆ. ಈ ಪರಂಪರೆಗೆ ಉತ್ತೇಜನ ನೀಡುವ ಭಾಗವಾಗಿ ಈಗ ಮೈಸೂರು, ಬೆಂಗಳೂರು ವಿಭಾಗ ಮಟ್ಟದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದರು.

ಈ ಪ್ರತಿಭಾವಂತರು ಸಮುದಾಯದ ಆಸ್ತಿ, ಇವರು ದೇಶವನ್ನು ಮುಂದೊಂದು ದಿನ ಬೆಳಗುತ್ತಾರೆ. ಸಮುದಾಯದ ಪ್ರತಿನಿಧಿಗಳೂ ಆಗುತ್ತಾರೆ. ಬ್ರಾಹ್ಮಣ ಸಮುದಾಯಕ್ಕೆ ದೊಡ್ಡ ಪರಂಪರೆ ಇದ್ದು, ಇದೇ ವೇಳೆ ಹಿರಿಯರು ಸಹಾ ಮಕ್ಕಳಲ್ಲಿ ಉತ್ತಮ ಪರಂಪರೆ ರೂಢಿಸಬೇಕು. ಇವರ ಮೂಲಕ ದೇಶದ ಸಂಸ್ಕೃತಿ ಉಳಿಸ ಬೇಕೆಂದು ಸಲಹೆ ನೀಡಿದರು.

ಹಿರಿಯ ಸಾಹಿತಿ ದಿವಂಗತ ಎಸ್.ಎಲ್. ಭೈರಪ್ಪ ಅವರ ಸ್ಮಾರಕ ನಿರ್ಮಾಣ ನಿರ್ಧಾರ ಸರ್ಕಾರ ಕೈಗೊಂಡಿರುವುದು ಸ್ವಾಗತಾರ್ಹ. ಗುಂಡೂರಾವ್ ಅವರ ವಿಶ್ವ ಕನ್ನಡ ಸಮ್ಮೇಳನ ಆಯೋಜನೆ, ಮೈಸೂರಿನ ಕಲಾಮಂದಿರ ನಿರ್ಮಾಣ ಮೂಲಕ ಅಜರಾಮರರಾಗಿದ್ದಾರೆ. ಹೀಗಾಗಿ ಅವರ ಪ್ರತಿಮೆ ಸಹಾ ಸ್ಥಾಪಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮೈಸೂರು, ಬೆಂಗಳೂರು ವಿಭಾಗಗಳಿಂದ ಹಾಜರಾಗಿದ್ದ ಹಲವಾರು ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರ ಸ್ವೀಕರಿಸಿದರು. ಸ್ವ ಉದ್ಯೋಗ ಯೋಜನೆ ಫಲಾನುಭವಿಗಳಿಗೆ ಸಾಲ ಮಂಜೂರಾತಿ ಪತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಡಿ.ಟಿ.ಪ್ರಕಾಶ್, ಡಾ.ಕೆವಿ. ಲಕ್ಷ್ಮಿದೇವಿ, ಇಳೈ ಆಳ್ವಾರ್ ಸ್ವಾಮೀಜಿ, ನಂ.ಶ್ರೀಕಂಠಕುಮಾರ್, ದಿವ್ಯಾಶ್ರೀ, ಡಾ. ಸುಜಾತ, ಲತಾ ಮೋಹನ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.12.2025 ಭಾನುವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2025 ರಿಂದ 15.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಹಸ್ತ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯುಪ್ರೆಷರ್ ಸುಜೋಕ್ ಕಪ್ಪಿಂಗ್ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿ ಮಠ, ವಿ.ವಿ. ಮೊಹಲ್ಲಾ, ಬೆಳಗ್ಗೆ 10 ರಿಂದ.
- **ಲಯನ್ಸ್ ಅಂತರರಾಷ್ಟ್ರೀಯ ಸಂಸ್ಥೆ :** ಪ್ರಾಂತೀಯ ಅಧ್ಯಕ್ಷರು ಹಾಗೂ ನಿವೃತ್ತ ಐಎಫ್‌ಎಸ್ ಅಧಿಕಾರಿ ಲಯನ್ ಹೆಚ್.ಸಿ ಕಾಂತರಾಜು ಅವರು 'ಬದುಕಿ ಬದುಕಲು ಬಿಡಿ' ಈ ಸಂಕೇತವಾಕ್ಯದಲ್ಲಿ ಪ್ರಾಂತೀಯ ಸಮ್ಮೇಳನ, ಗ್ರೀನ್ ಅಸ್ಕರ್ ಪ್ರಶಸ್ತಿ ವಿಜೇತರಾದ ಕೃಪಾಕರ ಮತ್ತು ಸೇನಾನಿ ಅವರಿಂದ 'ಬದುಕಿ ಮತ್ತು ಬದುಕಲು ಬಿಡಿ' ಕುರಿತು ವಿಶೇಷ ಉಪನ್ಯಾಸ, ವಿಶೇಷ ಆಹ್ವಾನಿತರು : ಹಿರಿಯ ಸಿವಿಲ್ ನ್ಯಾಯಾಧೀಶ ಕೆ.ಕೆ. ಅಮರ್‌ನಾಥ್, ಸನ್ಮಾನ : ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮೈಸೂರು ರಂಗನಾಥ್, ಉಪಸ್ಥಿತರು: ಮಾಜಿ ಜಿಲ್ಲಾ ರಾಜ್ಯಪಾಲರು ಹಾಗೂ ನಿಕಟ ಪೂರ್ವ ಮಲ್ಟಿಪಲ್ ಕೌನ್ಸಿಲ್ ಚೇರ್ಮನ್ ಲಯನ್ ಡಾ. ಎನ್ ಕೃಷ್ಣೇಗೌಡ, ಜಿಲ್ಲಾ ರಾಯಭಾರಿ ಲಯನ್ ಕಾರ್ಯಪ್ಪ, ಮೆಂಟರ್ ಲಯನ್ ಡಾ.ಆರ್ ಡಿ ಕುಮಾರ್, ಸಮಿತಿಯ ಅಧ್ಯಕ್ಷ ಲಯನ್ ಎಂ ಶಿವಕುಮಾರ್, ವಲಯ ಅಧ್ಯಕ್ಷ ಲಯನ್ ನಾಗರಾಜು ಮತ್ತು ಲಯನ್ ಬಾಲು, ಸಂಯೋಜಕರಾದ ಲಯನ್ ಶಿವಕುಮಾರ್ ಡಿ ಮತ್ತು ಲಯನ್ ಡಿ ನಾಗರಾಜ ಆಚಾರ್, ಸ್ಥಳ: ಮೈಸೂರಿನ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಭಾಂಗಣ, ಬೆಳಗ್ಗೆ 10ಕ್ಕೆ
- **ಯೂತ್ ಇನ್ನೋವೇಶನ್ ಎಕ್ಸ್‌ಪೋ, ಶ್ರೀ ದತ್ತಾತ್ರೇಯ ಪ್ರತಿಷ್ಠಾನ :** ಕನ್ನಡ ರಾಜ್ಯೋತ್ಸವ, ಉದ್ಘಾಟನೆ : ಪ್ರೊ. ಭಾಷ್ಯಂ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಪೂರ್ಣಾನಂದಪುರಿ ಸ್ವಾಮೀಜಿ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಎಂ.ಸಿ. ಮಲ್ಲಿಕಾರ್ಜುನಸ್ವಾಮಿ, ಮಲ್ಲರಾಜೇ ಅರಸ್ ಎ.ಆರ್., ಮುಕ್ತಾರ್ ಅಹ್ಮದ್, ಉಮ್ಮತ್ತೂರು ಬಸವರಾಜು, ಡೇವಿಡ್ ಫರ್ನಾಂಡೀಸ್, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಅಗ್ರಹಾರ, ಬೆಳಗ್ಗೆ 10 ರಿಂದ.
- **ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ :** ಕನ್ನಡ ರಾಜ್ಯೋತ್ಸವ, ಧ್ವಜಾರೋಹಣ : ಸಿಐಐಎಲ್ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಸಂಸ್ಥೆಯ ಸಭಾಂಗಣ, ಬೆಳಗ್ಗೆ 10.15 ರಿಂದ.
- **ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಮೈಸೂರು ಜಿಲ್ಲಾ ಸಮಿತಿ, ಮಹಿಳಾ ಪ್ರಕಾರ, ಅಭಾಸಾಪ :** ಮಹಿಳಾ ಮತ್ತು ಮಕ್ಕಳ ಸಮಾವೇಶ, ಅಧ್ಯಕ್ಷತೆ : ರಾಜ್ಯ ಸಂಪರ್ಕ ಪ್ರಮುಖ್ ಡಾ. ವಿ. ರಂಗನಾಥ್, ಮುಖ್ಯ ಅತಿಥಿಗಳು : ಉದ್ಯಮಿ ಶ್ರೀಮತಿ ಸವಿತಾ ರಂಗ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀಮತಿ ಆರ್. ಶಾರದಾ, ಜಿಲ್ಲಾ ಸಮಿತಿ ಅಧ್ಯಕ್ಷ ಎಸ್. ಸುಬ್ರಹ್ಮಣ್ಯ, ಸ್ಥಳ: ವಿಜಯ ವಿಠ್ಠಲ ಪದವಿಪೂರ್ವ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.
- **ಸಮೃದ್ಧಿ ಪ್ರೊಡಕ್ಷನ್ಸ್ :** ಮನಸ್ಸಿದ್ದರೆ ಮಾರ್ಗ ಚಲನಚಿತ್ರದ ಮುಹೂರ್ತ ಸಮಾರಂಭ, ಸಾನ್ನಿಧ್ಯ: ಅಮೃತೇಶ್ವರಸ್ವಾಮಿ ದೇವಸ್ಥಾನದ ಕುಮಾರ್ ಗುರೂಜಿ, ಉದ್ಘಾಟನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕ್ಯಾಮರಾ ಚಾಲನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಉಪಸ್ಥಿತರು : ಯಶಸ್ವಿ ಎಸ್. ಸೋಮಶೇಖರ್, ಡಾ. ನಾಗರಾಜು ವಿ. ಭೈರಿ, ಡಾ. ಕೆ. ಲಕ್ಷ್ಮೀದೇವಿ, ಶ್ರೀಮತಿ ಸುಮತಿ ಸುಬ್ರಹ್ಮಣ್ಯ, ಎಸ್. ರಾಮಪ್ರಸಾದ್, ಎನ್.ವಿ. ರಮೇಶ್, ಪ್ರೊ. ಪದ್ಮಿನಿ ಹೆಗಡೆ, ಶ್ರೀಮತಿ ಹೇಮಲತಾ ಕುಮಾರಸ್ವಾಮಿ, ಶ್ರೀಮತಿ ಸುಜಾತಾ ರವೀಶ್, ಡಾ. ಪ್ರಭಾಶಾಸ್ತ್ರಿ, ಸ್ಥಳ: ಅಮೃತೇಶ್ವರ ದೇವಸ್ಥಾನ, ದಿವಾನ್ಸ್ ರಸ್ತೆ, ಶಿವರಾಂಪೇಟೆ, ಬೆಳಗ್ಗೆ 11ಕ್ಕೆ.
- **ಹಾಸನ ಜಿಲ್ಲಾ ಬಳಗ :** ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ, ಸರ್ವ ಸದಸ್ಯರ ಸಭೆ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಪ್ರಧಾನ ಭಾಷಣ : ಪ್ರಸಾರಾಂಗ ನಿರ್ದೇಶಕ ಪ್ರೊ. ಲಕ್ಷ್ಮೀನಾರಾಯಣ ಅರೋರ, ಕ್ಯಾಲೆಂಡರ್ ಬಿಡುಗಡೆ : ಉದ್ಯಮಿ ಬಾಲಾಜಿ ಶೇಖರ್, ಉಪಸ್ಥಿತರು : ಶ್ರೀರಂಗಪಟ್ಟಣ ಡಿವೈಎಸ್ಪಿ ಶಾಂತಮಲ್ಲಪ್ಪ, ಸಾಹಿತಿ ಶಿವೇಗೌಡ, ಅಧ್ಯಕ್ಷತೆ : ಬಳಗದ ಅಧ್ಯಕ್ಷೆ ಶ್ರೀಮತಿ ಪಿ. ಶಾರದಮ್ಮ, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.
- **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಪತ್ರಿಕಾ ದಿನಾಚರಣೆ, ಹಿರಿಯ ಪತ್ರಕರ್ತರಿಗೆ ಅಭಿನಂದನೆ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಹಿರಿಯ ಪತ್ರಕರ್ತರಿಗೆ ಸನ್ಮಾನ : ಶಾಸಕ ಜಿ.ಟಿ. ದೇವೇಗೌಡ, ವಾರ್ಷಿಕ ಪ್ರಶಸ್ತಿ ಪ್ರದಾನ : ಮುಖ್ಯ ಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ವಿಶೇಷ ಅಭಿನಂದನೆ : ವಿಧಾನ ಪರಿಷತ್ ಸದಸ್ಯ ಡಾ. ಕೆ. ಶಿವಕುಮಾರ್, ಪ್ರಧಾನ ಭಾಷಣ : ನ್ಯೂಸ್ 18 ಕನ್ನಡ ಸಂಪಾದಕ ಎ. ಹರಿಪ್ರಸಾದ್, ಮುಖ್ಯ ಅತಿಥಿಗಳು : ಶಾಸಕರಾದ ಅನಿಲ್ ಚಿಕ್ಕಮಾದು, ಕೆ. ಹರೀಶ್‌ಗೌಡ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಜಿಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಪಾರಿಜಾತ ಸಾಂಸ್ಕೃತಿಕ ಹಾಗೂ ಸಾಮಾಜಿಕ ಟ್ರಸ್ಟ್ :** ಕನ್ನಡ ರಾಜ್ಯೋತ್ಸವ ಹಾಗೂ ದಕ್ಷಿಣಾಮೂರ್ತಿ ಹೋಮ, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಉದ್ಘಾಟನೆ : ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ಮುಖ್ಯ ಅತಿಥಿಗಳು : ಡಾ.ಬಿ.ವಿ. ಶೇಷಾದ್ರಿ, ಡಾ. ಬಿ.ಆರ್. ನಟರಾಜ ಜೋಯಿಸ್, ಡಾ. ರಾಘವೇಂದ್ರ ಪ್ರಸಾದ್, ಶಂಕರ್ ದೇವನೂರು, ಶಿವಶಕ್ತಿ ಗುರುಗಳು, ಆರ್. ಲೋಕೇಶ್, ಕೆ. ರಾಮಲಿಂಗೇಗೌಡ, ಶ್ರೀಮತಿ ಲಕ್ಷ್ಮಿ ಮಹೇಶ್, ಸ್ಥಳ: ಬ್ರಾಹ್ಮಣ ಧರ್ಮ ಸಹಾಯ ಸಭಾ ಕಲ್ಯಾಣ ಭವನ, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಡಾ.ರಾಜಶ್ರೀ ಕಿಶೋರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಶಾಂತಲಾ ವಟ್ಟಂ, ವ್ಯಾಖ್ಯಾನ:ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, ಡಾ.ಎಸ್.ಎಲ್.ಭೈರಪ್ಪ ಅವರ 'ದೂರ ಸರಿದರು' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.30 ನಮ್ಮ ಆರೋಗ್ಯ– ಅಲರ್ಜಿ ಮತ್ತು ಆಸ್ತಮಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಶ್ವಾಸಕೋಶ ತಜ್ಞರಾದ ಡಾ. ಮುರಳೀ.ಬಿ.ಮೋಹನ್ ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟ, ಪ್ರಸ್ತುತಿ–ಬಿ.ಜಿ.ಕವಿತಾ, 10.30 KRISH-TRISH and Balty boy ನಾವು ಭಾರತೀಯರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪದ ಮಾರ್ಗದರ್ಶಿ–ಶಿಕ್ಷಣಕ್ಕೊಂದು ಸೋಪಾನ ಮಾಲಿಕೆಯಲ್ಲಿ ಓದುವ ಅಭ್ಯಾಸ, ಹವ್ಯಾಸ ಹೇಗಿರಬೇಕು? ಯಾಕಿರಬೇಕು? ಕುರಿತು ಮಾತುಕತೆ. ಭಾಗವಹಿಸುತ್ತಾರೆ ಮೈಸೂರಿನ ವಿವೇಕಾನಂದ ಶಿಕ್ಷಕರ ತರಬೇತಿ ಮತ್ತು ಸಂಶೋಧನಾ ಕೇಂದ್ರದ ಅಧ್ಯಾಪಕರಾದ ಹೆಚ್.ಎಲ್.ಸತೀಶ್. ಇವರೊಂದಿಗೆ ಭಾಗವಹಿಸುತ್ತಾರೆ ದಿಗ್ವಿಜಯ್.ಬಿ., 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಪುಷ್ಪ.ವಿ.ಶಂಕರ್, 12.45 ಜನಪದ ಸಂಗೀತ : ಪಾಂಡವಪುರ ತಾಲೂಕು ಮಲ್ಲನಹಳ್ಳಿಯ ಮಾಕೇಗೌಡ ಮತ್ತು ಸಂಗಡಿಗರಿಂದ ಸರಸ್ವತಿ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ – ಪ್ರಧಾನ ಮಂತ್ರಿ ಅಗ್ನಿಪಥ್ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು– ಪುರುಷೋತ್ತಮ್ .ಡಿ., 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ –ಗೀತಾ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ, ಪಿ.ಎಸ್. ನಾರಾಯಣಸ್ವಾಮಿ –ಹಾಡುಗಾರಿಕೆ, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿದರ್ಪಣ, ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ಕಲ್ಯಾಣ ಕರ್ನಾಟಕದ ತತ್ವಪದಕಾರರು ಮಾತನಾಡುತ್ತಾರೆ ಎಸ್.ವಿ. ಪಾಟೀಲ್ ಗುಂಡೂರು, 8.00 ಫಸ್ಟ್ ಫಿಲ್ಮ್, ಪ್ರಸ್ತುತಿ– ಶ್ರೀಮಾನ್ ಎಸ್., 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಕೃಷ್ಣ ಪಾರಿಜಾತ ನಾಟಕದ ಹಾಡುಗಳು, 9.30 ರಾಷ್ಟ್ರೀಯ ಕಾರ್ಯಕ್ರಮದಲ್ಲಿ ರೂಪಕ, 10.00 ರವಿವಾರದ ಅಖಿಲ ಭಾರತದ ಸಂಗೀತ ಸಭಾ – ವಿದ್ವಾನ್ ಪುತ್ತೂರು ಗಣೇಶ್–ಸ್ಯಾಕ್ಸೋಫೋನ್ ವಾದನ

- **ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ :** ಕ್ರೀಡೋತ್ಕರ್ಷ–2025 ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಜಿ.ಟಿ. ದೇವೇಗೌಡ, ಮೈಸೂರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ವಿಶ್ರಾಂತ ಕುಲಪತಿ ಡಾ. ಎಸ್.ಬಿ. ದಂಡಿನ, ಅಧ್ಯಕ್ಷತೆ : ಮೈಸೂರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಕುಲಪತಿ ಡಾ. ವಿಷ್ಣುವರ್ಧನ, ಗೌರವ ಆಹ್ವಾನಿತರು : ಭಾಸ್ಕರ್ ನಾಯಕ್, ಮಂಜುನಾಥ ಅಂಗಡಿ, ಡಾ. ಚಂದ್ರಶೇಖರ, ಡಾ.ಎಸ್.ಪಿ. ಯೋಗಣ್ಣ, ಕೆ. ರುದ್ರೇಶ್, ಡಾ. ಕೆ.ಎಲ್. ರಾಜಶೇಖರ್, ಸ್ಥಳ: ತೋಟಗಾರಿಕೆ ಮಹಾವಿದ್ಯಾಲಯ, ಮಧ್ಯಾಹ್ನ 2ಕ್ಕೆ.
- **ಕಲಾಸೌರಭ :** ಚಿ. ವೇದಜ್ಞ ನರಸಿಂಹ ಅವರಿಂದ ವಯೋಲಿನ್ ಸೋಲೋ ವಾದನ, ವಿದ್ವಾನ್ ವಿನೋದ್ ಶ್ಯಾಮ್ ಆನೂರ್–ಮೃದಂಗ, ಚಿ. ಸ್ಕಂದ ಮಂಜುನಾಥ್–ಘಟಂ, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಸಂಜೆ 4 ರಿಂದ.
- **ಅರಮನೆ ಕೋಟೆ ಉತ್ತರ ಬಾಗಿಲು ಶ್ರೀ ಆಂಜನೇಯಸ್ವಾಮಿ ದೇವಸ್ಥಾನ:** ಬೆಳಗ್ಗೆ 8 ಗಂಟೆಗೆ ಶ್ರೀ ರಾಮದೇವರ ಪಟ್ಟಾಭಿಷೇಕ ಮಹೋತ್ಸವ, ಸಂಜೆ 6 ರಿಂದ ರಾಖಿ ಬಾಯಿ ಭಾರದ್ವಾಜ್ ಮತ್ತು ತಂಡದವರಿಂದ ಭರತನಾಟ್ಯ, ಸಂಜೆ 6.30 ರಿಂದ ನಾಗಲಕ್ಷ್ಮಿ ನಾಗರಾಜನ್, ಚಂಪಕ ಅಕಾಡೆಮಿ ಕಲಾವಿದರಿಂದ ನೃತ್ಯರೂಪಕ, ಸ್ಥಳ: ಅರಮನೆ ಕೋಟೆ ಉತ್ತರ ಬಾಗಿಲು ಆಂಜನೇಯ ಸ್ವಾಮಿ ದೇವಸ್ಥಾನ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಆಧ್ಯಾತ್ಮಿಕ ಜೀವನದ ಆವಶ್ಯಕ ಮೌಲ್ಯಗಳು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಎನರ್ಜಿ ಕನ್ಸರ್‌ವೇಷನ್ ಡೇ ಮತ್ತು ಶ್ಯಾಮಸುಂದರ್ ಸುಬ್ಬರಾವ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಹೆಚ್.ಎಸ್. ಸುರೇಶ್‌ಬಾಬು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ
- **ಪಿಜಿಎಲ್ ಸಂಸ್ಥಾಪನಾ ವೇದಿಕೆ :** ವಿದ್ವಾನ್ ಶ್ರೀಧರ್ ಮೇಲುಕೋಟೆ ಅವರಿಂದ ನಾದಸ್ವರ ವಾದನ, ವಿದ್ವಾನ್ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ಎಂ.ಎಲ್. ವಾದಿರಾಜ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಸಾಧನಾ ಮಂದಿರ, ಮೈಸೂರು :** ಸರಸ್ವತಿ ಪೂಜೆ ಮಾಡುವ ಬಗ್ಗೆ ವಿಶೇಷ ತರಬೇತಿ, ಸ್ವಾಮಿ ಹಂಸಾನಂದ ಅವರಿಂದ. ಸಂಜೆ 6.30 ರಿಂದ ಶ್ರೀರಾಮಪುರ 2ನೇ ಹಂತದಲ್ಲಿರುವ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಸಂಜೆ 7 ರಿಂದ ಮೈಸೂರು ಯೋಗಾಲಯ, ವಿವೇಕಾನಂದ ನಗರ ಎಸ್‌ಬಿಎಂ ಲೇಔಟ್.
- **ಸಮತೆಂತೋ ರಂಗ ತಂಡ :** ಸಮತೆಂತೋ ರಂಗ ಸಂಭ್ರಮ, ಸಮತೆಂತೋ ಕಲಾವಿದರಿಂದ 'ದುಡ್ಡಿನ ದೇವರು' ನಾಟಕ ಪ್ರದರ್ಶನ, ಸ್ಥಳ: ಕಿರುರಂಗ ಮಂದಿರ, ಸಂಜೆ 6.30ಕ್ಕೆ.
- **ಮೈಸೂರು ಇಂಗ್ಲಿಷ್ ಥಿಯೇಟರ್ ಫೆಸ್ಟಿವಲ್ :** ದಿ ಕಲೆಕ್ಟರ್ಸ್ ಕಲೆಕ್ಟಿವ್ ಕಲಾವಿದರಿಂದ ದಿ ಮಹಾಭಾರತ ಪ್ರಾಜೆಕ್ಟ್ ನಾಟಕ ಪ್ರದರ್ಶನ, ನಿರ್ದೇಶನ : ಪಿ.ಐ. ರಾಜೇಶ್, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6.30 ರಿಂದ.
- **ರಂಗಾಯಣ :** ರಂಗಾಯಣಗಳ ನಾಟಕ ಉತ್ಸವ, ಶಿವಮೊಗ್ಗ ರಂಗಾಯಣ ತಂಡದಿಂದ 'ನಮ್ಮೊಳಗೊಬ್ಬ ಗಾಂಧಿ' ನಾಟಕ ಪ್ರದರ್ಶನ, ಸಂಗೀತ : ರಾಘವ ಕಮ್ಮಾರ, ನಿರ್ದೇಶನ : ಚಿದಂಬರರಾವ್ ಜಂಬೆ, ಸ್ಥಳ: ಭೂಮಿಗೀತ ರಂಗ ಮಂದಿರ, ರಂಗಾಯಣ, ಸಂಜೆ 6.30ಕ್ಕೆ.
- **ಶ್ರೀ ಕಾಲಭೈರವ ಬಳಗ ಟ್ರಸ್ಟ್ :** ಶ್ರೀ ಕಾಲಭೈರವ ಜನ್ಮಾಷ್ಟಮಿ ಮತ್ತು ಗಿರಿಜಾ ಕಲ್ಯಾಣ ಮಹೋತ್ಸವ, ಬೆಳಗ್ಗೆ 9.30 ರಿಂದ ಗಿರಿಜಾ ಕಲ್ಯಾಣ, ಮ. 12ಕ್ಕೆ ಚತುರ್ವೇದ ಆಶೀರ್ವಾದ, ಮಹಾಮಂಗಳಾರತಿ, ಅನ್ನಸಂತರ್ಪಣೆ, ಸಂಜೆ 5.30 ರಿಂದ ಶ್ರೀ ಶಿವಪಾರ್ವತಿ ದೇವಿಯ ಉತ್ಸವ, ಸಂಜೆ 6.30ಕ್ಕೆ ಜೈಶ್ರೀ ಎಂ. ಶಿಮಾಜಪ್ಪ ಅವರಿಂದ ಭರತನಾಟ್ಯ, ಮಹಾಮಂಗಳಾರತಿ, ತೀರ್ಥಪ್ರಸಾದ ವಿತರಣೆ, ಸ್ಥಳ: 1ನೇ ಕ್ರಾಸ್, ಆರ್.ಟಿ. ನಗರ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಡಿಸೆಂಬರ್ 14 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 236 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜ.6ಕ್ಕೆ ಡಿಕೆಶಿ CM



ಅಂದು ಆಗದಿದ್ದರೆ ಜ.9ರಂದು ಆಗಬಹುದು; ಡಿಕೆಶಿ ಆಪ್ತ ಶಾಸಕ ಇಕ್ಬಾಲ್ ಹುಸೇನ್ ಸ್ಫೋಟಕ ಹೇಳಿಕೆ

ಬೆಂಗಳೂರು, ಡಿ.13(ಕೆಎಂಶಿ)– ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯ ಮಂತ್ರಿಯಾಗಿ ಜನವರಿ 6ರಂದು ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಆಪ್ತ ಶಾಸಕ ಇಕ್ಬಾಲ್ ಹುಸೇನ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.



ಇಕ್ಬಾಲ್ ಹುಸೇನ್

ಶಿವಕುಮಾರ್ ಅವರಿಗೆ 6 ಅದೃಷ್ಟ ಸಂಖ್ಯೆ, ಅವರು ಯಾವುದೇ ಕಾರ್ಯಗಳನ್ನಾಗಲಿ ಈ ಸಂಖ್ಯೆಯನ್ನೇ ಮುಂದಿಟ್ಟುಕೊಂಡು ಮಾಡುತ್ತಾರೆ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅಧಿಕಾರ ತ್ಯಜಿಸಿ ಡಿ.ಕೆ. ಶಿವಕುಮಾರ್ ಅವರಿಗೆ ಅವಕಾಶ ಮಾಡಿಕೊಡಬೇಕು.

ವರಿಷ್ಠರು ಈಗಾಗಲೇ ಶಿವಕುಮಾರ್ ಪರ ಸ್ಪಂದಿಸಿದ್ದಾರೆ. ಇನ್ನೇನಿದ್ದರೂ ಅವರು ಅಧಿಕಾರ ಪಡೆಯುವುದಷ್ಟೇ ಬಾಕಿ. ಕೊನೆಗೂ ಅವರ ಹೋರಾಟಕ್ಕೆ ಪ್ರತಿಫಲ ಸಿಗುತ್ತಿದೆ ಎಂದರು.

ನಮ್ಮಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ. ನಾವೆಲ್ಲರೂ ಒಂದೇ. ದೆಹಲಿಯಲ್ಲಿ ನಡೆಯುವ ಪಕ್ಷದ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ದೊಡ್ಡ ಸಂಖ್ಯೆಯಲ್ಲಿ ಹೋಗುತ್ತೇವೆ.

ದೆಹಲಿ ಭೇಟಿ ಸಂದರ್ಭದಲ್ಲಿ ವರಿಷ್ಠರ ಭೇಟಿ ಮಾಡುವ ಉದ್ದೇಶ ಇಲ್ಲ. ಈಗಾಗಲೇ ಭೇಟಿ ಮಾಡಿ ನಮ್ಮ ಬೇಡಿಕೆಯನ್ನು ಮುಂದಿಟ್ಟಿದ್ದೇವೆ. ಅದಕ್ಕೆ ಅವರೂ ಸ್ಪಂದಿಸಿದ್ದಾರೆ. ಇನ್ನು ಪಟ್ಟಾಭಿಷೇಕವಷ್ಟೇ ಆಗಬೇಕು. ಅದಕ್ಕಾಗಿ ನಾವೆಲ್ಲಾ ಕಾಯುತ್ತಿದ್ದೇವೆ. ನನಗೆ ತಿಳಿದಿರುವ ಪ್ರಕಾರ ಜನವರಿ 6ರಂದೇ ಮುಖ್ಯಮಂತ್ರಿಯಾಗಿ ಅಧಿಕಾರ ಗ್ರಹಣ ಮಾಡುವುದು ಶೇಕಡ 99ರಷ್ಟು ಖಚಿತ. ಒಂದು ವೇಳೆ ಅಂದು ಆಗದಿದ್ದರೆ ಜ.9 ಆಗಬಹುದು ಎಂದರು.

ಅಧಿಕಾರ ಹಂಚಿಕೆ ವಿಷಯ ಮುನ್ನೆಲೆಗೆ ಬರುತ್ತಿದ್ದಂತೆ ಶಿವಕುಮಾರ್ ಪರ ಮೊದಲ ಧ್ವನಿ ಎತ್ತಿದ್ದೇ ಶಾಸಕರಾದ ಇಕ್ಬಾಲ್ ಹುಸೇನ್ ಮತ್ತು ಬಸವರಾಜ್ ಶಿವಗಂಗಾ. ಇದಕ್ಕೆ ಪ್ರತಿಯಾಗಿ ಕೆಪಿಸಿಸಿ ಎಚ್ಚರಿಕೆ ನೋಟಿಸ್ ನೀಡಿತ್ತು. ಇತ್ತೀಚೆಗೆ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ, ನಮ್ಮ ತಂದೆ ಐದು ವರ್ಷ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಇರುತ್ತಾರೆಂದು ಬಹಿರಂಗವಾಗಿ ಹೇಳಿಕೆ ನೀಡಿದ ನಂತರ ಶಿವಕುಮಾರ್ ಬಣಕ್ಕೆ ಸೇರಿದ ಶಾಸಕರು, ತಮ್ಮ ನಾಯಕನನ್ನು ಬೆಂಬಲಿಸಿ ನಿತ್ಯ ಹೇಳಿಕೆ ನೀಡಲು ಆರಂಭಿಸಿದ್ದಾರೆ. ಅದರಲ್ಲೂ ಇಕ್ಬಾಲ್ ಮತ್ತು ಶಿವಗಂಗಾ ಅವರುಗಳು ಶಿವಕುಮಾರ್ ಅವರಿಗೆ ಕಾಂಗ್ರೆಸ್ ವರಿಷ್ಠರಿಂದ ಬಂದಂತಹ ಸಂದೇಶಗಳನ್ನು ಬಹಿರಂಗ ಮಾಡುತ್ತಿದ್ದಾರೆ.

ಡಿ.ಕೆ. ಶಿವಕುಮಾರ್ ಅವರಿಗೆ '6' ಲಕ್ಕಿ ನಂಬರ್. ಅವರ ವಾಹನಗಳ ಸಂಖ್ಯೆ ಸಹ 6ರಲ್ಲಿ ಕೊನೆಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಜನವರಿ 6 ರಂದು ಅವರು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸುತ್ತಾರೆ. ಅದಕ್ಕೆ ವರಿಷ್ಠರ ಆಶೀರ್ವಾದವೂ ಇದೆ ಎಂಬುದು ಡಿ.ಕೆ. ಶಿವಕುಮಾರ್ ಬೆಂಬಲಿಗ ಸಚಿವರು ಹಾಗೂ ಶಾಸಕರ ವಿಶ್ವಾಸವಾಗಿದೆ. ಈ ಮಧ್ಯೆ ದೆಹಲಿ ಮಟ್ಟದಲ್ಲಿಯೂ ಡಿ.ಕೆ. ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರಿಸುವ ವಿಚಾರದಲ್ಲಿ ಮಾತುಕತೆಗಳು ಅಂತಿಮ ಘಟ್ಟ ತಲುಪಿವೆ ಎಂಬುದು ಖಚಿತವಾಗುತ್ತಿದ್ದಂತೆ ಡಿಕೆಶಿ ಬೆಂಬಲಿಗರು ಬಹಿರಂಗವಾಗಿಯೇ ಹೇಳಿಕೆ ನೀಡಲು ಆರಂಭಿಸಿದ್ದಾರೆ.

ಅವನಿಗೆ ಮಾತಾಡೋ ಚಟವಿದೆ...!

ಬೆಂಗಳೂರು, ಡಿ.13– ದೆಹಲಿಗೆ ತೆರಳುವ ಮುನ್ನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತಮ್ಮ ಬೆಂಬಲಿಗ ಶಾಸಕ ಇಕ್ಬಾಲ್ ಹುಸೇನ್ ಜ.6ಕ್ಕೆ ತಾವು ಮುಖ್ಯಮಂತ್ರಿ ಆಗುವುದಾಗಿ ಹೇಳಿಕೆ ನೀಡಿರುವುದಕ್ಕೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇಕ್ಬಾಲ್ ಹುಸೇನ್ ಮಾತನ್ನು ಯಾರೂ ನಂಬಬೇಡಿ, ಅವನಿಗೆ ಮಾತಾಡೋ ಚಟ ಇದೆ. ಅವನ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಸಿಡಿಮಿಡಿಗೊಂಡರು. ಈ ಮಧ್ಯೆ ಚನ್ನಗಿರಿ ಶಾಸಕ ಬಸವರಾಜು ವಿ. ಶಿವಗಂಗಾ ಸಹ ಇಕ್ಬಾಲ್ ಹುಸೇನ್ ಹೇಳಿಕೆಗೆ ಸಹಮತ ವ್ಯಕ್ತಪಡಿಸಿದ್ದಾರೆ.

ಇಂದು ದೆಹಲಿ ರಾಮಲೀಲಾ ಮೈದಾನದಲ್ಲಿ ಮತಗಳ್ಳತನ ವಿರೋಧಿ ಪ್ರತಿಭಟನೆ

ಪವರ್ ಪ್ಲೇ ಮೂಡ್‌ನಲ್ಲೇ ಸಿಎಂ, ಡಿಸಿಎಂ, ಶಾಸಕರ ದಂಡು ದೆಹಲಿಗೆ

ಬೆಂಗಳೂರು, ಡಿ.13(ಕೆಎಂಶಿ)– ರಾಷ್ಟ್ರೀಯ ಕಾಂಗ್ರೆಸ್ ಭಾನುವಾರ ದೆಹಲಿಯ ರಾಮಲೀಲಾ ಮೈದಾನದಲ್ಲಿ ಹಮ್ಮಿಕೊಂಡಿರುವ ಮತಗಳ್ಳತನ ವಿರೋಧಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವರು, ಶಾಸಕರ ದಂಡೇ ತೆರಳಿದೆ.

ಮತಗಳ್ಳತನ ವಿಷಯ ಮುಂದಿಟ್ಟುಕೊಂಡು ಶಿವಕುಮಾರ್ ದೆಹಲಿಯಲ್ಲೇ ಮೂರು ದಿನ ಬಿಡಾರ ಹೂಡಲಿದ್ದಾರೆ.

ಶನಿವಾರ ಸಂಜೆ ದೆಹಲಿಗೆ ತೆರಳಿದ ಶಿವಕುಮಾರ್, ಸೋಮವಾರ ರಾತ್ರಿ ಹಿಂತಿರುಗಿ, ಮಂಗಳವಾರ ಬೆಳಗ್ಗೆ ಅಧಿವೇಶನದಲ್ಲಿ ಪಾಲ್ಗೊಳ್ಳಲು ಬೆಳಗಾವಿಗೆ ತೆರಳಲಿದ್ದಾರೆ. ಸಿದ್ದರಾಮಯ್ಯ ಭಾನುವಾರ ಬೆಳಗ್ಗೆ ವಿಶೇಷ ವಿಮಾನದಲ್ಲಿ ದೆಹಲಿಗೆ ತೆರಳಿ ಅಂದು ರಾತ್ರಿಯೇ ಹಿಂತಿರುಗಲಿದ್ದಾರೆ. ಶಿವಕುಮಾರ್ ಬೆಂಬಲಿತ ಸಚಿವರು, ಶಾಸಕರ ದಂಡೇ ದೆಹಲಿಗೆ ತೆರಳಿದ್ದು, ಸಾಧ್ಯವಾದರೆ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಅಧಿಕಾರ ಹಸ್ತಾಂತರ ಕುರಿತಂತೆ ಚರ್ಚೆ ನಡೆಸಲೂ ಮುಂದಾಗಿದ್ದಾರೆ.

ಪಕ್ಷದ ಅಧಿನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸಮಯವನ್ನೂ ಕೇಳಿದ್ದಾರೆ. ■ 6ನೇ ಪುಟಕ್ಕೆ

ತಿಂಗಳೊಳಗೆ ರಾಜ್ಯಾದ್ಯಂತ ಕನ್ನಡ ನಾಮಫಲಕ ಅಳವಡಿಕೆ ಕಡ್ಡಾಯ

ಬೆಳಗಾವಿ, ಡಿ.13– ಕರ್ನಾಟಕದಾದ್ಯಂತ ಎಲ್ಲಾ ವಾಣಿಜ್ಯ ಸಂಸ್ಥೆಗಳು, ಕೈಗಾರಿಕೆಗಳು, ಟ್ರಸ್ಟ್ ನಡೆಸುವ ಸಂಸ್ಥೆಗಳು, ಆಸ್ಪತ್ರೆಗಳು, ಮನರಂಜನಾ ಕೇಂದ್ರಗಳು, ಹೋಟೆಲ್‌ಗಳು ಸೇರಿದಂತೆ ಮತ್ತಿತರ ಕಡೆಗಳಲ್ಲಿ 15 ದಿನಗಳಿಂದ ಒಂದು ತಿಂಗಳೊಳಗೆ ಕಡ್ಡಾಯವಾಗಿ ಕನ್ನಡ ನಾಮಫಲಕಗಳನ್ನು ಅಳವಡಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ತಿಳಿಸಿದ್ದಾರೆ. ■ 6ನೇ ಪುಟಕ್ಕೆ



ಮಡಿಕೇರಿಯ ಫೇಸ್‌ಬುಕ್ ಗೆಳತಿ ಆಹ್ವಾನ ಸ್ವೀಕರಿಸಿ ಅವಾಂತರಕ್ಕೀಡಾದ ಮಂಡ್ಯದ ಯುವಕ!

ಅರೆಬೆತ್ತಲೆಯಲ್ಲೇ ಪೊಲೀಸ್ ಠಾಣೆಗೆ ಬಂದು ರಕ್ಷಣೆ!!

ಮಡಿಕೇರಿ, ಡಿ.13– ಫೇಸ್‌ಬುಕ್ ಗೆಳತಿ ಭೇಟಿಗೆ ಬೆಂಗಳೂರಿನಿಂದ ಮಡಿಕೇರಿಗೆ ಬಂದ ಮಂಡ್ಯ ಮೂಲದ ಯುವಕನ ಮೇಲೆ ತೀವ್ರ ಹಲ್ಲೆ ನಡೆಸಿದ್ದಲ್ಲದೆ ಆತನನ್ನು ವಿವಸ್ತ್ರಗೊಳಿಸಿ 50 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿದ್ದ ಆತಂಕಕಾರಿ ಪ್ರಕರಣ ನಡೆದಿದೆ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ವಾಸವಿರುವ ಮೂಲತಃ ಮಂಡ್ಯ ಜಿಲ್ಲೆ ಮದ್ದೂರಿನ ಹೆಚ್.ಪಿ.ಮಹದೇವ (39), ಫೇಸ್‌ಬುಕ್ ಗೆಳತಿ ಭೇಟಿಗೆ ಬಂದು ಸಂಕಷ್ಟಕ್ಕೆ ಸಿಲುಕಿದವರಾಗಿದ್ದು, ಹೇಗೋ ಖದೀಮರಿಂದ ತಪ್ಪಿಸಿಕೊಂಡು ಅರೆಬೆತ್ತಲೆಯಾಗಿಯೇ ಪೊಲೀಸ್ ಠಾಣೆಗೆ ಓಡಿ ಹೋಗಿ ರಕ್ಷಣೆ ಪಡೆದಿದ್ದಾರೆ.

ಹನಿಟ್ರ್ಯಾಪ್ ಶಂಕೆ

ಫೇಸ್‌ಬುಕ್‌ನಲ್ಲಿ ಪರಿಚಯವಾದ ವ್ಯಕ್ತಿಯಿಂದ ಹಣ ಪಡೆದು, ಅದನ್ನು ವಾಪಸ್ ನೀಡಲು ತಾನಿದ್ದ ಸ್ಥಳಕ್ಕೆ ಕರೆಸಿಕೊಂಡಿರುವುದನ್ನು ಗಮನಿಸಿದರೆ ಇದು ಹನಿಟ್ರ್ಯಾಪ್ ಪ್ರಕರಣ ಇರಬಹುದೆಂದು ಶಂಕಿಸಲಾಗಿದೆ. ಮನೆಯೊಂದಕ್ಕೆ ಕರೆದೊಯ್ದು, ಆತನಿಗೆ ಮದ್ಯ ಕುಡಿಸಿ ನಂತರ ವ್ಯವಸ್ಥಿತವಾಗಿ ಖೆಡ್ಡಾಕ್ಕೆ ಬೀಳಿಸಲಾಗಿದೆ. ಹನಿಟ್ರ್ಯಾಪ್ ಪ್ರಕರಣದ ರುವಾರಿ ರಚನಾ, ಹಲವು ವರ್ಷಗಳ ಹಿಂದೆ ಪೊಲೀಸ್ ಸಿಬ್ಬಂದಿಯೊಂದಿಗೆ ಮದುವೆ ಆಗಿದ್ದಳು. ಆದರೆ ಈಕೆ ಕುಡಿತದ ಚಟಕ್ಕೆ ಒಳಗಾಗಿದ್ದರಿಂದ ಬೇಸತ್ತ ಗಂಡ ವಿವಾಹ ವಿಚ್ಛೇದನ ಪಡೆದಿದ್ದರು ಎನ್ನಲಾಗಿದೆ.

ಏನಿದು ಕತೆ?: ಮಹದೇವನಿಗೆ ಇತ್ತೀಚೆಗೆ ಮಡಿಕೇರಿಯ ರಚನಾ ಫೇಸ್‌ಬುಕ್‌ನಲ್ಲಿ ಪರಿಚಯವಾಗಿದ್ದಳು. ನಿತ್ಯ ಇಬ್ಬರ ನಡುವೆ ಸಂಭಾಷಣೆ ನಡೆದಿತ್ತು. ಈ ನಡುವೆ ರಚನಾ, ನನಗೆ ಕಷ್ಟ ಇದೆ ಎಂದು 10 ಸಾವಿರ ಹಣವನ್ನು ಫೋನ್ ಪೇ ಮೂಲಕ ಪಡೆದಿದ್ದಳು. ಕೆಲ ದಿನಗಳ ನಂತರ ಮಹದೇವ ತಾನು ನೀಡಿದ್ದ 10 ಸಾವಿರ ರೂ. ವಾಪಸ್ ಕೇಳಿದಾಗ ಮೈಸೂರು ಅಥವಾ ಕುಶಾಲನಗರಕ್ಕೆ ಬರುವಂತೆ ರಚನಾ ಹೇಳಿದ್ದಳು. ನಂತರ ಆಕೆ ತಿಳಿಸಿದಂತೆ ಶುಕ್ರವಾರ ರಾತ್ರಿ ಮಡಿಕೇರಿಗೆ ಬಂದಿದ್ದ ಮಹದೇವನನ್ನು ಆಕೆ ಮಂಗಳಾದೇವಿನಗರದ ಮನೆಯೊಂದಕ್ಕೆ ಕರೆಸಿಕೊಂಡಿದ್ದಳು. ■ 6ನೇ ಪುಟಕ್ಕೆ

ಸಂಪಾದನೆ ಮಾಡುವ ಮಹಿಳೆ ಜೀವನಾಂಶಕ್ಕೆ ಅನರ್ಹ

ಅಲಹಾಬಾದ್ ಹೈಕೋರ್ಟ್ ಮಹತ್ವದ ತೀರ್ಪು

ಅಲಹಾಬಾದ್, ಡಿ.13– ಜೀವನಾಂಶಕ್ಕೆ ಸಂಬಂಧಿಸಿದಂತೆ ಮಹತ್ವದ ತೀರ್ಪನ್ನು ನೀಡಿರುವ ಅಲಹಾಬಾದ್ ಹೈಕೋರ್ಟ್ ಸಂಪಾದನೆ ಮಾಡುವ ಮಹಿಳೆ ತನ್ನನ್ನು ತಾನು ಕಾಪಾಡಿಕೊಳ್ಳಲು ಸಮರ್ಥಳಾಗಿರುತ್ತಾಳೆ ಎಂದು ಅಭಿಪ್ರಾಯಪಟ್ಟಿದೆ.

ಪರಿತ್ಯಕ್ತ ಪತ್ನಿಗೆ ಜೀವನಾಂಶ ಪಾವತಿಸಲು ವ್ಯಕ್ತಿಯೊಬ್ಬನಿಗೆ ಗೌತಮ್ ಬುದ್ಧನಗರದ ಕೆಳ ನ್ಯಾಯಾಲಯ ನೀಡಿದ್ದ ಆದೇಶವನ್ನು ಈ ಮೂಲಕ ಅಲಹಾಬಾದ್ ಹೈಕೋರ್ಟ್ ರದ್ದುಗೊಳಿಸಿದೆ. ಆಕೆ ತನ್ನ ಜೀವನೋಪಾಯವನ್ನು ಗಳಿಸಿದ್ದಾಳೆ ಮತ್ತು ಆಕೆಯ ಅಫಿಡವಿಟ್‌ನಲ್ಲಿ ನಿಜವಾದ ಸಂಬಳವನ್ನು ಬಹಿರಂಗಪಡಿಸಿಲ್ಲ ಎಂಬ ಅಂಶವನ್ನು ಹೈಕೋರ್ಟ್ ಗಮನಿಸಿ ಈ ಆದೇಶ ಪ್ರಕಟಿಸಿದೆ.

ನ್ಯಾಯಮೂರ್ತಿ ಮದನ್ ಪಾಲ್ ಸಿಂಗ್ ಅವರನ್ನೊಳಗೊಂಡ ಪೀಠ ಅಂಕಿತ್ ಸಹಾ ಎಂಬ ವ್ಯಕ್ತಿ ಸಲ್ಲಿಸಿದ ಕ್ರಿಮಿನಲ್ ಪರಿಷ್ಕರಣಾ ಅರ್ಜಿಯನ್ನು ಸಹ ಅನುಮತಿಸಿತು. ವಿಚಾರಣಾ ನ್ಯಾಯಾಲಯದ ಮುಂದೆ ಸಲ್ಲಿಸಿದ ಅಫಿಡವಿಟ್‌ನಲ್ಲಿ, ಮಹಿಳೆ ತಾನು ಸ್ನಾತಕೋತ್ತರ ಪದವೀಧರೆ ಮತ್ತು ಅರ್ಹತೆಯ ಮೂಲಕ ವೆಬ್ ಡಿಸೈನರ್ ಎಂದು ಒಪ್ಪಿಕೊಂಡಿದ್ದಾರೆ ಎಂದು ಸೂಚಿಸುತ್ತದೆ. ಅವರು ಕಂಪನಿಯಲ್ಲಿ ಹಿರಿಯ ಮಾರಾಟ ಸಂಯೋಜಕರಾಗಿ ಕೆಲಸ ಮಾಡುತ್ತಿದ್ದಾರೆ ಮತ್ತು ತಿಂಗಳಿಗೆ 34,000 ರೂ. ಸಂಬಳ ಪಡೆಯುತ್ತಿದ್ದಾರೆ ಎಂದು ಡಿಸೆಂಬರ್ 3 ರ ಆದೇಶದಲ್ಲಿ ನ್ಯಾಯಾಲಯ ತಿಳಿಸಿದೆ. ಆದರೆ ಆಕೆಯ ಪಾಟಿ ಸವಾಲಿನಲ್ಲಿ, ಅವರು ತಿಂಗಳಿಗೆ 36,000 ರೂ. ಗಳಿಸುತ್ತಿದ್ದಾರೆ ಎಂದು ಒಪ್ಪಿಕೊಂಡಿದ್ದಾರೆ. ■ 6ನೇ ಪುಟಕ್ಕೆ

ಮೈಸೂರಲ್ಲಿ ಅದ್ಧೂರಿ ಹನುಮನ ಉತ್ಸವ

ಭವ್ಯ ಮೆರವಣಿಗೆಯಲ್ಲಿ ಅಪಾರ ಹನುಮ ಭಕ್ತರು ಭಾಗಿ



ಮೈಸೂರಲ್ಲಿ ನಡೆದ ಹನುಮ ಜಯಂತಿ ಮೆರವಣಿಗೆಯಲ್ಲಿ ಪಾಲ್ಗೊಂಡಿರುವ ಅಪಾರ ಸಂಖ್ಯೆಯ ಹನುಮ ಭಕ್ತರು.

ಮೈಸೂರು, ಡಿ.13(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಶನಿವಾರ ಹನುಮ ಜಯಂತಿಯ ಭವ್ಯ ಮೆರವಣಿಗೆ ನಡೆಯಿತು.

ಮೈಸೂರು ಹನುಮಂತೋತ್ಸವ ಸಮಿತಿ ಆಯೋಜಿಸಿದ್ದ 7ನೇ ವರ್ಷದ ಹನುಮಂತೋತ್ಸವ ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯ ಶ್ರೀರಾಮನ ಭಕ್ತರು ಪಾಲ್ಗೊಂಡರು. ಮೈಸೂರು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಶನಿವಾರ ಬೆಳಗ್ಗೆ ಏರ್ಪಡಿಸಿದ್ದ 'ಮೈಸೂರು ಹನುಮ ಹಬ್ಬದ' ಮೆರವಣಿಗೆಗೆ ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಸಂಸದ ಪ್ರತಾಪ ಸಿಂಹ, ಮಾಜಿ ಶಾಸಕ ಎಲ್.ನಾಗೇಂದ್ರ, ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಸೇರಿದಂತೆ ಇತರರು ಹನುಮನ ಮೂರ್ತಿಗೆ ಪುಷ್ಪಾರ್ಚನೆ ಸಲ್ಲಿಸಿ, ವಿಶೇಷ ಪೂಜೆ ಮೂಲಕ ಚಾಲನೆ ನೀಡಿದರು. ಇದಕ್ಕೂ ಮುನ್ನ ಬೆಳಗ್ಗೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹೋಮ–ಹವನ ನಡೆಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ, ತುಳಸಿ, ಮೈಸೂರು ಮಲ್ಲಿಗೆ, ವೀಳ್ಯದೆಲೆ, ಹಲಸಂದೆಯಿಂದ ಮಾಡಿದ್ದ ವಡೆ, ನಿಪ್ಪಟ್ಟು ■ 6ನೇ ಪುಟಕ್ಕೆ

ಶ್ರೀರಾಮನ ಭಕ್ತ ಆಂಜನೇಯ. ಆಂಜನೇಯನನ್ನು ಭಕ್ತಿಯಿಂದ ಸ್ಮರಣೆ ಮಾಡಬೇಕು. ರಾಮ ರಾಜ್ಯ ಸ್ಥಾಪನೆಗೆ, ರಾಮನಿಗೆ ಪಟ್ಟಾಭಿಷೇಕ ಮಾಡಲು ಆಂಜನೇಯ ಪಟ್ಟ ಶ್ರಮ ಜಗತ್ತಿಗೆ ಗೊತ್ತಿದೆ.



ಹನುಮನ ಆಶೀರ್ವಾದದಿಂದ ಜನತೆಗೆ ಆರೋಗ್ಯ, ಸುಖ–ಶಾಂತಿ, ನೆಮ್ಮದಿ ಸಿಗಲಿ

-ಜಿ.ಟಿ.ದೇವೇಗೌಡ, ಶಾಸಕ

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ... ನಾನು ಸಾಯ್ತೀನಿ!
ಗಂಡ : ತಗೋ ಡೈರಿ ಮಿಲ್ಕ್ !!
ಹೆಂಡ್ತಿ : ಯಾಕೆ?
ಗಂಡ : ಯಾವ್ದೇ ಒಳ್ಳೆ ಕೆಲ್ಸ ಮಾಡೋಕೆ ಮುನ್ನ ಬಾಯಿ ಸಿಹಿ ಮಾಡಬೇಕಂತೆ!!

ಮೈಸೂರು ಮಿತ್ರ

ಭಾನುವಾರ, 14 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಯಾವ ವ್ಯಕ್ತಿ ಸ್ಪಷ್ಟವಾಗಿ, ಸ್ವಚ್ಛವಾಗಿ, ನೇರವಾಗಿ ಮಾತನಾಡುತ್ತಾನೋ ಆತನ ಮಾತುಗಳು ತೀವ್ರವಾಗಿ, ಹರಿತವಾಗಿ ಅಥವಾ ಕಠೋರವಾಗಿಯೂ ಇರಬಹುದು. ಆದರೆ ಆತನ ಮನಸ್ಸಿನಲ್ಲಿ ಯಾವುದೇ ಮೋಸವಿರುವುದಿಲ್ಲ. – ಶ್ರೀ ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ { ಇಂದಿನ ಸೋಲು
ಗಾದೆ ಸುಳ್ಳಾಗದು { ನಾಳಿನ ಗೆಲುವು.

ನಿಮ್ಮ ಪತ್ರಗಳು

ದೈವ ಭಾಷೆ ಸಂಸ್ಕೃತ ನಮ್ಮ ಅಸ್ಮಿತೆ



ಮಾನ್ಯರೆ,

ಮೈಸೂರಿನ ಅಜೀಜ್ ಸೇಠ್ ವೃತ್ತದಲ್ಲಿ ಮೈಸೂರು ಮಹಾನಗರ ಪಾಲಿಕೆಯ ನಾಮಫಲಕದಲ್ಲಿ 2015 ರ ಭಾಷಾ ಅಧಿನಿಯಮ ಕಾಯ್ದೆ ಪ್ರಕಾರ ಸರ್ಕಾರಿ ನಾಮಫಲಕದಲ್ಲಿನ ಭಾಷಾ ಬಳಕೆಯನ್ನು ದ್ವಿಭಾಷಾ ಸೂತ್ರದ ಅಡಿ ಕನ್ನಡ ಮತ್ತು ಆಂಗ್ಲ ಭಾಷೆಗಳನ್ನು ಸಕ್ಷಮ ಪ್ರಾಧಿಕಾರದ ನಾಮಫಲಕಗಳಲ್ಲಿ ಅಳವಡಿಸಬೇಕೆಂದು ಕನ್ನಡದ ಜೊತೆ ಆಂಗ್ಲ ಭಾಷೆ ಹೊರತು ಪಡಿಸಿ ಅನ್ಯ ಭಾಷೆಯ ಜೋಡಣೆ ಸರಿಯಲ್ಲ ಎಂಬುದು ಸರ್ಕಾರಿ ಅಧಿಕಾರಿಗಳ ಗಮನಕ್ಕಿಲ್ಲವೇ?

ಉರ್ದು ಒಂದು ಸಮುದಾಯದ ಭಾಷೆ. ಅದು ದೇಶದ ಎಲ್ಲರ ಸಂವಹನ ಭಾಷೆಯಲ್ಲ. ಆದರೆ ಆ ವೃತ್ತದಲ್ಲಿ ಕೆಲವರು ಉರ್ದು ಭಾಷೆ ಬಳಸಿದ್ದನ್ನು ನೋಡಿ ಕೆಲವು ಹೋರಾಟಗಾರರು ಕಪ್ಪು ಮಸಿ ಬಳಸಿದ್ದು ಸರಿ. ಆದರೆ ಅದಕ್ಕೆ ಸ್ಥಳೀಯರ ವಿರೋಧವಾಯಿತು. ಆದರೆ ನರಸಿಂಹರಾಜ ಪೊಲೀಸ್ ಠಾಣೆಯ ಕಾನೂನು ಸುವ್ಯವಸ್ಥೆಯ ಅಧಿಕಾರಿಗಳಿಗೆ ದ್ವಿಭಾಷಾ ಸೂತ್ರದ ಅರಿವಿಲ್ಲವೇ? ಇರಲಿ ನಾವು ಎಲ್ಲಾ ಭಾಷೆಗೆ ಗೌರವ ಕೊಡೋಣ ಅಲ್ಲಿ ಉರ್ದು ಇದ್ದರೆ ಕೆ.ಆರ್. ಕ್ಷೇತ್ರದಲ್ಲಿನ ನಗರ ಪಾಲಿಕೆ ನಾಮಫಲಕದಲ್ಲಿ ಕನ್ನಡದ ಜೊತೆ ಸಂಸ್ಕೃತ ಭಾಷೆಯಲ್ಲಿ ಬರೆಸುತ್ತೇವೆ. ಪಾಲಿಕೆ ಆಯುಕ್ತರು ಉತ್ತರ ಕೊಡಲಿ. ದ್ವಿಭಾಷಾ ಸೂತ್ರ ಎಲ್ಲರಿಗೂ ಅನ್ವಯವಾಗುವುದಾದರೆ ಅಲ್ಲಿ ಉರ್ದು ತೆಗೆದು ಕನ್ನಡದ ಕೆಳಗೆ ಆಂಗ್ಲ ಭಾಷೆ ಹಾಕಲಿ. ಇಲ್ಲವಾದಲ್ಲಿ ನಗರದ ಬಹುತೇಕ ಪ್ರದೇಶದಲ್ಲಿನ ಪಾಲಿಕೆ ನಾಮಫಲಕದಲ್ಲಿ ಕನ್ನಡದ ಜೊತೆಗೆ ಸಂಸ್ಕೃತದಲ್ಲಿ ಬರವಣಿಗೆ ಬರೆಸುತ್ತೇವೆ. ಶಂಕರ ಮಠದ ರಸ್ತೆಯಲ್ಲಿನ ಫಲಕ ಹಾಗೂ ಆರ್.ಟಿ.ಓ ಹತ್ತಿರದ ವೃತ್ತದ ಶ್ರೀಕಂಠಯ್ಯ ಅಯ್ಯರ್ ವೃತ್ತದ ಫಲಕದಲ್ಲಿ ಅದರ ಹೆಸರನ್ನು ಸಂಸ್ಕೃತದ ಪದ ಅಂಟಿಸಿ ಅಭಿಯಾನಕ್ಕೆ ಇತ್ತೀಚೆಗೆ ಚಾಲನೆ ನೀಡಲಾಯಿತು. ಮೈಸೂರಿನ ರಾಜ ಮಹಾರಾಜರು ಎಷ್ಟೋ ಕಾವ್ಯ, ಸಾಹಿತ್ಯ ಹಾಗೂ ಮೈಸೂರು ಸಂಸ್ಥಾನದ ನಾಡಗೀತೆಯಾಗಿದ್ದ ಕಾಯೋಶ್ರೀಗೌರಿ ಕರುಣಾಲಹರಿ ಕೂಡ ಸಂಸ್ಕೃತದಲ್ಲೇ ರಚಿಸಿದ್ದು ನಮ್ಮ ದೈವ ಭಾಷೆ ಸಂಸ್ಕೃತ ನಮ್ಮ ಅಸ್ಮಿತೆ. ಕನ್ನಡ ಎಂಬುದು ನಮ್ಮವಾದವಾಗಲಿದೆ.

–ಅರವಿಂದ್ ಶರ್ಮ, ಸಾಮಾಜಿಕ ಚಳವಳಿಗಾರರು, ಮೈಸೂರು

ಮೈಸೂರು ಮತ್ತೆ ಸ್ವಚ್ಛ ನಗರಿ ನಂ.1 ಆಗಲು ಸಹಕರಿಸಿ

ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆಯು ನಗರದ ಎಲ್ಲಾ ವಾರ್ಡ್‌ಗಳಲ್ಲೂ ಮೂಲದಿಂದಲೇ ಅಂದರೆ ಮನೆ–ಮನೆಗಳಲ್ಲೇ ಹಸಿ ಹಾಗೂ ಒಣ ಕಸ ವಿಂಗಡಣೆ ಮಾಡಿ, ಕಸ ಸಂಗ್ರಹಿಸುತ್ತಿರುವುದು ಸ್ವಾಗತಾರ್ಹ ಕ್ರಮ.

ಪಾಲಿಕೆಯ ಸಿಬ್ಬಂದಿ ಹಾಗೂ ಪೌರ ಕಾರ್ಮಿಕರ ಜೊತೆಗೂಡಿ ಮನೆ ಮನೆಗೆ ತೆರಳಿ ಜನರಿಗೆ ಕಸ ವಿಂಗಡಣೆ ಬಗ್ಗೆ ಅರಿವು ಮೂಡಿಸಿ ಅದರಿಂದಾಗುವ ಪ್ರಯೋಜನಗಳನ್ನು ಮನದಟ್ಟು ಮಾಡುತ್ತಿದ್ದಾರೆ. ದೈನಂದಿನ ಕೆಲಸ ಕಾರ್ಯಗಳೊಂದಿಗೆ ಪೌರ ಕಾರ್ಮಿಕರ ಈ ಕಾರ್ಯದಲ್ಲಿ ಕೈಜೋಡಿಸಿರುವುದು ನಿಜಕ್ಕೂ ಹೆಮ್ಮೆಯ ವಿಚಾರ. ಹಾಗೆಯೇ ಪ್ರತಿ ಮನೆಯಲ್ಲೂ ತಪ್ಪದೇ ಕಸ ವಿಂಗಡಣೆ ಮಾಡುವ ಮೂಲಕ ಮತ್ತೆ ಮೈಸೂರು ನಂಬರ್ ಒನ್ ಸ್ವಚ್ಛ ನಗರವಾಗಲು ಸಹಕರಿಸಬೇಕಿದೆ.

ನಗರ ಪಾಲಿಕೆಯು ಒಂದು ದಿನವೂ ತಪ್ಪದಂತೆ ಮನೆ ಮನೆ ಕಸ ಸಂಗ್ರಹಿಸುವುದಕ್ಕೆ ತಪ್ಪದೇ ಕ್ರಮ ವಹಿಸಬೇಕು. ಏಕೆಂದರೆ ಹಿಂದೆ ಪ್ರತಿ ವಾರ್ಡ್‌ನಲ್ಲೂ ಹಲವೆಡೆ ಕಸದ ಡಬ್ಬಿಗಳನ್ನು ಇಡುತ್ತಿದ್ದರು. ಆದರೆ ಅದರಲ್ಲಿ ಹಸಿ ಮತ್ತು ಒಣ ಕಸ ಮಿಶ್ರಣವಾಗುತ್ತಿದ್ದ ಕಾರಣ ಆ ಡಬ್ಬಿಗಳನ್ನು ತೆರವು ಮಾಡುವುದರ ಜೊತೆಗೆ ಸಾರ್ವಜನಿಕ ಸ್ಥಳದಲ್ಲಿ ಕಸ ಹಾಕಿದರೆ ದಂಡ ವಿಧಿಸುವ ಎಚ್ಚರಿಕೆಯನ್ನೂ ನೀಡಲಾಗಿದೆ. ಇದರಿಂದಾಗಿ ಕಸ ಸಂಗ್ರಹಿಸುವ ಆಟೋ ಬರದಿದ್ದಾಗ ಅನಿವಾರ್ಯವಾಗಿ ಮನೆಯಲ್ಲೇ ಕಸ ಸಂಗ್ರಹಿಸಿಟ್ಟುಕೊಳ್ಳಬೇಕಿದೆ. ಒಂದು ದಿನದಲ್ಲೇ ಆ ಕಸ ಕೊಳೆತು ವಾಸನೆ ಬರುವುದರ ಜೊತೆಗೆ ಸೊಳ್ಳೆ ಉತ್ಪತ್ತಿಯಾಗಿ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಹಾಗಾಗಿ ಹಿಂದಿನಂತೆ ಒಂದೇ ಸ್ಥಳದಲ್ಲಿ ಹಸಿ ಹಾಗೂ ಒಣ ಕಸ ಸುರಿಯಲು ಎರಡು ಪ್ರತ್ಯೇಕ ಡಬ್ಬಿಗಳ ವ್ಯವಸ್ಥೆ ಮಾಡುವ ಬಗ್ಗೆ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂಬುದು ನನ್ನ ಮನವಿ.

–ಎಂ.ಕೆ. ಕಿರಣ್, ಟೆಲಿಕಾಂ ಕಾಲೋನಿ, ಉದಯಗಿರಿ, ಮೈಸೂರು.

ತಂಬಾಕುಯುಕ್ತ ಉತ್ಪನ್ನಗಳನ್ನು ನಿಷೇಧಿಸಿ



ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ, ಟೂತ್ ಪೇಸ್ಟ್‌ಗಳಲ್ಲಿ ತಂಬಾಕು ಮತ್ತು ನಿಕೋಟಿನ್ ಇದ್ದು, ಇದರ ಸೇವನೆಯಿಂದ ಹಲವು ಮಕ್ಕಳ ಸಾವಿನ ಘಟನೆಗಳು ವರದಿಯಾಗಿವೆ. ಇಂತಹ ಘಟನೆಗಳನ್ನು ಸರ್ಕಾರ ತುರ್ತು ಕ್ರಮಗಳೊಂದಿಗೆ ತಡೆಯಲು ಕಟಿಬದ್ಧವಾಗಬೇಕು. ತಂಬಾಕು ಮತ್ತು ನಿಕೋಟಿನ್ ಟೂತ್ ಪೇಸ್ಟ್‌ಗಳಲ್ಲಿ ಸೇರಿಸುವುದರಿಂದ, ಮಕ್ಕಳಿಗೆ ದೀರ್ಘಕಾಲಿಕ ದೈಹಿಕ ಸಮಸ್ಯೆಗಳು, ಶಾರೀರಿಕ ಮತ್ತು ಮಾನಸಿಕ ಪರಿಣಾಮಗಳು, ಹೃದಯ ಸಂಬಂಧಿತ ಕಾಯಿಲೆಗಳನ್ನು, ರಕ್ತದೊತ್ತಡ ಹೆಚ್ಚುವಿಕೆ ಮತ್ತು ಪ್ರಾಣಹಾನಿ ಉಂಟಾಗಬಹುದು ಎಂಬುದು ವರದಿ.

ತಂಬಾಕು ಟೂತ್ ಪೇಸ್ಟ್‌ಗಳನ್ನು ನಿಯಂತ್ರಿಸಲು ಸರಕಾರವು ತಕ್ಷಣ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಸಾಧ್ಯವಾದರೆ ತಂಬಾಕು ಮತ್ತು ನಿಕೋಟಿನ್ ಟೂತ್ ಪೇಸ್ಟ್‌ಗಳನ್ನು ನಿಷೇಧಿಸಬೇಕು ಇಲ್ಲವಾದಲ್ಲಿ ಕನಿಷ್ಠ ಪಕ್ಷ ಸೂಕ್ತ ನಿಯಮಾವಳಿಗಳನ್ನು ರೂಪಿಸಬೇಕು. ಇಂತಹ ಉತ್ಪನ್ನಗಳನ್ನು ತಯಾರಿಸುವ ಕಂಪನಿಗಳಿಗೆ ಕಠಿಣ ದಂಡವನ್ನು ವಿಧಿಸುವ ಮೂಲಕ, ಮಕ್ಕಳ ಆರೋಗ್ಯವನ್ನು ರಕ್ಷಿಸಲು ಮತ್ತು ಸಾರ್ವಜನಿಕ ಜಾಗೃತಿ ಮೂಡಿಸಲು ಪ್ರಯತ್ನಿಸಬೇಕು.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಕೋಲ್ಮಿಂಚಿನ ದಾರಿ...!



“ ಒಮ್ಮೆ ನಮ್ಮ ಸುತ್ತಲೂ ಕಣ್ಣಾಡಿಸಿ. ಅದೆಷ್ಟು ಮಂದಿ ಅಂಗವಿಹೀನರು ಇದ್ದಾರೆ ಗಮನಿಸಿ. ಆಗ ನಮಗೆ ಸಿಕ್ಕಿರುವ ಈ ಸುಸ್ಥಿತಿಯ ದೇಹದ ಬೆಲೆಯು ಅರಿವಾಗುತ್ತದೆ. ಎರಡು ಕಾಲು, ಎರಡು ಕೈಗಳು, ಪ್ರಪಂಚವನ್ನು ನೋಡಿ ಆನಂದಿಸಲು ದೇವರು ನೀಡಿರುವ ಅತ್ಯಮೂಲ್ಯವಾದ ಕಣ್ಣುಗಳು ಇದಕ್ಕಿಂತ ದೊಡ್ಡ ವರ ಮತ್ತೇನಾದರೂ ಇರಲು ಸಾಧ್ಯವೇ? ಒಂದು ನಿಮಿಷ ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿ ನಡೆದಾಡಲು ಪ್ರಯತ್ನಿಸಿ, ಆಗ ಅದರ ಅನುಭವ ಎಂತಹುದು ಎಂದು ಅರಿವಾಗುತ್ತದೆ.

ಕ್ರೈಸ್ತ ಧರ್ಮದಲ್ಲಿ ಕೌಂಟ್ ದಿ ಬ್ಲೆಸಿಂಗ್ಸ್ ಎಂಬ ಒಂದು ಹೇಳಿಕೆ ಇದೆ. ಅಂದರೆ, ಭಗವಂತ ನಮಗೆ ನೀಡಿರುವ ಕೃಪೆಗಳನ್ನು ಎಣಿಸು ಎಂಬುದು ಮೇಲ್ನೋಟಕ್ಕೆ ಅದರ ಅರ್ಥ. ಆದರೆ, ಇದರ ಒಳಾರ್ಥ ಇನ್ನೂ ದೊಡ್ಡದಿದೆ. ನಮ್ಮ ದಾಸರು ಇದನ್ನು ಮತ್ತಷ್ಟು ಸ್ಫುಟವಾಗಿ ವಿವರಿಸಿದ್ದಾರೆ. 'ಏನ ಬೇಡಲಿ ನಾನಿನ್ನ ಬಳಿ ಬಂದು ನೀನಿತ್ತ ಸೌಭಾಗ್ಯ ಅಖಿಲವಾಯ್ತೆನಗೆ' ಎನ್ನುವಾಗ ಆ ಭಗವಂತ ನಮಗೆ ನೀಡಿರುವ ಸಕಲ ಸವಲತ್ತುಗಳ ಬಗ್ಗೆ ಅತ್ಯಂತ ಕೃತಜ್ಞತೆ ಅಡಗಿದೆ.

ಮೌನವಾಗಿ ಕುಳಿತು, ಆ ದೇವ ನಮಗೆ ಏನೇನು ವರಗಳನ್ನು ಕೊಟ್ಟು ಕಳುಹಿಸಿದ್ದಾನೆ ಎಂದು ಯೋಚಿಸಿ. ಪ್ರೀತಿಯಿಂದ ಸಾಕಿ ಸಲಹಿದ ತಂದೆ ತಾಯಿ, ಒಡಹುಟ್ಟಿದವರು, ಒಡನಾಡಿಗಳು, ವಿದ್ಯೆ ಕಲಿಸಿದ ಗುರುಗಳು, ಹೊತ್ತು ಹೊತ್ತಿಗೆ ಸಿಗುವ ಆಹಾರ, ಆರೋಗ್ಯ, ತಲೆಯ ಮೇಲೊಂದು ಸೂರು, ವಸ್ತ್ರ ಹೀಗೆ ಪಟ್ಟಿ ಮಾಡುತ್ತಾ ಹೋದಂತೆ ನಮ್ಮ ಗೊಣಗುವ ಸ್ವಭಾವದ ಬಗ್ಗೆ ನಮಗೇ ನಾಚಿಕೆ ಆಗುವುದರಲ್ಲಿ ಸಂದೇಹವಿಲ್ಲ. ಆ ದೇವನ ಮುಂದೆ ಕೈ ಮುಗಿದು ನಿಂತಾಗ, ಅವನು ನಮಗೆ ನೀಡಿರುವ ಅದ್ಭುತ ವರಗಳಿಗೆ ಧನ್ಯವಾದ ಹೇಳುವುದಕ್ಕಿಂತ ನಾವು ಅದಿಲ್ಲ, ಇದಿಲ್ಲ, ಅದನ್ನು ಕೊಡು, ಇದನ್ನು ಕೊಡು ಎಂದು ಬೇಡುವುದೇ ಹೆಚ್ಚು ಎಂದು ಅನ್ನಿಸುವುದಿಲ್ಲವೇ?

ಒಮ್ಮೆ ನಮ್ಮ ಸುತ್ತಲೂ ಕಣ್ಣಾಡಿಸಿ. ಅದೆಷ್ಟು ಮಂದಿ ಅಂಗವಿಹೀನರು ಇದ್ದಾರೆ ಗಮನಿಸಿ. ಆಗ ನಮಗೆ ಸಿಕ್ಕಿರುವ ಈ ಸುಸ್ಥಿತಿಯ ದೇಹದ ಬೆಲೆಯ ಅರಿವಾಗುತ್ತದೆ. ಎರಡು ಕಾಲು, ಎರಡು ಕೈಗಳು, ಪ್ರಪಂಚವನ್ನು ನೋಡಿ ಆನಂದಿಸಲು ದೇವರು ನೀಡಿರುವ ಅತ್ಯಮೂಲ್ಯವಾದ ಕಣ್ಣುಗಳು ಇದಕ್ಕಿಂತ ದೊಡ್ಡ ವರ ಮತ್ತೇನಾದರೂ ಇರಲು ಸಾಧ್ಯವೇ? ಒಂದು ನಿಮಿಷ ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿ ನಡೆದಾಡಲು ಪ್ರಯತ್ನಿಸಿ, ಆಗ ಅದರ ಅನುಭವ ಎಂತಹುದು ಎಂದು ಅರಿವಾಗುತ್ತದೆ.

ಇತ್ತೀಚೆಗೆ ಸಾಮಾಜಿಕ ತಾಣ ಒಂದರಲ್ಲಿ ಕಣ್ಣಾಡಿಸುತ್ತಿದ್ದಾಗ, ಒಂದು ಪುಸ್ತಕದ ಬಗೆಗೆ ಬರೆದಿದ್ದ ಕೆಲವು ವಾಕ್ಯಗಳು ನನ್ನ ಗಮನ ಸೆಳೆದವು. ಕೂಡಲೇ ಆ ಪುಸ್ತಕವನ್ನು ತರಿಸಿಕೊಂಡು ಓದಿದೆ. ಓದಿದೆ ಅನ್ನುವುದಕ್ಕಿಂತ ಅದು ಓದಿಸಿಕೊಂಡು ಹೋಯಿತು ಎಂದು ಹೇಳುವುದು ಹೆಚ್ಚು ಸೂಕ್ತ. ಓದಿ ಮುಗಿಸಿದಾಗ ನನ್ನ ಕಣ್ಣಿನಿಂದ ಹನಿಗಳು ಜಾರಿದ್ದವು.

ಬದುಕಿನಲ್ಲಿ ಹದಿನೆಂಟು ವಸಂತಗಳನ್ನು ನೋಡಿ, ಎಲ್ಲರಂತೆ ಬದುಕು ಸಾಗಿಸಿದ್ದ ವ್ಯಕ್ತಿಗೆ ಒಂದು ದಿನ ತನ್ನ ಎರಡೂ ಕಣ್ಣುಗಳು ಕಳೆದುಹೋಗಿವೆ ಎಂಬುದು ಅರಿವಿಗೆ ಬಂದಾಗ, ಆತನ ಮನಃಸ್ಥಿತಿ ಹೇಗಾಗಿರಬಹುದು ಎಂಬುದನ್ನು ಊಹಿಸಲು ಸಾಧ್ಯವೇ? ಈಗ ತನ್ನ ಮುಂದೆ ಇರುವುದು ಬರೀ ಕತ್ತಲು ಎಂಬ ಆ ಆಘಾತವನ್ನು ಎದುರಿಸುವ, ಮತ್ತೆ ಬದುಕನ್ನು ಕಟ್ಟಿಕೊಳ್ಳುವ ಕ್ಷಮತೆ ಎಷ್ಟು ಜನರಲ್ಲಿ ಇದ್ದೀತು ದೃಷ್ಟಿಹೀನನಾದರೂ ತನ್ನ ಕಾಲ ಮೇಲೆ ತಾನು ನಿಲ್ಲಬೇಕೆಂಬ, ಮತ್ತೊಬ್ಬರಿಗೆ ಎಂದೂ ಹೊರೆ ಆಗುವುದಿಲ್ಲ ಎಂಬ ನಿರ್ಧಾರ ಕೈಗೊಳ್ಳುವ ಛಲವಂತನ ಬದುಕಿನ ಕತೆಯನ್ನು ಆತ ನಿರ್ಲಿಪ್ತವಾಗಿ, ಯಾವ ಉತ್ಪ್ರೇಕ್ಷೆ ಇಲ್ಲದೆ ಹೇಳುತ್ತಾ ಹೋಗಿದ್ದಾರೆ ಲೇಖಕ ಸಿದ್ದೇಶ್ ಕೆ.

ಚಿತ್ರದುರ್ಗ ಜಿಲ್ಲೆಯ ಹಿರೇಗುಂಟನೂರಿನವರಾದ ಸಿದ್ದೇಶ್ ಅವರ ಮೇಲೆ ಹಠಾತ್ತನೆ ಅಂಧತ್ವ ಅಡರಿದಾಗ, ಸಹಜವಾಗಿಯೇ ಉಂಟಾಗುವ ನೋವು, ಹತಾಶೆ, ಮುಂದೇನು ? ಎಂಬುದೆಲ್ಲವನ್ನೂ ದಾಟಿ, ಬದುಕನ್ನು ಎದುರಿಸುವ ಛಲವನ್ನು ತಮ್ಮದಾಗಿಸಿಕೊಂಡು ಮುಂದಡಿ ಇಡುತ್ತಾರೆ. ತನ್ಮೂಲಕ ಅಂಗವಿಹೀನರೆಲ್ಲರಿಗೂ ಸಾಂತ್ವನದ ಆಚೆ, ಒಂದು ಧೈರ್ಯದ ಸಂದೇಶವನ್ನು ನೀಡುತ್ತಾರೆ. ಅಂಗವೈಕಲ್ಯಕ್ಕೆ ಯಾರೂ ಧೃತಿಗೆಡಬೇಕಿಲ್ಲ, ನಮ್ಮೊಳಗೆ ಛಲವಿದ್ದರೆ ದಾರಿಗಳು ನೂರಾರಿವೆ ಎಂಬ ಧೈರ್ಯವನ್ನು ನನ್ನ ಕತೆ, ಅದರ ಅಗತ್ಯವಿದ್ದವರಿಗ ಕೊಡಲಿ ಎಂಬುದು ನನ್ನ ಆಸೆ ಎಂಬುದು ಅವರದೇ ಮಾತು.

ಇನ್ನು ತನ್ನ ಮುಂದಿನ ಬದುಕಿನ ಉದ್ದಕ್ಕೂ ಇರುವುದು ಕೇವಲ ಕತ್ತಲು... ಕತ್ತಲು... ಕತ್ತಲು... ಎಂಬ ಕಠೋರ ವಾಸ್ತವಿಕತೆಯನ್ನು ಅರಗಿಸಿಕೊಳ್ಳುತ್ತಿರುವಾಗ ಅವರ ಮನೆಯವರಿಗೂ ಖಿನ್ನತೆ ಆಗದಿರುತ್ತದೆಯೇ ನನ್ಮಗನಿಗೆ ಏನಾಗಿದೆ ಅಂತ ಹೀಗೆ ಕೂತಿದ್ದೀರಾ ಅವನ ಆಯುಷ್ಯ ಗಟ್ಟಿಯಾಗಿದೆ. ಅವನಿಗೆ ಏನೂ ಆಗಿಲ್ಲ ಎಂಬ ಅದ್ಭುತ ಧೈರ್ಯದ ಮಾತುಗಳನ್ನಾಡಿದವರು ಅವರ ತಾಯಿ. ಆ ಧೈರ್ಯದ ಒಂದಂಶವನ್ನು ಅಮ್ಮ ತನ್ನ ರಕ್ತ ಮಾಂಸಗಳೊಂದಿಗೆ ಸೇರಿಸಿ ನನಗೂ ಧಾರೆ ಎರೆದಿದ್ದಳು ಎನ್ನುವ ಸಿದ್ದೇಶರದು ಮುಂದಿನದು ಹೋರಾಟದ ಹಾದಿ.

ಮನೆಯವರ ಮತ್ತು ಗೆಳೆಯರ ಸಹಾಯವಂತೂ ಇದ್ದೇ ಇದ್ದಿತು. ನರಗಳ ದೌರ್ಬಲ್ಯದಿಂದ ಉಂಟಾಗಿದ್ದ ಅಂಧತ್ವದ ಕಾರಣದಿಂದ ಅವರ ಕಣ್ಣುಗಳು ಸಾಮಾನ್ಯವಾಗಿ ಎಲ್ಲರಿಗೂ ಇರುವಂತೆಯೇ ಇದ್ದವು. ಅವರು ಕಪ್ಪು ಕನ್ನಡಕಗಳನ್ನು ಧರಿಸುತ್ತಿರಲಿಲ್ಲ. ಇದರಿಂದ ಅದೆಷ್ಟು ಜನ ಅವರನ್ನು ನಾಟಕ ಮಾಡುತ್ತಾನೆ ಎಂಬ ಮಾತುಗಳಿಂದ ತಿವಿದಿದ್ದರು !ವಿಕಲತೆಯ ಕಾರಣಕ್ಕೆ ಅವರು ಸದಾ ಎದುರಿನವರಿಗೆ ವಿಧೇಯರಾಗಿಯೇ ಇರಬೇಕು ಎಂದು ನಿರೀಕ್ಷಿಸುವವರೇ ಹೆಚ್ಚು ಎನ್ನುವ ಸಿದ್ಧೇಶ್ ಅವರ ಮಾತುಗಳು ನಮ್ಮನ್ನು ಅದೆಷ್ಟು ಕುಬ್ಜರನ್ನಾಗಿಸುತ್ತವೆ.

ಈಗ ಅವರ ಆಪ್ತ ಸಂಗಾತಿ ಎಂದರೆ ರೇಡಿಯೊ. ಅದರಲ್ಲಿ ಒಮ್ಮೆ ಕೇಳಿದ ಅಭಿಮನ್ಯುವಿನ ವಾಚನ–ವ್ಯಾಖ್ಯಾನದಿಂದ ಅಷ್ಟು ಅಂಗಗಳನ್ನು ಕಳೆದು ಕೊಂಡರೂ ಶತ್ರುಗಳೊಡನೆ ಹೋರಾಡಿದ ಅವನ ಕೆಚ್ಚು ಮನಸ್ಸಿಗೆ ಸ್ಫೂರ್ತಿಯನ್ನು ನೀಡುತ್ತದೆ. ಕೇವಲ ಕಣ್ಣಿನ ದೃಷ್ಟಿ ಕಳೆದುಕೊಂಡಿರುವ ನಾನೇಕೆ ಎದೆಗುಂದಬೇಕು ಸರಿಯಾಗೇ ಇರುವ ನನ್ನ ಉಳಿದ ಅಂಗಗಳು, ಬುದ್ಧಿ ಶಕ್ತಿ ಮತ್ತು ಇಂದ್ರಿಯಗಳ ಸಾಮರ್ಥ್ಯದಿಂದ ಯಾಕೆ ಬದುಕಬಾರದು ಎಂಬ ಆಲೋಚನೆ ತಲೆ ಹೊಕ್ಕಿದ್ದೇ ತಡ, ಜೀವನವನ್ನು ಎದುರಿಸುವ ಛಲದಿಂದ ಮುನ್ನಡಿ ಇಡುತ್ತಾರೆ. ಕತ್ತಲನ್ನು ದೂಷಿಸಿ ಫಲವಿಲ್ಲ. ಇನ್ನೇನಿದ್ದರೂ ಬೆಳಕಿನ ದಾರಿ ಹುಡುಕಿ ನಡೆಯಬೇಕು. ಏನೇ ಕಷ್ಟ ಕೊಟ್ಟರೂ ಅದನ್ನು ಎದುರಿಸುವ ಶಕ್ತಿಯನ್ನೂ ಕೊಡಲು ಮರೆಯಬೇಡ ಎಂಬುದೊಂದೇ ದೇವರಲ್ಲಿ ಅವರ ಪ್ರಾರ್ಥನೆ ಆಗಿತ್ತು. ಮೊದಲನೆಯದಾಗಿ ಅಂಧರ ಸಂಸ್ಥೆಯೊಂದು ನಡೆಸಲಿದ್ದ ಒಂದು ವರ್ಷದ ಪುನಶ್ಚೇತನ ಮತ್ತು ಮೂಲ ಶಿಕ್ಷಣ ತರಬೇತಿಗೆ ಅವರು ಸೇರುತ್ತಾರೆ. ಅಲ್ಲಿ ಬಿಳಿಕೋಲನ್ನು ಹಿಡಿದು ಸುರಕ್ಷಿತವಾಗಿ ನಡೆದಾಡುವ ತರಬೇತಿಯನ್ನು ಪಡೆಯುತ್ತಾರೆ. ಈ ಒಂದು ತಿಂಗಳ ತರಬೇತಿಯು ಅವರಲ್ಲಿ ಸಾಂಪ್ರದಾಯಿಕ ಶಿಕ್ಷಣವನ್ನು ಪಡೆಯಬೇಕೆಂಬ ಆಸೆಗೆ ದಾರಿ ಮಾಡಿಕೊಡುತ್ತದೆ. ಹತ್ತನೆಯ ತರಗತಿಯಲ್ಲಿ ನಪಾಸಾಗಿದ್ದ ಸಿದ್ದೇಶ್, ದೃಷ್ಟಿ ಹೋದ ನಂತರ ಪಿಯುಸಿಯಲ್ಲಿ ಶೇಕಡಾ 72ಕ್ಕೂ ಹೆಚ್ಚು ಅಂಕವನ್ನು ಗಳಿಸುತ್ತಾರೆ. ಮಾತ್ರವಲ್ಲ, ಓದು ಅವರ ನಿರಂತರ ಸಂಗಾತಿ ಆಗುತ್ತದೆ. ತಂಗಿ, ಗೆಳೆಯರಿಂದ ಪಾಠಗಳನ್ನು ಓದಿಸಿ, ಟೇಪ್‌ರೆಕಾರ್ಡ್‌ಗಳಲ್ಲಿನ ಧ್ವನಿ ಮುದ್ರಿತ ಪಾಠಗಳು, ಎಲ್ಲ ಸಹಕಾರವೂ ಸೇರುತ್ತದೆ.

ಮುಂದೆ ಅವರು ಬ್ರೈಲ್ ಲಿಪಿಯನ್ನೂ ಕಲಿಯುತ್ತಾರೆ. ಅಂಧ ಮಕ್ಕಳ ಕಲಿಕೆಗಾಗಿ ಇದ್ದ ಶಿಕ್ಷಕರ ತರಬೇತಿಯನ್ನೂ ಮಾಡುತ್ತಾರೆ. ಮುಂದೆ ಕೆಲಸ ಹುಡುಕಲು ಅವರು ಪರದಾಡಿದ್ದು. ಮನೆಯಲ್ಲಿದ್ದಾಗ ತೆನೆ ಮುರಿಯುವ, ಕಾಳು ಬೇರ್ಪಡಿಸುವ, ಹೊಟ್ಟು ತೂರಲು ಸಹಾಯ ಮಾಡಿದ, ಮನೆಗೆ ಸೈಕಲ್ಲಿನ ಮೇಲೆ ಆರೆಂಟು ಕೊಡಗಳನ್ನು ಇಳಿಬಿಟ್ಟು ನೀರು ತುಂಬಿಸಿ ತಂದು ಹಾಕುವ ಇತ್ಯಾದಿ ಕೆಲಸಗಳಲ್ಲಿ ಮನೆಯವರಿಗೆ ನೆರವು ನೀಡುತ್ತಿದ್ದರು. ಸಹಾನುಭೂತಿಗಿಂತ ಸಮಾನರಂತೆ ನೋಡುವುದು ಎಂಥವರನ್ನೂ ಸ್ವಾವಲಂಬಿಗಳನ್ನಾಗಿಸಬಲ್ಲದು ಎಂಬುದು ಎಲ್ಲರೂ ನೆನಪಿನಲ್ಲಿಡಬೇಕಾದ ಮಾತುಗಳು.

ಅಂಧ ಶಿಕ್ಷಕರನ್ನು ಸರ್ಕಾರದ ಶಾಲೆಗಳು ನೇಮಕಾತಿ ಮಾಡುವ ನಿಟ್ಟಿನಲ್ಲಿ ಅದರ ವಿರುದ್ಧ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಶಿಕ್ಷಕರ ತರಬೇತಿ ಕೇಂದ್ರದಲ್ಲಿ, ಸಂಪನ್ಮೂಲ ಶಿಕ್ಷಕನಾಗಿ, ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಲೇ ಪದವಿ ಮತ್ತು ಸ್ನಾತಕೋತ್ತರ ಓದನ್ನು ಪೂರೈಸಿ, ತಮ್ಮ ಮೆಚ್ಚಿನ ಪ್ರಾಧ್ಯಾಪಕ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಅವರ ಬದುಕಿನ ಗಾಥೆಯನ್ನು ಓದಿಯೇ ಅನುಭವಿಸಬೇಕು. ಪೋಲಿಯೋ ಪೀಡಿತ ಶ್ರೀದೇವಿಯವರೊಂದಿಗೆ ಅರ್ಥಪೂರ್ಣ ಬದುಕನ್ನು ನಡೆಸುತ್ತಿರುವ ಸಿದ್ಧೇಶ್ ಅವರಿಗೆ ಗೌರವದ ಒಂದು ನಮನ.



ಆರ್.ಪಿ. ಜಗದೀಶ್
ಹಿರಿಯ ಪತ್ರಕರ್ತರು,
ಮೊ: 98450 48051

ಸಕಾಲಿಕ

ಕಾಂಗ್ರೆಸ್–ಬಿಜೆಪಿ ಹೈಕಮಾಂಡ್ ಹಲ್ಲು ಕಿತ್ತ ಹಾವಿದ್ದಂತೆ!


ಮಲ್ಲಿಕಾರ್ಜುನ ಖರ್ಗೆ


ಸೋನಿಯಾ ಗಾಂಧಿ


ರಾಹುಲ್ ಗಾಂಧಿ


ಸಿದ್ದರಾಮಯ್ಯ


ಡಿ.ಕೆ. ಶಿವಕುಮಾರ್


ಬಿ.ಎಸ್.ಯಡಿಯೂರಪ್ಪ


ಬಿ.ವೈ.ವಿಜೇಯೇಂದ್ರ


ಹೆಚ್.ಡಿ. ದೇವೇಗೌಡ


ಹೆಚ್.ಡಿ.ಕುಮಾರಸ್ವಾಮಿ

“ ಎಐಸಿಸಿ ಅಧ್ಯಕ್ಷರು ಮೌನವಾಗಿದ್ದರೂ, ಎಕ್ಸ್‌ಟ್ರಾ ಪವರ್ ಪ್ರಯೋಗಿಸಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ರಾಜಣ್ಣನವರನ್ನು ಬಲಿ ತೆಗೆದುಕೊಂಡರು. ಅಲ್ಲಿಗೆ ಎಐಸಿಸಿ ಅಧ್ಯಕ್ಷರಿಗಿಂತ–ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬಲಶಾಲಿಗಳು ಎಂದಂತಾಯಿತು. ಅಂದರೆ ಹೆಸರಿಗೆ ಎಐಸಿಸಿಗೂ ಮೀರಿ ರಾಹುಲ್ ಪ್ರಶ್ನಾತೀತ ನಾಯಕ ಇದ್ದಂತೆ. ರಾಜ್ಯದಲ್ಲಿ ಕೆಪಿಸಿಸಿ ಅಧ್ಯಕ್ಷರ ಎಚ್ಚರಿಕೆ ಮೀರಿ ಶಾಸಕ ಡಾ. ಯತೀಂದ್ರ ಹಾಗೂ ಖರ್ಗೆ ಪುತ್ರ ಪ್ರಿಯಾಂಕ್ ಖರ್ಗೆ ದರ್ಪ ತೋರಿಸಿದ್ದಾರೆ. ಈ ಇಬ್ಬರ ಮೇಲೆ ಶಿಸ್ತು ಕ್ರಮವಿಲ್ಲ. ಈ ಇಬ್ಬರಿಗೆ ಏನು ಎಕ್ಸ್‌ಟ್ರಾ ಪವರ್ ಅರ್ಥವಾಗುತ್ತಿಲ್ಲ. ಅಪ್ಪಂದಿರ ಆಶೀರ್ವಾದವೇ ಇವರಿಗೆ ಅಭಯಾಸ್ತ್ರ.

ಕಾಂಗ್ರೆಸ್– ಬಿಜೆಪಿ ಎರಡೂ ಪಕ್ಷಗಳ ಹೈಕಮಾಂಡ್ ಹಲ್ಲು ಕಿತ್ತ ಹಾವಿದ್ದಂತೆ. ಬರೀ ಬುಸುಗುಟ್ಟುತ್ತವೆ ಅಷ್ಟೆ, ಈ ನಿಜಸ್ಥಿತಿ ಬಲ್ಲ ಎರಡೂ ಪಕ್ಷಗಳ ರಾಜ್ಯ ನಾಯಕರು ಹೈಕಮಾಂಡ್‌ಗೆ ಕ್ಯಾರೇ ಎನ್ನುತ್ತಿಲ್ಲ.

ಬಾಲವೇ ನಾಯಿಯನ್ನು ಅಲ್ಲಾಡಿಸುವ ಕಾಲ ಬಂತು ಎನ್ನುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ವಿರೋಧ ಪಕ್ಷವಾದ ಬಿಜೆಪಿಯ ವರಿಷ್ಠ ನಾಯಕ ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಪುತ್ರ ಬಿ.ವೈ. ವಿಜಯೇಂದ್ರ, ಜೊತೆಗೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಆಯಾ ಪಕ್ಷದ ವರಿಷ್ಠರನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ಮಾಡಿದ್ದಾರೆ.

ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ನಾಯಕರ ನಡುವಿನ ಗಾದಿ ಗುದ್ದಾಟ ಬೀದಿಗೆ ಬಂದು ನಿಂತಿದೆ. ಇವರು ಜನರ ಮುಂದೆ ನಗೆಪಾಟಲಿಗೆ ಗುರಿಯಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ತೆರೆ ಮರೆಯ ಜಟಾಪಟಿ ಜನರಿಗೆ ಮನರಂಜನೆಯನ್ನು ನೀಡುತ್ತಿದೆ. ಇನ್ನು ಮುಖ್ಯಮಂತ್ರಿ ಪುತ್ರ, ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಡಿ ಫ್ಯಾಕ್ಟೋ ಸಿಎಂ ಇದ್ದಂತೆ. ಹೈಕಮಾಂಡ್‌ನವರಂತೆ ಹೇಳಿಕೆ ನೀಡುತ್ತಾ ಅಪ್ಪನ ಕುರ್ಚಿ ಭದ್ರ ಮಾಡುವ ದುಸ್ಸಾಹಸಕ್ಕೆ ಇಳಿದಿದ್ದಾರೆ.

ಮತ್ತೊಂದೆಡೆ ಡಿಕೆಎಸ್ ಬ್ರದರ್ಸ್–ಮಾಜಿ ಸಂಸದ ಡಿ.ಕೆ.ಸುರೇಶ್ ಹಾಗೂ ಉಪಮುಖ್ಯಮಂತ್ರಿ ಶಿವಕುಮಾರ್, ಎದುರಾಳಿಗಳಿಗೆ ತಕ್ಕ ಟಾಂಗ್ ಕೊಡುತ್ತಿದ್ದಾರೆ. ಈ ನಡುವೆ ನಾನೇನು ಕಡಿಮೆ ಎನ್ನುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸುಪುತ್ರ ಪ್ರಿಯಾಂಕ್ ಖರ್ಗೆ ಎಲ್ಲಾ ವಿಚಾರದಲ್ಲಿ ಮೂಗು ತೂರಿಸುತ್ತಿದ್ದಾರೆ.

ಎದೆಯುಬ್ಬಿಸಿ, ಗಟ್ಟಿ ಧನಿಯಲ್ಲಿ ತಮಗೆ ಅನ್ನಿಸಿದ್ದನ್ನು ಯಾವ, ಯಾರ ಮುಲಾಜಿಗೂ ಒಳಗಾಗದೆ ತಮ್ಮದೇ ಪಕ್ಷದ ಸರ್ಕಾರ ಮತ್ತು ಹೊಸ ಡಿಮ್ಯಾಂಡ್ ಬಗ್ಗೆ ಬಹಿರಂಗವಾಗಿ ಮಾತನಾಡುತ್ತಿದ್ದ ಶಾಸಕ ಕೆ.ಎನ್. ರಾಜಣ್ಣ ಬಾಯಿ ರಾತ್ರೋರಾತ್ರಿ ಬಂದಾಯಿತು. ಅಷ್ಟೇ ಅಲ್ಲ ಅವರ ಮಂತ್ರಿ ಸ್ಥಾನಕ್ಕೂ ಕುತ್ತು ತರಲಾಯಿತು. ಆದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಕ್ಕೆ(ರಾಜಣ್ಣ) ತಲೆಬಾಗಿದರು.

ಎಐಸಿಸಿ ಅಧ್ಯಕ್ಷರು ಮೌನವಾಗಿದ್ದರೂ, ಎಕ್ಸ್‌ಟ್ರಾ ಪವರ್ ಪ್ರಯೋಗಿಸಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ರಾಜಣ್ಣನವರನ್ನು ಬಲಿ ತೆಗೆದುಕೊಂಡರು. ಅಲ್ಲಿಗೆ ಎಐಸಿಸಿ ಅಧ್ಯಕ್ಷರಿಗಿಂತ–ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬಲಶಾಲಿಗಳು ಎಂದಂತಾಯಿತು. ಅಂದರೆ ಹೆಸರಿಗೆ ಎಐಸಿಸಿಗೂ ಮೀರಿ ರಾಹುಲ್ ಪ್ರಶ್ನಾತೀತ ನಾಯಕ ಇದ್ದಂತೆ. ರಾಜ್ಯದಲ್ಲಿ ಕೆಪಿಸಿಸಿ ಅಧ್ಯಕ್ಷರ ಎಚ್ಚರಿಕೆ ಮೀರಿ ಶಾಸಕ ಡಾ. ಯತೀಂದ್ರ ಹಾಗೂ ಖರ್ಗೆ ಪುತ್ರ ಪ್ರಿಯಾಂಕ್ ಖರ್ಗೆ ದರ್ಪ ತೋರಿಸಿದ್ದಾರೆ. ಈ ಇಬ್ಬರ ಮೇಲೆ ಶಿಸ್ತು ಕ್ರಮವಿಲ್ಲ. ಈ ಇಬ್ಬರಿಗೆ ಏನು ಎಕ್ಸ್‌ಟ್ರಾ ಪವರ್ ಅರ್ಥವಾಗುತ್ತಿಲ್ಲ. ಅಪ್ಪಂದಿರ ಆಶೀರ್ವಾದವೇ ಇವರಿಗೆ ಅಭಯಾಸ್ತ್ರ.

ಹಾದಿ ಬೀದಿಯಲ್ಲಿ ಪಕ್ಷ ಹಾಗೂ ಸರ್ಕಾರದ ವಿರುದ್ಧ ಜನ ಮಾತನಾಡುತ್ತಿದ್ದಾರೆ. ಹೈ ಕಮಾಂಡ್ ಪದೇ ಪದೆ ಎಚ್ಚರಿಕೆ ನೀಡುತ್ತಿದ್ದರೂ ಅದಕ್ಕೆ ಯಾರೂ ಕವಡೆ ಕಾಸಿನ ಕಿಮ್ಮತ್ತು ನೀಡುತ್ತಿಲ್ಲ. ಆದರೂ ಕೈಕಮಾಂಡ್ ಕೈಕಟ್ಟಿ, ಕಣ್ಮುಚ್ಚಿ ಕುಳಿತಿರುವುದು ವಿಪರ್ಯಾಸ.

ರಾಜ್ಯ ನೂರಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಆದರೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಕುರ್ಚಿ ಕಿತ್ತಾಟದಲ್ಲಿ ತೊಡಗಿದ್ದಾರೆ. ಧರ್ಮಸಂಕಟದಲ್ಲಿ ಶಾಸಕರು ಅಡಕತ್ತರಿಗೆ ಸಿಕ್ಕು, ಅತ್ತ ಪುಲಿ– ಇತ್ತ ಜರಿ ಅನ್ನುವ ತ್ರಿಶಂಕು ಸ್ಥಿತಿಯಲ್ಲಿದ್ದಾರೆ.

ಸಿದ್ದರಾಮಯ್ಯ ಮುಖ್ಯಮಂತ್ರಿ ಕುರ್ಚಿ ಕೊಡಲ್ಲ ; ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಿಡೋದಿಲ್ಲ. ಹೀಗಾಗಿ ರಾಜ್ಯದ ಜನತೆ ಕಾಂಗ್ರೆಸ್‌ನ ಈ ಬೀದಿ ನಾಟಕವನ್ನು ನೋಡಿ ಅಸಹ್ಯಪಡುತ್ತಿದ್ದಾರೆ. ನುಡಿದಂತೆ ನಡೆಯುವ ಸರ್ಕಾರ ಎಂದು ಬೀಗುವ ಮುಖ್ಯಮಂತ್ರಿ ಸಿದ್ದರಾಮಯ್ಯ ಒಂದೆಡೆ, ಇನ್ನೊಂದೆಡೆ ಕೊಟ್ಟ ಮಾತಿನಂತೆ ನಡೆಯಿರಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಪಟ್ಟು ಹಾಕಿದ್ದಾರೆ. ಹೀಗಾಗಿ ಸಿಎಂ ಕುರ್ಚಿ ಅಲ್ಲಾಡ ತೊಡಗಿದೆ. ಮಾತೆತ್ತಿದರೆ ಸಾಕು ನಾವು ಹೈಮಾಂಡ್ ಹೇಳಿದಂತೆ ನಡೆಯುವ ಶಿಸ್ತಿನ ಸಿಪಾಯಿಗಳು ಎನ್ನುತ್ತಲೇ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಕುರ್ಚಿ ಬಿಡದೆ ಹಾಗೂ ಕುರ್ಚಿ ಹಿಡಿಯುವ ಪಣ ತೊಟ್ಟಿದ್ದಾರೆ. ಈ ನಡುವೆ ಯಾರು ಮೇಲುಗೈ ಸಾಧಿಸುತ್ತಾರೆ ಎಂಬುದು ಯಕ್ಷ ಪ್ರಶ್ನೆಯಾಗಿ ಕಾಡುತ್ತಿದೆ.

ಶಾಸಕರ ಸಂಖ್ಯಾಬಲ ಹಾಗೂ ಮುಖ್ಯಮಂತ್ರಿ ಪ್ರಭಾವ ನೋಡಿದರೆ ಮೇಲ್ನೋಟಕ್ಕೆ ಸಿದ್ದರಾಮಯ್ಯ ಗಟ್ಟಿಗ ಅನ್ನಿಸುತ್ತದೆ. ಆದರೆ, ಕಾಂಗ್ರೆಸ್‌ಗೆ ಬಂದು ಎಲ್ಲವನ್ನು ಅನುಭವಿಸಿರುವ ಸಿದ್ದರಾಮಯ್ಯ ಇನ್ನು ಸಾಕು ಎಂದು ಪದವಿ ತ್ಯಾಗ ಮಾಡದೆ ಭಂಡತನ ಪ್ರದರ್ಶನ ತಕ್ಕುದಲ್ಲ. ಡಿ.ಕೆ.ಶಿವಕುಮಾರ್ ಅವರ ಪಕ್ಷನಿಷ್ಠೆ, ಪಕ್ಷ ಸಂಘಟನೆ ಹಾಗೂ ಗಾಂಧಿ ಕುಟುಂಬಕ್ಕೆ ಮಾಡಿರುವ ತ್ಯಾಗ ನೆನೆದು ಕುರ್ಚಿ ದಾರಿ ಬಿಟ್ಟುಕೊಡುವುದು ಸೂಕ್ತವೆನ್ನಿಸುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮೊಂಡಾಟದ ಹಿಂದೆ ಅವರದೇ ಆದ ಗುಪ್ತ ಅಜೆಂಡಾ ಅಡಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅಲ್ಲದೆ ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಹುಬಲಿಯಂತೆ ಬೆಳೆದು ನಿಂತಿದ್ದಾರೆ. ಹೈಕಮಾಂಡೇ ತನ್ನನ್ನ ತಲೆ ಎತ್ತಿ ನೋಡುವಂತೆ ಮಾಡಿದ್ದಾರೆ. ಈ ನಡುವೆ ಹೈಕಮಾಂಡ್ ಮತ್ತು ಇಂದಿರಾ ಕುಟುಂಬದ ಬಲಗೈ ಭಂಟ, ಎಲ್ಲಾ ರೀತಿಯ ಮುಜುಗರಗಳನ್ನು ಸಹನಾ ಮೂರ್ತಿಯಂತೆ ತಾಳ್ಮೆಯಿಂದ ಸಹಿಸಿಕೊಂಡು ಡಿ.ಕೆ ಶಿವಕುಮಾರ್ ಕಾಯುತ್ತಿದ್ದಾರೆ. ಇವರ ಪರ ಜನಾಭಿಪ್ರಾಯ ಇದೆ ಎಂಬುದು ಕನ್ನಡಿಯಷ್ಟೇ ಸತ್ಯ.

ಈ ನಡುವೆ ಆಡಳಿತ ಕುಸಿದಿದೆ, ಖಜಾನೆ ಬರಿದಾಗಿದೆ ಸರ್ಕಾರದ್ದು ಎಲ್ಲಕ್ಕೂ ಒಂದೇ ಮಂತ್ರ ತೆರಿಗೆಯ ಬರೆ ಎಳೆಯುವುದು. ಜೊತೆಗೆ ವಸೂಲಿ ಸರ್ಕಾರ ಎಂಬ ಕೀರ್ತಿಗೆ ಪಾತ್ರವಾಗಿದೆ ಅಂತೂ ಜನರಿಗೆ ಮುಕ್ತಿ ಕಾಣದಾಗಿದೆ.

ಇನ್ನೂ ಬಿಜೆಪಿಯಲ್ಲಿ ಅಧಿಕಾರಕ್ಕಾಗಿ ಕಿತ್ತಾಟವಿಲ್ಲ ಎನ್ನುವಂತಿಲ್ಲ. ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರರ ಮುಂದುವರಿಕೆ ಇಲ್ಲವೇ ಖಾಯಂ ಎಂಬುದು ನೆನೆಗುದಿಗೆ ಬಿದ್ದಿದೆ. ಬಿಜೆಪಿ ಹೈಕಮಾಂಡ್ ಕೆಲವರ ಕೈಗೊಂಬೆಯಾಗಿದೆ. ಬಿ.ಎಸ್. ಯಡಿಯೂರಪ್ಪ ಅವರನ್ನು ಎದುರಿಸುವ ಶಕ್ತಿ ಯಾರಿಗಿದೆ ಹೇಳಿ! ಒಟ್ಟಾರೆ ರಾಜ್ಯದ ರಾಜಕೀಯ ಪರಿಸ್ಥಿತಿ ದೇಶದ ಮುಂದೆ ಹರಾಜಾಗಿದೆ.

ರಾಜ್ಯದಲ್ಲಿ ಆಡಳಿತ ಪಕ್ಷದ ಅಟ್ಟಹಾಸ ಎದುರಿಸುವ ಶಕ್ತಿ ಬಿಜೆಪಿಯಲ್ಲಿ ಕಾಣುತ್ತಿಲ್ಲ. ಇನ್ನೂ ಮೂರನೇ ಶಕ್ತಿಯಾದ ಜೆಡಿಎಸ್– ಆಟಕ್ಕುಂಟು ಲೆಕ್ಕಕ್ಕಿಲ್ಲ. ಅಪ್ಪ–ಮಗನ ರಾಜಕೀಯ ಶಕ್ತಿ ಕುಂದುತ್ತಿದೆ. ಪ್ರಧಾನಿ ಮೋದಿಯೇ ಇವರಿಗೆ ಶ್ರೀರಕ್ಷೆ.

ಯಾವುದೇ ಪಕ್ಷದ ಸರ್ಕಾರವಾಗಲೀ, ಇಂತಹ ಆಡಳಿತ ಬೇಕೇ ಎಂಬುದೇ ರಾಜ್ಯದ ಬಹುತೇಕ ಜನರ ಪ್ರಶ್ನೆ. ಯಾವ ಸುಖ–ಸಂತೋಷಕ್ಕೆ ಬೇಕಿದೆ ಇಂತಹ ಪ್ರಜಾಪ್ರಭುತ್ವ! ರಾಜ್ಯಕ್ಕೆ ಎಂತಹ ಹೀನಾಯ ಸ್ಥಿತಿ ಬಂತು. ಹೆಮ್ಮೆಯ ಕರ್ನಾಟಕ ತಲೆ ತಗ್ಗಿಸುವಂತಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಾಂಗ್ರೆಸ್ಸಿಗೆ ಯತೀಂದ್ರ ಹೈಕಮಾಂಡಾ: ವಿಜಯೇಂದ್ರ



ಬೆಂಗಳೂರು, ಡಿ.13– ಯತೀಂದ್ರ ಸಿದ್ದರಾಮಯ್ಯ ಐದು ವರ್ಷ ಕಾಲ ಸಿದ್ದರಾಮಯ್ಯ ಅವರೇ ಸಿಎಂ ಎಂದಿದ್ದಾರೆ. ರಾಹುಲ್, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಕಾಂಗ್ರೆಸ್ಸಿನ ಹೈಕಮಾಂಡೇ ಅಥವಾ ಯತೀಂದ್ರ ಸಿದ್ದರಾಮಯ್ಯ ಅವರೇ ಹೈಕಮಾಂಡ್ ಆಗಿದ್ದಾರಾ? ಎಂದು ಬಿಜೆಪಿ ರಾಜ್ಯಾಧ್ಯಕ್ಷ, ಶಾಸಕ ಬಿವೈ ವಿಜಯೇಂದ್ರ ಪ್ರಶ್ನಿಸಿದ್ದಾರೆ.

ಈ ಕುರಿತು ಇಂದು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಕುರ್ಚಿಗೆ ಪೈಪೋಟಿ ನಡೆಯುತ್ತಿದ್ದು, ಸದ್ಯ ಈ ಸಮಸ್ಯೆ ಬಗೆಹರಿಯುವುದಿಲ್ಲ. ಯಾವ ಪುರುಷಾರ್ಥಕ್ಕೆ ಅಧಿವೇಶನ ಮಾಡುತ್ತೀರಿ. ಸಾಧ್ಯವಾದರೆ ಇದನ್ನು ಮುಂದೂಡಿ ಎಂದು ತಿಳಿಸಿದ್ದೆ. ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ನಾಡಿನ ಕೃಷಿಕರು, ರೈತರ, ಬಡವರ, ನೇಕಾರರ ಸಮಸ್ಯೆ ಸೇರಿ ಜ್ವಲಂತ ಸಮಸ್ಯೆಗಳ ಚರ್ಚೆ ಆಗಬೇಕೆಂದು ಮುಖ್ಯಮಂತ್ರಿಗಳಿಗೆ ಅಧಿವೇಶನ ಆರಂಭಕ್ಕೂ ಮೊದಲೇ ಗಮನ ಸೆಳೆದಿದ್ದೆ ಎಂದು ಹೇಳಿದರು.

ಮುಖ್ಯಮಂತ್ರಿ ವಿಷಯದಲ್ಲಿ ಪೈಪೋಟಿ ಹೆಚ್ಚಾಗಿದೆ. ಸಿದ್ದರಾಮಯ್ಯ ಅವರು ಹೈಕಮಾಂಡ್ ಹೇಳಿದಂತೆ ಕೇಳುವುದಾಗಿ ಹೇಳುತ್ತಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಬೆಂಗಳೂರಿಗೆ ಬಂದಾಗ ಒಂದು ರೀತಿ ನಿಸ್ಸಹಾಯಕರಾಗಿ ಮಾತನಾಡಿ ಗಮನ ಸೆಳೆದರು. ಇವರ ಗೊಂದಲದಿಂದ ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣ ಕುಸಿದುಬಿದ್ದಿದೆ ಎಂದು ಆಕ್ಷೇಪಿಸಿದರು.

ನಾಯಕತ್ವ ಸಮಸ್ಯೆ ಪರಿಹರಿಸಿಕೊಂಡ ನಂತರವೇ ಅಧಿವೇಶನ ನಡೆಸಿ. ಆಗ ಮಾತ್ರ ರೈತರ ಸಮಸ್ಯೆ, ಎಲ್ಲ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಬಹುದೆಂದು ಹೇಳಿದ್ದೆವು. ಆಡಳಿತ ಪಕ್ಷ ಮತ್ತು ಸಚಿವರಿಗೆ ವಿಪಕ್ಷ ನಾಯಕರ ಮಾತನ್ನು ಆಲಿಸುವ ಮತ್ತು ಸಮಸ್ಯೆಗೆ ಸ್ಪಂದಿಸಬೇಕೆಂಬ ವ್ಯವಧಾನವೂ ಇಲ್ಲದೇ ಇರುವುದು ನಿಜವಾಗಲೂ ದುರ್ದೈವ ಎಂದು ಟೀಕಿಸಿದರು.

ಪರಸ್ಪರ ಕತ್ತಿ ಮಸೆಯುವ ಸಿಎಂ, ಡಿಸಿಎಂ: ಎರಡು ವರ್ಷಗಳಿಂದ ಒಗ್ಗಟ್ಟಿನ ಮಂತ್ರ ಜಪಿಸುತ್ತಿದ್ದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು, ಒಬ್ಬರಿಗೆ ಒಬ್ಬರು ಕತ್ತಿ ಮಸೆಯುತ್ತಿದ್ದಾರೆ. ಇದರ ಪರಿಣಾಮವಾಗಿ ರಾಜ್ಯದ ಮೇಲೆ ಆಗುತ್ತಿದೆ. ಮುಖ್ಯಮಂತ್ರಿಗಳ ವಿಚಾರ ಕಾಂಗ್ರೆಸ್ಸಿನ ಆಂತರಿಕ ವಿಚಾರವಲ್ಲ, ಅವರು ರಾಜ್ಯಕ್ಕೆ ಮುಖ್ಯಮಂತ್ರಿ ಎಂದು ವಿಶ್ಲೇಷಿಸಿದರು.

ಕಬ್ಬು ಬೆಳೆಗಾರರ ಸಮಸ್ಯೆ ಇತ್ಯರ್ಥ ಆಗಿಲ್ಲ: ರಾಜ್ಯದಲ್ಲಿ 54 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಬೆಳೆಯುತ್ತಿದ್ದಾರೆ. ಮೆಕ್ಕೆಜೋಳ ಬೆಳೆಗಾರರು ಖರೀದಿ ಕೇಂದ್ರ ಪ್ರಾರಂಭಕ್ಕೆ ಒತ್ತಾಯಿಸುತ್ತಿದ್ದಾರೆ. ಕೇಂದ್ರ ಸರ್ಕಾರ 2,400 ರೂ. ಬೆಂಬಲ ಬೆಲೆ ನಿಗದಿಪಡಿಸಿದರೂ ಸೂಕ್ತ ಸಮಯದಲ್ಲಿ ಖರೀದಿ ಕೇಂದ್ರ ಪ್ರಾರಂಭಿಸಿಲ್ಲ. ರೈತರು ಮೆಕ್ಕೆಜೋಳವನ್ನು 1,700– 1,600 ರೂ.ಗೆ ದಲ್ಲಾಳಿಗಳಿಗೆ, ಮಧ್ಯವರ್ತಿಗಳಿಗೆ ಮಾರಾಟ ಮಾಡುವ ಪರಿಸ್ಥಿತಿ ಬಂದಿದೆ. ಬೆಳೆ ಪರಿಹಾರವನ್ನು ಘೋಷಿಸಿ 3 ತಿಂಗಳಾದರೂ ಸಮರ್ಪಕವಾಗಿ ಕೊಟ್ಟಿಲ್ಲ. ಭೀಕರ ಮಳೆಯಿಂದ ರಾಜ್ಯದಲ್ಲಿ ರಸ್ತೆಗಳು ಗುಂಡಿಗಳಿಂದ ತುಂಬಿಕೊಂಡಿವೆ. ರಾಜ್ಯದಲ್ಲಿ ಅಭಿವೃದ್ಧಿ ಇಲ್ಲ, ಭ್ರಷ್ಟಾಚಾರ ಮಿತಿ ಮೀರಿದೆ. ರೈತರ ಸಂಕಷ್ಟಕ್ಕೆ ಸ್ಪಂದಿಸುತ್ತಿಲ್ಲ ಎಂದು ದೂರಿದರು.

ಶಾಸಕ ಯತ್ನಾಳ್ ವಿರುದ್ಧ ಮಾನನಷ್ಟ ಮೊಕದ್ದಮೆಗೆ ಚಿಂತನೆ

ಶಿವಮೊಗ್ಗ, ಡಿ.13– ಶಾಸಕ ಬಸನಗೌಡ ಪಾಟೀಲ ಯತ್ನಾಳ್ ನನ್ನ ವಿರುದ್ಧ ಪದೇ ಪದೇ ಸುಳ್ಳು ಆರೋಪಗಳ ಮಾಡುತ್ತಿದ್ದಾರೆ. ಅವರ ವಿರುದ್ಧ ರೂ. 1 ಇಲ್ಲವೇ ರೂ. 1 ಕೋಟಿ ಪರಿಹಾರ ಕೋರಿ ಮಾನನಷ್ಟ ಮೊಕದ್ದಮೆ ಹೂಡಲು ಚಿಂತನೆ ನಡೆಸಿದ್ದೇನೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಹಾಗೂ ವಿಜಯೇಂದ್ರ ಉಪಮುಖ್ಯಮಂತ್ರಿ ಆಗಲು ಯೋಜನೆ ನಡೆದಿದ್ದು, ಡಿ.ಕೆ.ಶಿವಕುಮಾರ್ ಅವರನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಳಿಗೆ ವಿಜಯೇಂದ್ರ ಕರೆದೊಯ್ದು ಚರ್ಚೆ ನಡೆಸಿದ್ದಾರೆ ಎಂಬ ಬಸನಗೌಡ ಪಾಟೀಲ ಯತ್ನಾಳ ಆರೋಪ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ವಿಜಯೇಂದ್ರ, ಯತ್ನಾಳ್ ಅವರಿಗೆ ನನ್ನ ಬಗ್ಗೆ ಮಾತನಾಡದಿದ್ದರೆ ಊಟ ಸೇರುವುದಿಲ್ಲ. ನನ್ನ ತಾಳ್ಮೆಗೂ ಮಿತಿ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಗಾಂಜಾ ಸೇರಿದಂತೆ ಡ್ರಗ್ಸ್ ಹಾವಳಿ ಮಿತಿಮೀರಿದೆ. ನೂರಾರು ಕೋಟಿ ಮೊತ್ತದ ಡ್ರಗ್ಸ್ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಈ ಡ್ರಗ್ಸ್ ಜಾಲದ ಬುಡಕ್ಕೆ ಹೋಗಿ ಅದರ ಹಿಂದೆ ಇರುವ ಪ್ರಭಾವಿ ಶಕ್ತಿಗಳನ್ನು ಮಟ್ಟಹಾಕುವ ಕೆಲಸ ಮಾಡಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು.

ರಾಜ್ಯದಲ್ಲಿ ಕುರ್ಚಿ ಗದ್ದಲದಲ್ಲಿ ಅಭಿವೃದ್ಧಿ ಕಾರ್ಯ ಹಾಗೂ ರೈತರ ಹಿತ ಕಡೆಗಣಿಸಲ್ಪಟ್ಟಿದೆ. ಯತೀಂದ್ರ ಸಿದ್ದರಾಮಯ್ಯ ಅವರೇ ಕಾಂಗ್ರೆಸ್‌ನ ಹೈಕಮಾಂಡ್ ಇಲ್ಲಾ ಸಿದ್ಧರಾಮಯ್ಯನವರೇ ಇರಬಹುದೇ ಎಂಬ ಸಂದೇಹ ಕಾಡುತ್ತಿದೆ ಎಂದು ವ್ಯಂಗ್ಯವಾಡಿದ ವಿಜಯೇಂದ್ರ, ಹೈಕಮಾಂಡ್ ರೀತಿ ವರ್ತಿಸುತ್ತಾ ಯತೀಂದ್ರ ಸಿಎಂ ಸ್ಥಾನದ ಬಗ್ಗೆ ಹೇಳಿಕೆ ನೀಡುತ್ತಿದ್ದಾರೆ. ಖಾಸಗಿಯಾಗಿ ಮಾತಾಡುವಾಗ ಸ್ವತಃ ಕಾಂಗ್ರೆಸ್ ಶಾಸಕರೇ ಯತೀಂದ್ರ ಅವರನ್ನು ಪಕ್ಷದ ಹೈಕಮಾಂಡ್ ಎಂದು ಕಾಲೆಳೆಯುತ್ತಾರೆ ಎಂದರು.

ಮೈಸೂರು ಜಿಲ್ಲೆಯಲ್ಲಿ ಅಪೌಷ್ಠಿಕ ಮಕ್ಕಳ ಸಂಖ್ಯೆ ಗಣನೀಯ ಇಳಿಕೆ

ಮೈಸೂರು, ಡಿ.13– ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ(NFHS–5) ವರದಿಯ ಪ್ರಕಾರ ಮೈಸೂರು ಜಿಲ್ಲೆಯಲ್ಲಿ ಗಣನೀಯ ಸಂಖ್ಯೆಯ ಮಕ್ಕಳು ಅಪೌಷ್ಟಿಕತೆಯಿಂದ ಸುಧಾರಿಸಿ, ಆರೋಗ್ಯವಂತರಾಗಿದ್ದಾರೆ.

ವರದಿ ಪ್ರಕಾರ ಜಿಲ್ಲೆಯಲ್ಲಿ ಶೇ.7.2 ರಷ್ಟಿದ್ದ ತೀವ್ರ ಅಪೌಷ್ಟಿಕ(SAM) ಮಕ್ಕಳ ಪ್ರಮಾಣ ಪ್ರಸ್ತುತ ಶೇ.0.21ಕ್ಕೆ ಹಾಗೂ ಸಾಧಾರಣ ಅಪೌಷ್ಟಿಕ(MAM) ಮಕ್ಕಳ ಪ್ರಮಾಣ ಶೇ.15.6ರಿಂದ ಶೇ.1.05ಕ್ಕೆ ಇಳಿಕೆಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳೆದ ನವೆಂಬರ್ ತಿಂಗಳಲ್ಲಿ ಆರು ತಿಂಗಳೊಳಗಿನ 90 ಮಕ್ಕಳು ತೀವ್ರ ಅಪೌಷ್ಟಿಕತೆ ಹಾಗೂ 137 ಮಕ್ಕಳು ಸಾಧಾರಣಾ ಅಪೌಷ್ಟಿಕತೆಯಿಂದ ಬಳಲುತ್ತಿರುವುದಾಗಿ ಗುರುತಿಸಿ, ಆ ಮಕ್ಕಳಿಗೆ ನಿಯಮಿತ ಆರೋಗ್ಯ ತಪಾಸಣೆ ಜೊತೆಗೆ ತಾಯಿಯ ಎದೆ ಹಾಲನ್ನು ಕ್ರಮಬದ್ಧವಾಗಿ ನೀಡುವಂತೆ ಹಾಗೂ ಸ್ಥಳೀಯವಾಗಿ ಸಿಗುವ ಸೊಪ್ಪು ತರಕಾರಿಗಳನ್ನು ಹೆಚ್ಚು ಬಳಕೆ ಮಾಡುವಂತೆ ಅರಿವು ಮೂಡಿಸಲಾಗಿದೆ. ಜೊತೆಗೆ ಇಲಾಖೆಯಿಂದ ಗರ್ಭಿಣಿ ಮತ್ತು ಬಾಣಂತಿ ಮಹಿಳೆಯರಿಗೆ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ. ಪರಿಣಾಮವಾಗಿ ಅಪೌಷ್ಟಿಕತೆಯಿಂದ ಹೊರ ಬರುವ ಮಕ್ಕಳ ಪ್ರಮಾಣ ಹೆಚ್ಚಿದೆ ಎಂದು ಹೇಳಿದ್ದಾರೆ.

ಆರು ತಿಂಗಳಿಂದ ಆರು ವರ್ಷದ 129 ಮಕ್ಕಳು ತೀವ್ರ ಅಪೌಷ್ಟಿಕತೆ ಹಾಗೂ 947 ಮಕ್ಕಳು ಸಾಧಾರಣ ಅಪೌಷ್ಟಿಕತೆಯಿಂದ ಬಳಲುತ್ತಿರುವುದನ್ನು ಗುರುತಿಸಿ, ಇಲಾಖಾ ವತಿಯಿಂದ ಕ್ಷೀರಭಾಗ್ಯ ಯೋಜನೆಯಡಿ ಹಾಲು ಹಾಗೂ ಸೃಷ್ಟಿ ಯೋಜನೆಯಡಿ ವಾರಕ್ಕೆ 5 ಮೊಟ್ಟೆ ಹಾಗೂ ಇನ್ನಿತರ ಆಹಾರ ಪದಾರ್ಥಗಳನ್ನು ನೀಡಲಾಗುತ್ತಿದೆ. ಸಿಎಫ್‌ಟಿಆರ್‌ಐ ವತಿಯಿಂದ ಅಪೌಷ್ಟಿಕ ಮಕ್ಕಳನ್ನು ರಕ್ತ ಪರೀಕ್ಷೆಗೆ ಒಳಪಡಿಸಿ, ಆರು ತಿಂಗಳ ಕಾಲ ಸೂಕ್ತ ಪೌಷ್ಟಿಕ ಆಹಾರ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ವಿವಿಧ ಆಹಾರ: ಸಿಎಫ್‌ಟಿಆರ್‌ಐನಿಂದ ಸೋಮವಾರ ಎನರ್ಜಿ & ಪ್ರೋಟೀನ್ ರಿಚ್ ಬರ್ಫಿ, ಮಂಗಳವಾರ ಹೈ ಪ್ರೋಟೀನ್ ಮತ್ತು ಐರನ್ ರಿಚ್ ಬಿಸ್ಕಟ್, ಬುಧವಾರ ಮ್ಯಾಂಗೋ ಬಾರ್ ಮತ್ತು ಸ್ಪಿರುಲಿನಾ ಚಿಕ್ಕಿ, ಗುರುವಾರ ಎನರ್ಜಿ ಮತ್ತು ಪ್ರೋಟೀನ್ ರಿಚ್ ಬರ್ಫಿ, ಶುಕ್ರವಾರ ಮ್ಯಾಂಗೋಬಾರ್ ಮತ್ತು ಗ್ಲುಕೋಸ್ ಆಮ್ಲ ಬಿವರೇಜ್, ಶನಿವಾರ ಹೈ ಪ್ರೋಟೀನ್ ಅಂಡ್ ಐರನ್ ರಿಚ್ ಬಿಸ್ಕಟ್ಸ್ ನೀಡಲಾಗುತ್ತಿದೆ ಆರೋಗ್ಯ ಇಲಾಖೆ ಸಹಕಾರದೊಂದಿಗೆ ಪ್ರತಿ ತಿಂಗಳು ಆರೋಗ್ಯ ತಪಾಸಣೆ ನಡೆಸಿ, ತೀವ್ರ ಅಪೌಷ್ಟಿಕ ಮಕ್ಕಳನ್ನು ಪೌಷ್ಟಿಕಾಂಶ ಪುನರ್ವಸತಿ ಕೇಂದ್ರ(ಎನ್‌ಆರ್‌ಸಿ)ಕ್ಕೆ ದಾಖಲಿಸಲಾಗುವುದು. ಸಿಎಫ್‌ಟಿಆರ್‌ಐ ಹಾಗೂ ಪೋಷಕರ ಸಹಯೋಗದೊಂದಿಗೆ ಮಕ್ಕಳ ಅಪೌಷ್ಟಿಕತೆ ಸುಧಾರಣೆಗೆ ಪರಿಣಾಮಕಾರಿ ಕ್ರಮ ವಹಿಸಲಾಗಿದೆ ಎಂದು ವಿವರ ನೀಡಿದ್ದಾರೆ.

ವ್ಯವಸ್ಥಿತವಾಗಿ ಜೈಲು ಸೇರುತ್ತಿದೆಯಾ ಮಾದಕ ವಸ್ತು!

ವಿಚಾರಣಾಧೀನ ಕೈದಿ ಮಗನಿಗೆ ತಾಯಿ ನೀಡಿದ ಜೀನ್ಸ್ ಪ್ಯಾಂಟ್‌ನಲ್ಲಿತ್ತು ಮಾದಕ ವಸ್ತು!

● ಇಬ್ಬರು ಮಂಡಿ ಪೊಲೀಸರ ವಶಕ್ಕೆ ● ಗೃಹಸಚಿವರ ಆರ್ಭಟಕ್ಕೆ ಅಂಜಿಲ್ಲವಾ!

ಮೈಸೂರು, ಡಿ.13– ಜೀನ್ಸ್ ಪ್ಯಾಂಟ್ ಸೊಂಟದ ಪಟ್ಟಿಯಲ್ಲಿ ಗಾಂಜಾ ಇಟ್ಟು, ಮೈಸೂರು ಕೇಂದ್ರ ಕಾರಾಗೃಹಕ್ಕೆ ಸಾಗಿಸಲು ಯತ್ನಿಸಿರುವ ಘಟನೆ ನಡೆದಿದ್ದು, ಈ ಸಂಬಂಧ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ವಿಚಾರಣಾಧೀನ ಕೈದಿಗೆ ಬಟ್ಟೆ ಕೊಡುವ ನೆಪದಲ್ಲಿ ಗಾಂಜಾ ಸಾಗಿಸಲು ಯತ್ನಿಸಿದ ರೂಪಾ ಹಾಗೂ ಈ ಕೃತ್ಯಕ್ಕೆ ಸೂಚನೆ ನೀಡಿದ್ದ ಎಂ.ಸುರೇಶ್‌ನನ್ನು ಕಾರಾಗೃಹ ಅಧಿಕಾರಿಗಳು ಶುಕ್ರವಾರ ವಶಕ್ಕೆ ಪಡೆದು, ಮಂಡಿ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ.

ಮಾಸ್ಟರ್ ಪ್ಲಾನ್: ವಿಚಾರಣಾಧೀನ ಕೈದಿ ಆಕಾಶ್‌ನನ್ನು ಭೇಟಿ ಮಾಡಿ, ಆತನಿಗೆ ಬಟ್ಟೆ ನೀಡಲೆಂದು ಆತನ ತಾಯಿ ರೂಪಾ ಶುಕ್ರವಾರ ಸಂಜೆ ಜೈಲಿಗೆ ತೆರಳಿದ್ದರು. ಭೇಟಿಗೂ ಮುನ್ನ ರೂಪಾ ತಂದಿದ್ದ ಬ್ಯಾಗ್ ಅನ್ನು ಸಿಬ್ಬಂದಿ ಪ್ರಿಯಾಂಕ ಹಾಗೂ ರೇವಣ್ಣ ಪರಿಶೀಲಿಸಿದ್ದಾರೆ. ಆ ವೇಳೆ ಎರಡು ಜೀನ್ಸ್ ಪ್ಯಾಂಟ್‌ಗಳ ಸೊಂಟದ ಪಟ್ಟಿಯಲ್ಲಿ ಯಾವುದೋ ವಸ್ತು ಇಟ್ಟಿರುವುದು ಗೊತ್ತಾಗಿದೆ ನಂತರ ಅಧಿಕಾರಿಗಳ ಸಮ್ಮುಖದಲ್ಲಿ ಪ್ಯಾಂಟ್‌ಗಳ ಸೊಂಟದ ಪಟ್ಟಿಯಲ್ಲಿದ್ದ ವಸ್ತುಗಳನ್ನು ಹೊರತೆಗೆದಿದ್ದು, ಅದರಲ್ಲಿ ಆರು ಪ್ಲಾಸ್ಟಿಕ್ ಹಾಗೂ ಕಾರ್ಬನ್ ಪೇಪರ್‌ನಲ್ಲಿ ಸುತ್ತಿದ್ದ ಗಾಂಜಾ ರೀತಿಯ ಪೇಸ್ಟ್ ರೂಪದ ಅನುಮಾನಾಸ್ಪದ ವಸ್ತು ಪತ್ತೆಯಾಗಿದೆ.

ಈ ಬಗ್ಗೆ ರೂಪಾಳನ್ನು ವಿಚಾರಿಸಿದಾಗ, ಈ ವಸ್ತುಗಳನ್ನು ಕಾರಾಗೃಹದೊಳಗೆ ಸಾಗಿಸಲು ಸುರೇಶ್ ಎಂಬುವರು ತಿಳಿಸಿದ್ದಾಗಿ ಹೇಳಿದ್ದಾಳೆ. ಬಳಿಕ ಕಾರಾಗೃಹ ಅಧಿಕಾರಿಗಳು, ಸುರೇಶ್‌ಗೆ ಕರೆ ಮಾಡಿ ಕರೆಸಿಕೊಂಡು ವಿಚಾರಿಸಿದ್ದಾರೆ. ಅವರು ಆರೋಪ ನಿರಾಕರಿಸಿದರಾದರೂ ಇಬ್ಬರನ್ನೂ ಮಂಡಿ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ. ಆರೋಪಿಗಳ ಬಂಧನದ ಬಗ್ಗೆ ಮಾಹಿತಿಗೆ ಪೊಲೀಸ್ ಅಧಿಕಾರಿಗಳ ಸಂಪರ್ಕ ಸಾಧ್ಯವಾಗಲಿಲ್ಲ.

ನನ್ನ ಗೆಲುವಿಗೆ ಕಾಂಗ್ರೆಸಿಗರ ಸಹಕಾರ ಇತ್ತು: ವಿ.ಸೋಮಣ್ಣ



ತುಮಕೂರು, ಡಿ.13– ಕಳೆದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ನಾಯಕರಂತೆ ಕಾಂಗ್ರೆಸ್ ನಾಯಕರು ಸಹಕಾರ ನೀಡಿದ್ದಾರೆ ಎಂದು ತುಮಕೂರು ಸಂಸದ ಹಾಗೂ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.

ನಗರದ ಹೊರ ವಲಯದ ಹೆಗ್ಗೆರೆ ಯಲ್ಲಿ ಶನಿವಾರ ರೈಲ್ವೆ ಮೇಲು ಸೇತುವೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. ಲೋಕಸಭೆ ಚುನಾವಣೆ ಉಸ್ತುವಾರಿಯಾಗಿದ್ದ ಸಚಿವ ಜಿ.ಪರಮೇಶ್ವರ ಸಹ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಪರಮೇಶ್ವರ ಸಮ್ಮುಖದಲ್ಲೇ ಕಾಂಗ್ರೆಸ್ ನಾಯಕರು ಸಹಕಾರ ನೀಡಿದ್ದಾರೆ ಎಂದು ಹೇಳಿರುವುದು ಮಹತ್ವ ಪಡೆದುಕೊಂಡಿದೆ. ಚುನಾವಣೆಗೆ ಸ್ಪರ್ಧಿಸಿದ್ದ ಎಸ್.ಪಿ.ಮುದ್ದಹನುಮೇಗೌಡ ಸೋಲಿಗೆ ಕಾಂಗ್ರೆಸ್ ನಾಯಕರೇ ಕಾರಣರಾಗಿದ್ದಾರೆಯೇ ಎಂಬ ವಿಚಾರ ಚರ್ಚೆಗೆ ಗ್ರಾಸವಾಗಿದೆ.

ಪರಮೇಶ್ವರ್ ಮುಂದಿನ ಮುಖ್ಯಮಂತ್ರಿಯಾಗಲಿ ಎಂದು ಹೇಳುತ್ತಲೇ ನನ್ನ ಗೆಲುವಿಗೆ ಕಾಂಗ್ರೆಸ್ ನಾಯಕರು ಕಾರಣರಾಗಿದ್ದಾರೆ ಎಂದರು. ಪಕ್ಕದಲ್ಲಿದ್ದ ಶಾಸಕ ಬಿ.ಸುರೇಶ್‌ಗೌಡ ಡಿ.ಕೆ.ಶಿವಕುಮಾರ್ ಏನಾಗಬೇಕು ಎಂದು ಕೇಳಿದರು. ಆಮೇಲೆ ಮಾತನಾಡೋಣ, ಅದೆಲ್ಲ ಸೆಕೆಂಡರಿ. ಅವರ ನಡವಳಿಕೆಯೂ ಬೇಕಲ್ಲ ಎಂದು ಹೇಳುವ ಮೂಲಕ ವಿಷಯಾಂತರ ಮಾಡಿದರು.

ದಸರಾ ವಸ್ತುಪ್ರದರ್ಶನದಲ್ಲಿ ಇಂದಿನಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು, ಡಿ.13– ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಭಾನುವಾರ(ಡಿ.14) ದಿಂದ ಮೂರು ದಿನ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಇಲ್ಲಿನ ಸಿದ್ದರಾಮಯ್ಯ ಅಂಗಳದಲ್ಲಿ ಭಾನುವಾರ ಸಂಜೆ 4.30ರಿಂದ ಮೈಸೂರಿನ ಲಾಸ್ಯ ನೃತ್ಯನಿಕೇತನ ತಂಡದಿಂದ ಶಾಸ್ತ್ರೀಯ ಜಾನಪದ ಶೈಲಿಯ ನೃತ್ಯ ಪ್ರದರ್ಶನ, ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ಸಂಜೆ 6.30ರಿಂದ ರೆಟ್ರೋ ತಂಡದ ಆರ್ಕೆಸ್ಟ್ರಾ, ಡಿ.15ರಂದು ಸಂಜೆ 5ಕ್ಕೆ ರಾಜ್ ಫೌಂಡೇಷನ್‌ನಿಂದ ಫ್ಯಾಷನ್ ಶೋ, ರಾತ್ರಿ 8ಕ್ಕೆ ಆಶಾದೇವಿ ಯೋಗ ಟ್ರಸ್ಟ್‌ನಿಂದ ಯೋಗ ನೃತ್ಯ, ಡಿ.16ರಂದು ಸಂಜೆ 7ಕ್ಕೆ ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಕಾನೂನು ಅರಿವಿನ ಕಿರು ನಾಟಕ ಪ್ರದರ್ಶನವಿರಲಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ತಿಳಿಸಿದ್ದಾರೆ.

ಕನಕಪುರ ರಸ್ತೆಯಲ್ಲಿ ಎರಡು ಬೈಕ್‌ಗಳ ನಡುವೆ ಡಿಕ್ಕಿ; ಮೂವರು ಸ್ಥಳದಲ್ಲೇ ಸಾವು!

ಬೆಂಗಳೂರು, ಡಿ.13– ಬೆಂಗಳೂರು ದಕ್ಷಿಣ ಜಿಲ್ಲೆಯ ಕಗ್ಗಲಿಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ಕನಕಪುರ ರಸ್ತೆಯಲ್ಲಿ ಎರಡು ಬೈಕ್ ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಭೀಕರ ಅಪಘಾತದಲ್ಲಿ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಲ್ಲದೆ ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರನ್ನು ಗಣೇಶ್(52), ನಾಗೇಂದ್ರ (36), ಪೇಂಟರ್ ಕೆಲಸಗಾರ ಮತ್ತು ಖಾಸಗಿ ಕಂಪನಿ ಉದ್ಯೋಗಿ ಮನೋಜ್(23) ಎಂದು ಗುರುತಿಸಲಾಗಿದ್ದು, ಗಾಯಗೊಂಡಿರುವ ಖಾಸಗಿ ಕಂಪನಿ ಉದ್ಯೋಗಿ ಲೋಕೇಶ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಂಜೆ 7 ಗಂಟೆ ಸುಮಾರಿಗೆ ಈ ಅಪಘಾತ ಸಂಭವಿಸಿದ್ದು, ಮನೋಜ್ ಜೊತೆ ಬೈಕ್‌ನಲ್ಲಿ ಹೋಗುತ್ತಿದ್ದ ನಾಗೇಂದ್ರ, ಲೋಕೇಶ್ ಮತ್ತು ಗಣೇಶ್ ಪ್ರಯಾಣಿಸುತ್ತಿದ್ದ ಬೈಕ್ ಗೆ ಡಿಕ್ಕಿ ಹೊಡೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.


ನಾಗೇಂದ್ರ ಮತ್ತು ಮನೋಜ್ ಕನಕಪುರದಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದರೆ, ಲೋಕೇಶ್ ಮತ್ತು ಗಣೇಶ್ ಕನಕಪುರ ಕಡೆಗೆ ಹೋಗುತ್ತಿದ್ದರು. ಗಣೇಶ್, ನಾಗೇಂದ್ರ ಮತ್ತು ಮನೋಜ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮತ್ತೊಂದು ಅಪಘಾತದಲ್ಲಿ, ಶುಕ್ರವಾರ ಸಂಜೆ ಶೇಷಾದ್ರಿಪುರಂ ಸಂಚಾರ ಪೊಲೀಸ್ ವ್ಯಾಪ್ತಿಯ ಓಕಳಿಪುರಂ ಬಸ್ ನಿಲ್ದಾಣದ ಬಳಿ ಮಾಧ್ಯಮ ಸಂಸ್ಥೆಯ ಉದ್ಯೋಗಿಯೊಬ್ಬರು ಟ್ರಕ್ ಡಿಕ್ಕಿ ಹೊಡೆದು ಸಾವನ್ನಪ್ಪಿದ್ದಾರೆ.

ದಸರಾ ವಸ್ತು ಪ್ರದರ್ಶನದಲ್ಲಿ ನಾಳೆ ಫ್ಯಾಷನ್ ಶೋ



ಮೈಸೂರು, ಡಿ.13– ದಸರಾ ವಸ್ತು ಪ್ರದರ್ಶನದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ಡಿ.15ರಂದು ಸಂಜೆ 4ರಿಂದ 8ರವರೆಗೆ ಆಯೋಜಿಸಿರುವ ಫ್ಯಾಶನ್ ಶೋನಲ್ಲಿ 25 ರಿಂದ 55 ವರ್ಷದವರು ಭಾಗವಹಿಸಬಹುದು. 100 ಮಂದಿಗಷ್ಟೇ ಅವಕಾಶವಿದ್ದು, ಆಸಕ್ತಿ ಉಳ್ಳವರು ಆಧಾರ್ ಕಾರ್ಡ್, ಫೋಟೋ ಹಾಗೂ 100 ರೂ. ಪ್ರವೇಶ ಶುಲ್ಕದೊಂದಿಗೆ ಆಗಮಿಸಬಹುದು. ಹೆಚ್ಚಿನ ಮಾಹಿತಿಗೆ ಮೊ.ಸಂ.8197508158/ 9743313178 ಸಂಪರ್ಕಿಸುವಂತೆ ರಾಜ್ ಫೌಂಡೇಶನ್ ಸಂಸ್ಥೆಯ ಪ್ರಕಟಣೆ ಕೋರಿದೆ.

ಕೆ.ಆರ್.ಬ್ಯಾಂಕ್ ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಅಗ್ರಹಾರದಲ್ಲಿರುವ ಕೃಷ್ಣರಾಜೇಂದ್ರ ಬ್ಯಾಂಕಿನ 2026ರ ದಿನದರ್ಶಿಕೆಯನ್ನು ಬ್ಯಾಂಕಿನ ಅಧ್ಯಕ್ಷ ಬಸವರಾಜು ಬಸಪ್ಪ ಹಾಗೂ ಸಹಕಾರ ಇಲಾಖೆಯ ಉಪ ನಿಬಂಧಕ ವೀರೇಂದ್ರ ಬಿಡುಗಡೆ ಮಾಡಿದರು. ಈ ವೇಳೆ ನಿರ್ದೇಶಕರಾದ ನಂ.ಸಿದ್ದಪ್ಪ, ಹೆಚ್.ವಾಸು, ಪ್ರತಿಧ್ವನಿ ಪ್ರಸಾದ್, ನಾಗಜ್ಯೋತಿ, ಪಂಚಾಕ್ಷರಿ, ಗಣೇಶ ಮೂರ್ತಿ, ಶಿವಪ್ರಕಾಶ್, ಸಹಾಯಕ ನಿರೀಕ್ಷಕ ಕೆ.ರಾಜು, ಕೆ.ಆರ್.ಬ್ಯಾಂಕಿನ ಮ್ಯಾನೇಜರ್ ಅನಂತ ವೀರಪ್ಪ ಮತ್ತಿತರರಿದ್ದರು.

ಮುಂದಿನ ಪೀಳಿಗೆಗೆ ಭಗವದ್ಗೀತೆ ಮನದಟ್ಟು ಮಾಡಿಕೊಡಬೇಕಿದೆ



ಮೈಸೂರಿನ ಯಾದವ(ಗೊಲ್ಲರ) ಸಂಘದ ವತಿಯಿಂದ ಲೋಕಕಲ್ಯಾಣಾರ್ಥ ಸಾಮೂಹಿಕ ಭಗವದ್ಗೀತಾ ಮತ್ತು ವಿಷ್ಣು ಸಹಸ್ರನಾಮ ಪಠಿಸಿದರು.

ಮೈಸೂರು, ಡಿ.13(ಎಸ್‌ಪಿಎನ್)–ಹಿಂದೂ ಧರ್ಮದಲ್ಲಿ ಭಗವದ್ಗೀತೆ ಬಹಳ ಪ್ರಾಮುಖ್ಯತೆ ಪಡೆದಿದೆ. ಇದನ್ನು ಪೋಷಿಸಿ ಮುಂದಿನ ಪೀಳಿಗೆಗೆ ನೀಡುವುದು ನಮ್ಮ–ನಿಮ್ಮೆಲ್ಲರ ಕರ್ತವ್ಯ ಎಂದು ಒಂಟಿಕೊಪ್ಪಲಿನ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದ ಧರ್ಮದರ್ಶಿ ಜೆ.ಸಿ.ಪುಟ್ಟಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ದಿವಾನ್ಸ್ ರಸ್ತೆಯ ಯಾದವ (ಗೊಲ್ಲರ) ಸಂಘದ ವತಿಯಿಂದ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನ ಸನ್ನಿಧಿಯಲ್ಲಿ ಗೀತಾ ಜಯಂತಿ ಮಹೋತ್ಸವ ಅಂಗವಾಗಿ ನಡೆದ ಗೀತಾ ಪಠಣ ಕಾರ್ಯಕ್ರಮದಲ್ಲಿ ಅವರು, ಮಾತನಾಡಿದರು.

ಲೋಕಕಲ್ಯಾಣಾರ್ಥ ಸಾಮೂಹಿಕ ಭಗವದ್ಗೀತಾ ಮತ್ತು ವಿಷ್ಣು ಸಹಸ್ರನಾಮ ಪಠಣ ಆಯೋಜಿಸಿರುವುದು ಉತ್ತಮ ಕಾರ್ಯ. ಹಾಗಾಗಿ ಭಗವದ್ಗೀತೆಯಲ್ಲಿನ 13ನೇ ಅಧ್ಯಾಯದ ಶ್ಲೋಕಗಳನ್ನು ಭಜನ್ ರೂಪದಲ್ಲಿ ಪ್ರಸ್ತುತ ಪಡಿಸಲಾಗುವುದು ಎಂದರು.

ಈ ವೇಳೆ ಯಾದವ(ಗೊಲ್ಲರ) ಸಂಘದ ಕಾರ್ಯದರ್ಶಿ ಜವರೇಗೌಡ, ಉಪಾಧ್ಯಕ್ಷ ವೆಂಕಟಾಚಲ, ಸದಸ್ಯರಾದ ನಾಗೇಶ್ ಯಾದವ್, ರಾಘವೇಂದ್ರ, ಶ್ರೀಕಾಂತ್, ಯೋಗೀಶ್ ಯಾದವ್, ಸತ್ಯನಾರಾಯಣ, ನಾಗೇಂದ್ರ ಯಾದವ್, ನರಸಿಂಹ ಮೂರ್ತಿ, ರಂಗಸ್ವಾಮಿ, ವಕೀಲ ಜಯಕುಮಾರ್, ಚಂದ್ರಕಲಾ ಸುಪ್ರಿಯಾ, ರಂಗಸ್ವಾಮಿ ಸೇರಿದಂತೆ ಇತರರಿದ್ದರು.

ಕೊಡಗಿನ ಇಬ್ಬರು ಲೇಖಕರ ಅರ್ಥಪೂರ್ಣ ಕಾವ್ಯ ಸಂವಾದ

ಹೊಸ ನಮೂನೆ ವಿಚಾರ ವಿನಿಮಯಕ್ಕೆ ಅತೀವ ಮೆಚ್ಚುಗೆ



ನುಚ್ಚಿಮನಿಯಂಡ ಸುಬ್ಬಯ್ಯ ಮುತ್ತಣ್ಣ (ಎಡ) ಹಾಗೂ ಡಾ. ರವಿನ್ ಚೆಂಗಪ್ಪ (ಬಲ) ಸಂವಾದಿಸುತ್ತಿರುವುದು

ಮೈಸೂರು, ಡಿ.13(ವಿವಿಹೆಚ್)– ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಚಿತ್ತರಂಜನ್ ಪ್ಯಾಲೇಸ್‌ನ ದಿ ಗ್ರೀನ್ ಹೋಟೆಲ್‌ನಲ್ಲಿ ಶನಿವಾರ 'ಇಂಕ್ಡ್ ಇನ್ ದಿ ಹಿಲ್ಸ್' ಹೆಸರಿನ ಕೊಡವ ಲೇಖಕ ಮತ್ತು ಕೊಡವ ಕವಿಯ ನಡುವಿನ ಕಾವ್ಯ ಸಂವಾದವು ಕೊಡವರ ಸಾಂಸ್ಕೃತಿಕ ಪರಂಪರೆ, ಪ್ರತಿಬಿಂಬ ಮತ್ತು ಹೋರಾಟದ ದಾಖಲೆಯಾಗಿ ಎಲ್ಲರ ಮೆಚ್ಚುಗೆ ಗಳಿಸಿತು.

ಮೈಸೂರು ಮೂಲದ ದಂತ ಶಸ್ತ್ರಚಿಕಿತ್ಸಕ ಡಾ. ರವಿನ್ ಚೆಂಗಪ್ಪ ರಚಿತ "ಲೀವ್ಸ್ ಆಫ್ ದಿ ಪೊಯೆಟ್ ಟ್ರೀ" ಹಾಗೂ ಕಾನೂನು ವಿದ್ಯಾರ್ಥಿ ನುಚ್ಚಿಮನಿಯಂಡ ಸುಬ್ಬಯ್ಯ ಮುತ್ತಣ್ಣ ಅವರ "ಫ್ರಮ್ ರೆವೆರಿ ಟು ರೆಕ್ವಿಯಮ್" ಇಂಗ್ಲಿಷ್ ಕವನ ಸಂಕಲನಗಳ ಮೇಲೆ ಕಾವ್ಯ ಸಂವಾದ ನಡೆಯಿತು. ಈ ಇಬ್ಬರು ತಮ್ಮ ಅನುಭವಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಕವನಗಳನ್ನಾಗಿ ರೂಪಿಸಿರುವುದು ವಿಶೇಷವಾಗಿದೆ.

ಸುದೀರ್ಘ ಗದ್ಯ, ಲೇಖನಗಳಲ್ಲಿ ನಮ್ಮ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಾದರೂ ಅವುಗಳನ್ನು ಓದಿ ಅರ್ಥೈಸಿಕೊಳ್ಳುವುದು, ಅದಕ್ಕಾಗಿಯೇ ಸಮಯ ಮೀಸಲಿಡುವುದು ಇಂದಿನ ದಿನಗಳಲ್ಲಿ ಕಷ್ಟಸಾಧ್ಯವಾಗಿದೆ. ಇದಕ್ಕಾಗಿ ಟಿಪ್ಪಣಿ ಕವನಗಳನ್ನು ರಚಿಸಲು ಬಯಸಿದ್ದಾಗಿ ಈ ಇಬ್ಬರು ಲೇಖಕರು ಅಭಿಪ್ರಾಯಪಟ್ಟರು.

ಪ್ರತಿಯೊಂದು ಕವಿತೆಯೂ ವಸ್ತು ನಿಷ್ಠತೆ, ಭಾವನೆ, ಆಡುಭಾಷೆಯ ಲಯಗಳು, ನಾಟಕೀಯ ವಿರಾಮಗಳು ಮತ್ತು ಮಾನವನ ದೈನಂದಿನ ಆಗುಹೋಗುಗಳ ಮೇಲೆ ರಚಿತವಾಗಿರುತ್ತವೆ. ಕೆಲವೊಬ್ಬರಿಗೆ ತೀರಾ ಹತ್ತಿರದ ಸಂಗತಿಯಾದರೆ, ಮತ್ತೆ ಕೆಲವರಿಗೆ ಮನರಂಜನೀಯ ವಿಷಯವಾಗಿ ಕಾಣುತ್ತದೆ ಎಂದು ಸಂವಾದಿಸಿದರು.

ಈ ಇಬ್ಬರು ಮೂಲ ಭಾಷೆಯನ್ನು ಬಿಟ್ಟು ಆಂಗ್ಲ ಭಾಷೆಯಲ್ಲಿ ಕವನ ರಚಿಸಿರುವ ಉದ್ದೇಶದ ಬಗ್ಗೆ ಮಾತನಾಡುತ್ತಾ, 1834 ರಲ್ಲಿ ಕೊಡಗು ಬ್ರಿಟೀಷರ ಸ್ವಾಧೀನಕ್ಕೊಳಪಡುವ ಮೊದಲೇ, ಕೊಡವ ಸಮುದಾಯದ ಕೆಲವು ಭಾಗಗಳಲ್ಲಿ ಇಂಗ್ಲಿಷ್ ಶಿಕ್ಷಣವನ್ನು ಪರಿಚಯಿಸಲಾಗಿತ್ತು. ಇದಕ್ಕೆ ಪೂರಕವೆಂಬಂತೆ ಸ್ಥಳೀಯ ಕೊಡವ ಗಣ್ಯರು, ಆಳುವ ರಾಜಪ್ರಭುತ್ವದ ಕೊಡುಗೆಗಳ ಜೊತೆಗೆ, ಕೊಡಗಿನಲ್ಲಿ ಇಂಗ್ಲಿಷ್ ಶಾಲಾ ಶಿಕ್ಷಣವನ್ನು ಸ್ಥಾಪಿಸಲು ಸಾಮೂಹಿಕವಾಗಿ ಒಪ್ಪಿಗೆ ಸೂಚಿಸಿದರು. ಇದು ಶಿಕ್ಷಣದಲ್ಲಿ ಹೊಸ ಕ್ರಾಂತಿಯನ್ನೇ ಕೊಡಗಿನಲ್ಲಿ ಹುಟ್ಟುಹಾಕಿತು.

ಇಂಗ್ಲಿಷ್ ಭಾಷೆಯಲ್ಲಿ ಸಿಗುವ ಶಿಕ್ಷಣವನ್ನು ಹೇರಿಕೆಯಾಗಿ ಅವರು ಪರಿಗಣಿಸಲಿಲ್ಲ, ಬದಲಾಗಿ ಒಂದು ವಿಶಿಷ್ಟ ಸಾಂಸ್ಕೃತಿಕ ಗುರುತನ್ನು ಉಳಿಸಿಕೊಂಡು ಜಾಗತಿಕ ಭಾಷೆಯೊಂದಿಗೆ ತೊಡಗಿಸಿಕೊಳ್ಳುವ ಪ್ರಜ್ಞಾಪೂರ್ವಕ ನಿರ್ಧಾರವಾಗಿತ್ತು. ಇದು ಇಂದು ಇಂಗ್ಲಿಷ್ ಸಂವಹನೆಗೆ ಸಹಕಾರವಾಗಿದೆ ಎಂದು ಸಮ್ಮತಿಸಿದರು.

ಇಬ್ಬರೂ ಬರಹಗಾರರು ವಿಭಿನ್ನ ವೃತ್ತಿಪರ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದರೂ, ಕೊಡಗಿನ ಮಂಜಿನ ವಾತಾವರಣ, ಬೆಟ್ಟಗಳು, ಜನರ ಸಾಂಸ್ಕೃತಿಕ ಸ್ಮರಣೆಯಲ್ಲಿ ಆಳವಾದ ಅನುಭವವನ್ನು ಹಂಚಿಕೊಂಡರು. ಇದರೊಂದಿಗೆ ಕೊಡವರ ಪರಂಪರೆಯನ್ನು ಮತ್ತು ಸಮಕಾಲೀನ ಸಾಹಿತ್ಯಿಕ ಅಸ್ತಿತ್ವವನ್ನು ಪ್ರತಿಪಾದಿಸಲು ವೇದಿಕೆ ಅನುವು ಮಾಡಿಕೊಟ್ಟಿತು.

ಈ ಕಾವ್ಯ ಸಂವಾದವು ಎರಡು ಉದಯೋನ್ಮುಖ ಕೊಡವ ಧ್ವನಿಗಳ ನಡುವೆ ನಡೆದು, ಇಬ್ಬರು ಕೊಡವ ಕವಿಗಳು ಪರಸ್ಪರ ಸಮಕಾಲೀನ ಚಿಂತನೆ ಮತ್ತು ಪೂರ್ವಜರ ಹೆಗ್ಗುರುತಿನ ಸೂಕ್ಷ್ಮತೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಈ ಕಾರ್ಯಕ್ರಮವು ಕೊಡವ ಸೃಜನಶೀಲತೆ ಮತ್ತು ಶಾಂತ ಕಲಾತ್ಮಕ ಮನೋಭಾವದ ಮೇಲೆ ಬೆಳಕು ಚೆಲ್ಲಿತು.

ಕಮಾಂಡರ್ ಬೆಳ್ಯಪ್ಪ, ಜಮ್ಮಾಡ ಗಣೇಶ್, ಮೊನ್ನಾಡ ಶೋಭಾ ಸುಬ್ಬಯ್ಯ, ಸುಜಾತ ಉಪಸ್ಥಿತರಿದ್ದರು.

ಬ್ರಾಹ್ಮಣರ ಅವಹೇಳನ: ನಿವೃತ್ತ ನ್ಯಾಯಮೂರ್ತಿ ಬಂಧನಕ್ಕೆ ಆಗ್ರಹ

ಮೈಸೂರು, ಡಿ. 13– ಬ್ರಾಹ್ಮಣರ ಅವಹೇಳನ ಮಾಡಿರುವ ಬಾಂಬೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ .ಜೆ..ಕೋಳ್ಸೆ ಪಾಟೀಲ್ ಅವರನ್ನು ಬಂಧಿಸಬೇಕು ಎಂದು ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಆಗ್ರಹಿಸಿದ್ದಾರೆ.

ಬಸವಕಲ್ಯಾಣದಲ್ಲಿ ಡಿ.7ರಂದು ನಡೆದ ಸೂಫಿ ಸಂತರ ಸಮಾವೇಶದಲ್ಲಿ ಬ್ರಾಹ್ಮಣ ಸಮಾಜಕ್ಕೆ ಅವಹೇಳನ ಮಾಡಿದ್ದಾರೆ. ಹೀನ, ತುಚ್ಛ, ಕೀಳು ಮಟ್ಟದ ಹಾಗೂ ಅಸಂವಿಧಾನಿಕ ಪದ ಬಳಸಿ ಬ್ರಾಹ್ಮಣರ ಭಾವನೆಗೆ ಧಕ್ಕೆ ತಂದಿದ್ದಾರೆ. ಇವರ ವಿರುದ್ಧ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ, ಬಂಧಿಸಿ ಕಠಿಣ ಶಿಕ್ಷೆಗೆ ಗುರುಪಡಿಸ ಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಕೇರಳ ನಗರ, ಪಂಚಾಯಿತಿ ಕ್ಲೀನ್ ಸ್ವೀಪ್ ಮಾಡಿದ ಯುಡಿಎಫ್; ತಿರುವನಂತಪುರಂನಲ್ಲಿ ಎನ್‌ಡಿಎ ಭದ್ರ!



ತಿರುವನಂತಪುರಂ, ಡಿ.13– 2025ರ ಕೇರಳ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಮತ ಎಣಿಕೆ ಮುಕ್ತಾಯವಾಗಿದ್ದು, ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (UDF) ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಭರ್ಜರಿ ಗೆಲುವು ಸಾಧಿಸಿದೆ.

ಕೊಲ್ಲಂ, ಕೊಚ್ಚಿ, ತ್ರಿಶೂರ್ ಮತ್ತು ಕಣ್ಣೂರು ಎಂಬ ಆರು ಪಾಲಿಕೆಗಳ ಪೈಕಿ ನಾಲ್ಕರಲ್ಲಿ ಯುಡಿಎಫ್ ಗೆದ್ದಿದೆ ಎಲ್‌ಡಿಎಫ್ ಕೋಳಿಕ್ಕೋಡ್ ಅನ್ನು ಉಳಿಸಿಕೊಂಡಿದೆ ಆದರೆ ಎನ್‌ಡಿಎ ತಿರುವನಪುರವನ್ನು ಎಲ್‌ಡಿಎಫ್‌ನಿಂದ ಕಿತ್ತುಕೊಂಡಿದೆ.

59 ಜಿಲ್ಲಾ ಪಂಚಾಯತ್‌ಗಳು, 1,063 ಬ್ಲಾಕ್ ಪಂಚಾಯತ್‌ಗಳು ಮತ್ತು 7,451 ಗ್ರಾಮ ಪಂಚಾಯತ್‌ಗಳಲ್ಲಿ ಯುಡಿಎಫ್ ಗೆದ್ದಿದೆ. ಇನ್ನೂ ಎಲ್‌ಡಿಎಫ್ 30 ಜಿಲ್ಲಾ ಪಂಚಾಯಿತಿಗಳು, 823 ಬ್ಲಾಕ್ ಪಂಚಾಯಿತಿಗಳು ಮತ್ತು 6,137 ಗ್ರಾಮ ಪಂಚಾಯಿತಿಗಳನ್ನು ಗೆದ್ದುಕೊಂಡಿದೆ. ಎನ್‌ಡಿಎ ಕೇವಲ ಒಂದು ಜಿಲ್ಲಾ ಪಂಚಾಯಿತಿ, 50 ಬ್ಲಾಕ್ ಪಂಚಾಯಿತಿಗಳು ಮತ್ತು 1,363 ಗ್ರಾಮ ಪಂಚಾಯಿತಿಗಳನ್ನು ಗೆದ್ದಿದೆ.

ಯುಡಿಎಫ್‌ನ ಅಮೋಘ ಗೆಲುವನ್ನು ರಾಜ್ಯ ಸರ್ಕಾರದ ವಿರುದ್ಧದ ಎಚ್ಚರಿಕೆ ಮತ್ತು ಕೇರಳವನ್ನು ದುರಾಡಳಿತ ಮಾಡುವವರ ವಿರುದ್ಧ ಜನರ ಪ್ರತಿಭಟನೆ ಎಂದು ಕೇರಳ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಹೇಳಿದ್ದಾರೆ. ಎಲ್‌ಡಿಎಫ್ ಸರ್ಕಾರವನ್ನು ಜನರು ತಿರಸ್ಕರಿಸಿದ್ದಾರೆಂದು ಫಲಿತಾಂಶಗಳು ಸೂಚಿಸುತ್ತವೆ ಕೆಪಿಸಿಸಿ ಅಧ್ಯಕ್ಷ ಸನ್ನಿ ಜೋಸೆಫ್ ಹೇಳಿದ್ದಾರೆ.

ಫಲಿತಾಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗುವುದು ಎಂದು ಎಲ್‌ಡಿಎಫ್ ಸಂಚಾಲಕ ಟಿ.ಪಿ.ರಾಮಕೃಷ್ಣನ್ ಹೇಳಿದ್ದಾರೆ. ಇಂತಹ ಫಲಿತಾಂಶ ಯಾಕೆ ಬಂತು ಎಂಬುದನ್ನು ಸೂಕ್ಷ್ಮ ಮಟ್ಟದಲ್ಲಿ ಪರಿಶೀಲಿಸಲಾಗುವುದು, ಜನರ ಅಭಿಪ್ರಾಯವನ್ನು ಪರಿಗಣಿಸಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

ತಿರುವನಂತಪುರಂ ಪಾಲಿಕೆಯಲ್ಲಿ ಎನ್‌ಡಿಎ 50 ಸ್ಥಾನಗಳು ಭದ್ರ: ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿಗೆ ದೊಡ್ಡ ಲಾಭವೇನೆಂದರೆ, 101 ಸದಸ್ಯರ ತಿರುವನಂತಪುರ ನಗರ ಪಾಲಿಕೆಯಲ್ಲಿ ಎನ್‌ಡಿಎ 50 ಸ್ಥಾನಗಳನ್ನು ಪಡೆದುಕೊಂಡಿದೆ.

ಕೇರಳ ಯುಡಿಎಫ್ ಮತ್ತು ಎಲ್‌ಡಿಎಫ್‌ನಿಂದ ಬೇಸತ್ತಿದೆ. ಅವರು ಎನ್‌ಡಿಎಗೆ ಉತ್ತಮ ಆಡಳಿತ ನೀಡುವ ಮತ್ತು ಎಲ್ಲರಿಗೂ ಅವಕಾಶಗಳೊಂದಿಗೆ ವಿಕಾಸಿತ ಕೇರಳವನ್ನು ನಿರ್ಮಿಸುವ ಏಕೈಕ ಆಯ್ಕೆಯಾಗಿ ನೋಡುತ್ತಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಸಾಮಾಜಿಕ ಮಾಧ್ಯಮ ವೇದಿಕೆ Xನಲ್ಲಿ ಬರೆದುಕೊಂಡಿದ್ದಾರೆ.

ಮೈಸೂರು ಮಿತ್ರ ಭಾನುವಾರ 14 ಡಿಸೆಂಬರ್ 2025

ಮಾನವೀಯ ಸಂಬಂಧ ಬೆಸೆಯುವ ಶಿಕ್ಷಣ ನೀಡಬೇಕಿದೆ

ಎಸ್‌ಟಿಜಿ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವದಲ್ಲಿ ಚಿತ್ರನಟ ಅರುಣ್ ಸಾಗರ್ ಕರೆ

ಚಿನಕುರಳಿ, ಡಿ.13– ಪ್ರಸ್ತುತ ದಿನಗಳಲ್ಲಿ ಮಕ್ಕಳಿಗೆ ಮನುಷ್ಯರನ್ನು ಮಾನವೀಯ ನೆಲೆಯಲ್ಲಿ ನೋಡುವ, ಪ್ರೀತಿಸುವ ಶಿಕ್ಷಣ ನೀಡಬೇಕಾಗಿದೆ ಎಂದು ಚಿತ್ರನಟ ಅರುಣ್ ಸಾಗರ್ ಹೇಳಿದರು.

ತಾಲೂಕಿನ ಚಿನಕುರಳಿ ಗ್ರಾಮದ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಶುಕ್ರವಾರ ಸಂಜೆ ನಡೆದ ಸಂಸ್ಕೃತಿ ಸಮಾಗಮ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಂತ್ರಿಕತೆ, ಟಿವಿ ಮಾಧ್ಯಮ ಹಾಗೂ ಸೋಷಿಯಲ್ ಮೀಡಿಯ ಹಾವಳಿಗೆ ಒಳಗಾಗಿ ಮಕ್ಕಳು ಮಾನವೀಯ ಮೌಲ್ಯಗಳ ಜತೆಗೆ ಪರಸ್ಪರ ಪ್ರೀತಿಸುವುದನ್ನೇ ಮರೆಯುತ್ತಿದ್ದಾರೆ. ಪೋಷಕರಾದವರು ಹಣದ ಹಿಂದೆ ಓಡುವುದನ್ನು ಬಿಟ್ಟು ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು ಅವರೊಳಗಿರುವ ಪ್ರತಿಭೆಯನ್ನು ಗುರುತಿಸುವ ಪ್ರೋತ್ಸಾಹಿಸುವ ಕೆಲಸ ಮಾಡಬೇಕು, ಮಕ್ಕಳನ್ನು ಬೆಳೆಸುವ ಜತೆಗೆ ಪೋಷಕರು ಬೆಳೆಯುವ ಕೆಲಸಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದರು.



ಎಸ್‌ಟಿಜಿ ಶಿಕ್ಷಣ ಸಂಸ್ಥೆಯ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಚಿತ್ರನಟ ಅರುಣ್ ಸಾಗರ್ ಮತ್ತು ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಮಾಜಿ ಸಚಿವ, ಸಂಸ್ಥೆಯ ಅಧ್ಯಕ್ಷ ಸಿ.ಎಸ್. ಪುಟ್ಟರಾಜು ಮಾತನಾಡಿ, ನನ್ನ ಸ್ನೇಹಿತರು ತಮ್ಮ ಮಕ್ಕಳನ್ನು ಓದಿಸುವ ಸಲುವಾಗಿ ಮೈಸೂರಿಗೆ ಹೋಗುತ್ತಿರುವುದನ್ನು ನೋಡಿ ಮನಸ್ಸಿಗೆ ನೋವಾಗಿ, ನಮ್ಮ ತಂದೆತಾಯಿ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದೆ, 63 ಮಕ್ಕಳಿಂದ ಆರಂಭಗೊಂಡ ಶಿಕ್ಷಣ ಸಂಸ್ಥೆಯಲ್ಲಿ ಪ್ರಸ್ತುತ 4 ಸಾವಿರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಪ್ರತಿ ವರ್ಷವು ವಿಭಿನ್ನವಾಗಿ ಶಾಲಾ ವಾರ್ಷಿಕೋತ್ಸವದ ಆಚರಣೆ ಮಾಡಲಾಗುತ್ತಿದೆ ಎಂದರು.

ನಾನು ಸಾರ್ವಜನಿಕ ಕ್ಷೇತ್ರದಲ್ಲಿ ಶಾಸಕನಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಸರಕಾರಿ ಶಾಲೆಗಳ ಉನ್ನತೀಕರಣಕ್ಕೆ ಕೆಲಸ ಮಾಡಿದ್ದೇನೆ, ತಾಲೂಕಿಗೆ 12 ಪ್ರೌಢಶಾಲೆ, 5 ಪದವಿ ಪೂರ್ವ ಕಾಲೇಜು, 3 ಡಿಗ್ರಿ ಕಾಲೇಜು, ಹೋಬಳಿಗೆ ಎರಡು ವಸತಿ ಶಾಲೆಗಳನ್ನು ಆರಂಭಿಸಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ನೆರವಾಗಿದ್ದೇನೆ ಎಂದರು.

ಶಾಲಾ ವಾರ್ಷಿಕೋತ್ಸವದ ಸಮಾರಂಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಾಲೆಯ ಪುಟಾಣಿ ಮಕ್ಕಳು ಕನ್ನಡದ ಹಲವು ಹಾಡುಗಳಿಗೆ ನೃತ್ಯ ಪ್ರದರ್ಶನ ಮಾಡುವ ಮೂಲಕ ಪೋಷಕರು, ಪ್ರೇಕ್ಷಕರ ಗಮನ ಸೆಳೆದರು. ಕಾರ್ಯಕ್ರಮದ ಆರಂಭದಲ್ಲಿ ಇತ್ತೀಚಿಗೆ ನಮ್ಮನ್ನೆಲ್ಲ ಅಗಲಿದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ಮೌನಾಚರಣೆ ಮಾಡುವ ಮೂಲಕ ಕಾರ್ಯಕ್ರಮ ಆರಂಭಿಸಿದರು, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಾಲಾಮಕ್ಕಳು ಸಾಲುಮರದ ತಿಮ್ಮಕ್ಕ ಅವರ ಕುರಿತ ಹಾಡಿಗೆ ಹೆಜ್ಜೆಯಾಗುವ ಮೂಲಕ ಗೌರವಸಲ್ಲಿಸಿದರು. ಉತ್ತಮ ಶಿಕ್ಷಕರು, ವಾಹನ ಚಾಲಕರು, ಮಹಿಳಾ ಸಿಬ್ಬಂದಿಗಳ ಉತ್ತಮ ಸೇವೆ ಗುರುತಿಸಿ ಅಭಿನಂದಿಸಿದರು. ಚಿತ್ರನಟ ಅರುಣ್ ಸಾಗರ್ ಅವರನ್ನು ಅಭಿನಂದಿಸಲಾಯಿತು.

ಸಮಾರಂಭದಲ್ಲಿ ಸಂಸ್ಥೆಯ ಸಿಇಓ ಸಿ.ಪಿ.ಶಿವರಾಜು, ಆಡಳಿತಾಧಿಕಾರಿ ನಿವೇದಿತ ನಾಗೇಶ್, ಪ್ರಾಂಶುಪಾಲೆ ಮಾಚಮ್ಮ, ಉಪಪ್ರಾಂಶುಪಾಲ ಲಿಂಗರಾಜು, ಅನಂತು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಸೇರಿದಂತೆ ಹಲವರು ಇದ್ದರು.

ಅರುಣ್ ಯೋಗಿರಾಜ್‌ರಿಂದ ಮದ್ದೂರಲ್ಲಿ ಮಹನೀಯರ ಪುತ್ಥಳಿ ಸ್ಥಾಪನೆ

ಶಾಸಕ ಕೆ.ಎಂ.ಉದಯ್, ಅರುಣ್ ಯೋಗಿರಾಜ್‌ರಿಂದ ಸ್ಥಳ ಪರಿಶೀಲನೆ

ಮದ್ದೂರು: ನಗರದ ರಸ್ತೆಯ ವಿವಿಧ ಸ್ಥಳಗಳಲ್ಲಿ ಪ್ರಮುಖ ವೃತ್ತಗಳನ್ನು ನಿರ್ಮಿಸಿ ದೇಶದ ಮಹಾನ್ ನಾಯಕರ ಪುತ್ಥಳಿ ಸ್ಥಾಪಿಸಲು ಶಾಸಕ ಕೆ.ಎಂ.ಉದಯ್ ಖ್ಯಾತ ಶಿಲ್ಪಿ ಮೈಸೂರಿನ ಅರುಣ್ ಯೋಗಿರಾಜ್ ಅವರ ಜತೆ ಶನಿವಾರ ಸ್ಥಳ ಪರಿಶೀಲನೆ ನಡೆಸಿದರು.

ನಗರದ ಕೊಪ್ಪ ವೃತ್ತ, ಕೊಲ್ಲಿ, ಹೂವಿನ, ಕೆಮ್ಮಣ್ಣು, ಸರ್ಕಾರಿ ಕಾಲೇಜು ವೃತ್ತ ಹಾಗೂ ಪ್ರವಾಸಿ ಮಂದಿರದ ವೃತ್ತದವರೆಗೆ ಶಾಸಕ ಉದಯ್ ಹಾಗೂ ಅರುಣ್ ಯೋಗಿರಾಜ್ ಅವರು ಸ್ಥಳ ಪರಿಶೀಲಿಸಿದರು.

ಮದ್ದೂರು ಪುರಸಭೆಯನ್ನು ರಾಜ್ಯ ಸರ್ಕಾರ ಈಗಾಗಲೇ ನಗರಸಭೆಯನ್ನಾಗಿ ಮೇಲ್ದರ್ಜೆಗೆರಿಸಲಾಗಿದೆ. ಹೀಗಾಗಿ ನಗರದ ಪೇಟೆ ಬೀದಿಯನ್ನು 80 ಅಡಿಗೆ ಅಗಲೀಕರಣ ಮಾಡುವ ಜೊತೆಗೆ ಸಾರ್ವಜನಿಕರಿಗೆ ಅತ್ಯಾಧುನಿಕ ಮಾದರಿಯಲ್ಲಿ ರಸ್ತೆ ನಿರ್ಮಾಣ ಮಾಡಲು ಕ್ರಿಯಾಯೋಜನೆ ತಯಾರಿಸಲಾಗಿದ್ದು, ಆದಷ್ಟು ಬೇಗ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.



ರಸ್ತೆ ಅಗಲೀಕರಣ ಮಾಡುವ ಜತೆಗೆ ಪ್ರವಾಸಿ ಮಂದಿರದ ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆ, ಸರ್ಕಾರಿ ಕಾಲೇಜು ವೃತ್ತದಲ್ಲಿ ಪೂಜ್ಯ ಶ್ರೀ ಬಾಲ ಗಂಗಾಧರನಾಥ ಸ್ವಾಮೀಜಿ, ಕೆಮ್ಮಣ್ಣು ನಾಲಾ ವೃತ್ತದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್, ಹೂವಿನ ವೃತ್ತದಲ್ಲಿ ಅಮರ ಶಿಲ್ಪಿ ಜಕಣಾಚಾರಿ, ಕೊಲ್ಲಿ ವೃತ್ತದಲ್ಲಿ ಬಸವಣ್ಣ ಹಾಗೂ ಕೊಪ್ಪ ವೃತ್ತದಲ್ಲಿ ಕನಕದಾಸರ ಪ್ರತಿಮೆಗಳನ್ನು ನಿರ್ಮಿಸಲಾಗುವುದು. ಈ ಪ್ರತಿಮೆಗಳ ನಿರ್ಮಾಣದ ಜವಾಬ್ದಾರಿಯನ್ನು ಖ್ಯಾತ ಶಿಲ್ಪಿ ಮೈಸೂರಿನ ಅರುಣ್ ಯೋಗಿರಾಜ್ ಅವರಿಗೆ ವಹಿಸಲಾಗಿದೆ ಎಂದು ಶಾಸಕ ಉದಯ್ ಹೇಳಿದರು.

ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಮಾತನಾಡಿ, ಮದ್ದೂರು ನಗರದ ರಸ್ತೆ ಅಗಲೀಕರಣಗೊಂಡ ಬಳಿಕ ಪ್ರಮುಖ ವೃತ್ತಗಳಲ್ಲಿ ವಿವಿಧ ಮಹಾನ್ ನಾಯಕರ ಪ್ರತಿಮೆಗಳನ್ನು ನಿರ್ಮಿಸಲು ಶಾಸಕ ಉದಯ್ ಅವರು ನನಗೆ ಮಹತ್ತರವಾದ ಜವಾಬ್ದಾರಿಯನ್ನು ನೀಡಿದ್ದಾರೆ. ಶಾಸಕರ ಜತೆ ಮತ್ತೊಂದು ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಂಡು ಕೆಲಸ ಪ್ರಾರಂಭಿಸಲಾಗುವುದು ಎಂದರು.

ಮನ್‌ಮುಲ್ ನಿರ್ದೇಶಕ ಹರೀಶ್ ಬಾಬು, ನಗರಸಭಾ ಸದಸ್ಯ ಬಸವರಾಜ್, ಮುಖಂಡರಾದ ಕೆ.ಎಂ.ರವಿ, ಅಭಿಷೇಕ್, ಅಲೋಕ್, ಪ್ರಶಾಂತ್ ಮತ್ತಿತರರು ಇದ್ದರು.

ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾಕೇರ್ ನಿರ್ಮಿಸಲು ಜಾಗ ಮಂಜೂರು

ಮಂಡ್ಯ: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಟ್ರಾಮಾ ಕೇರ್ ಸೆಂಟರ್ ನಿರ್ಮಿಸಲು ಸ್ಥಳ ಕೇಳಿದ್ದು, ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ (ಡಿಎಚ್‌ಓ) ಕಚೇರಿಯ ಜಾಗವನ್ನೇ ಕೊಡಲಾಗುವುದು ಎಂದು ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ ತಿಳಿಸಿದರು.



ಜಿಲ್ಲೆಯಲ್ಲಿ ತುರ್ತು ಮತ್ತು ಸುಧಾರಿತ ವೈದ್ಯಕೀಯ ಸೇವೆಗಾಗಿ ಪ್ರಧಾನಮಂತ್ರಿ ಆರೋಗ್ಯ ಸುರಕ್ಷಾ ಯೋಜನೆಯಡಿ (ಪಿಎಂಎಸ್‌ಎಸ್‌ವೈ) ಟ್ರಾಮಾಕೇರ್ ಸೆಂಟರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮುಂದಾಗಿರುವುದು ಸ್ವಾಗತಾರ್ಹ. ಇದು ಕೇವಲ ಮಾತು ಮತ್ತು ಪತ್ರ ವ್ಯವಹಾರಕ್ಕೆ ಸೀಮಿತವಾಗಬಾರದು. ಕೇಂದ್ರದಿಂದ ಅನುದಾನ ತಂದು ಉದ್ದೇಶಿತ ಆರೋಗ್ಯ ಸಂಸ್ಥೆಗಳನ್ನು ಸ್ಥಾಪಿಸಬೇಕೆಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮನವಿ ಮಾಡಿದರು.

ಸುಮಲತಾ ಅಂಬರೀಶ್ ಅವರು ಸಂಸದೆಯಾಗಿದ್ದಾಗಲೇ ಅನುದಾನ ಮಂಜೂರಾಗಿತ್ತು. ಆದರೆ, ತಮಿಳು ಕಾಲೋನಿ ತೆರವು ವಿವಾದ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಟ್ರಾಮಾಕೇರ್ ಸೆಂಟರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆ ಆಗಲಿರಲಿಲ್ಲ. ಇದೀಗ ಕೇಂದ್ರದಲ್ಲಿ ಪ್ರಭಾವಿ ಸಚಿವರಾಗಿರುವ ಕುಮಾರಸ್ವಾಮಿ ಅವರು ಜಾಗ ಕೇಳಿದ್ದಾರೆ. ಅದಕ್ಕೆ ಪ್ರತಿಯಾಗಿ ನಾವೂ ಕೂಡ ಡಿಎಚ್‌ಓ ಕಚೇರಿ ಜಾಗವನ್ನು ಕೊಡುವುದಾಗಿ ಇಂದು ಎಚ್‌ಡಿಕೆ ಅವರಿಗೆ ಪತ್ರ ಬರೆದಿದ್ದೇನೆ. ಅಗತ್ಯ ಜಾಗ ಕೊಡುವುದಾಗಿ ಎಚ್‌ಡಿಕೆ ಅವರಿಗೆ ಜಿಲ್ಲಾಡಳಿತದಿಂದಲೂ ಅಧಿಕೃತ ಪತ್ರ ಬರೆಯುವಂತೆ ಜಿಲ್ಲಾಧಿಕಾರಿಗೂ ಲಿಖಿತ ಮನವಿ ಮಾಡಿದ್ದೇನೆ ಎಂದು ಪತ್ರಗಳನ್ನು ಪ್ರದರ್ಶಿಸಿದರು.

ತಮಿಳುಕಾಲೋನಿ ತೆರವಿಗೆ ಸದ್ಯಕ್ಕೆ ಕೋರ್ಟ್ ತಡೆಯಾಜ್ಞೆ ನೀಡಿದೆ. ಕೋರ್ಟ್ ನೆಪವಿಟ್ಟುಕೊಂಡು ಜಾಗವಿಲ್ಲ ಎನ್ನುವುದಿಲ್ಲ. ಡಿಎಚ್‌ಓ ಕಚೇರಿ ಆವರಣವು ಸುಮಾರು 2 ಎಕರೆಯಷ್ಟು ವಿಸ್ತೀರ್ಣವಿದೆ. ಅಲ್ಲಿ ಜಾಗದಲ್ಲಿ ಟ್ರಾಮಾಕೇರ್ ಸೆಂಟರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಾಗಿ ಬಹುಮಹಡಿ ಕಟ್ಟಡಗಳನ್ನು ಕಟ್ಟಿದರೆ ಅದರಲ್ಲೇ ಡಿಎಚ್‌ಓ ಕಚೇರಿಗೂ ಸ್ಥಳಾವಕಾಶ ಮಾಡಿಕೊಡಲಾಗುವುದು. ಅದು ಸಾಧ್ಯವಾಗದಿದ್ದರೆ ನಗರದೊಳಗೆ ಬೇರೆ ಜಾಗವನ್ನು ಡಿಎಚ್‌ಓ ಕಚೇರಿಗಾಗಿ ದೊರಕಿಸಿಕೊಡಲಾಗುವುದು ಎಂದು ಹೇಳಿದರು.

ಕೈಗಾರಿಕೆ ಸ್ಥಾಪನೆಗೆ 100 ಎಕರೆ ಕೊಡುತ್ತೇವೆ: ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ ಜಾಗ ಗುರುತಿಸಿಕೊಡುವಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದೇನೆಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಪದೇ ಪದೆ ಹೇಳುತ್ತಿದ್ದಾರೆ. ಆದರೆ, ಈ ಮಾತು 'ಹಿಟ್ ಅಂಡ್ ರನ್' ಎಂಬಂತಾಗಬಾರದು. ಕೈಗಾರಿಕೆ ಸ್ಥಾಪನೆಗಾಗಿ ತಾಲೂಕಿನ ಬಸರಾಳು ಮತ್ತು ನಗರದ ಹೊರವಲಯದ ಉಮ್ಮಡಹಳ್ಳಿ ಬಳಿ ಜಾಗ ಗುರುತಿಸಲಾಗಿದೆ. ಬಸರಾಳಿನಲ್ಲಿ 100 ಎಕರೆ ಸರ್ಕಾರಿ ಜಾಗವಿದೆ. ಹೆಚ್ಚುವರಿ ಜಾಗ ಬೇಕಿದ್ದರೆ ಭೂಸ್ವಾಧೀನ ಮಾಡಿಕೊಡುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ತಾ.ಪಂ. ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು ಹಾಜರಿದ್ದರು.

ಸಾಲ ಬಾಧೆ: ರೈತ ಆತ್ಮಹತ್ಯೆ

ಕಿಕ್ಕೇರಿ: ಹೋಬಳಿಯ ಮಾದಾಪುರ ಗ್ರಾಮದಲ್ಲಿ ರೈತ ನೋರ್ವ ಸಾಲಬಾಧೆಗೆ ಹೆದರಿ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣ ಜರುಗಿದೆ.



ಮೃತ ರೈತ ಪುಟ್ಟೇಗೌಡರ ಮಗ ಚಲುವರಾಜು(45) ಎಂಬುವರೆ ಆತ್ಮಹತ್ಯೆಗೆ ಶರಣಾದವರು. ಈತ ತನ್ನ ಜಮೀನಿನಲ್ಲಿ ಶುಂಠಿ ಬೇಸಾಯಕ್ಕಾಗಿ 4ಲಕ್ಷ ರೂ, ಹಾಗೂ ಮನೆಗಾಗಿ 5ಲಕ್ಷ ರೂ.ಗಳಷ್ಟು ಸಾಲ ಸೇರಿದಂತೆ ಹಲವಾರು ಕಡೆ ಸಾಲ ಮಾಡಿಕೊಂಡಿದ್ದರು. ತನ್ನ ನಿರೀಕ್ಷೆಯಂತೆ ಶುಂಠಿ ಬೇಸಾಯದಲ್ಲಿ ಉತ್ತಮ ಫಸಲು ಪಡೆಯಲಾಗದೆ ಬೇಸರಗೊಂಡಿದ್ದರು. ಇದರಿಂದ ಕಂಗಲಾಗಿ ಖಿನ್ನತೆಗೆ ಒಳಗಾಗಿದ್ದರು.

ಮನೆಯಲ್ಲಿ ಯಾರು ಇಲ್ಲದ ವೇಳೆ ಮನೆಯಲ್ಲಿದ್ದ ಹಳೆಯದಾಗಿದ್ದ ಮಾತ್ರೆಗಳನ್ನು ಸೇವಿಸಿ ತೀವ್ರ ಅಸ್ವಸ್ಥರಾಗಿದ್ದಾರೆ.

ಅಸ್ವಸ್ಥನಾಗಿ ಬಿದ್ದಿದ್ದ ಆತನನ್ನು ಕೂಡಲೇ ಆಸ್ಪತೆಗೆ ದಾಖಲು ಮಾಡಿದ್ದಾರೆ. ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ(ಡಿ.12) ಮೃತರಾಗಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ವಿಕಲಚೇತನ ಯುವತಿ ಮೇಲೆ ಅತ್ಯಾಚಾರ: ಗರ್ಭಿಣಿಯಾದರೂ ವಿವಾಹವಾಗದ ಯುವಕ

ನ್ಯಾಯಕ್ಕಾಗಿ ಪೊಲೀಸ್ ಠಾಣೆ ಮೆಟ್ಟಿಲೇರಿದ ಯುವತಿ

ಕೆ.ಆರ್.ಪೇಟೆ, ಡಿ.13– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಸೋಮನಹಳ್ಳಿಪುರ ಗ್ರಾಮದ ಯುವಕ ಪೃಥ್ವಿ ಎಂಬಾತ ತಾಲೂಕಿನ ಗ್ರಾಮವೊಂದರ ವಿಕಲಚೇತನ ಯುವತಿಯ ಮೇಲೆ ಅತ್ಯಾಚಾರ ನಡೆಸಿ, ಮದುವೆಯಾಗುವುದಾಗಿ ನಂಬಿಸಿ ಗರ್ಭಿಣಿಯಾದ ನಂತರ ಮದುವೆಯಾಗದೇ ಮೋಸ ಮಾಡಿದ್ದು, ನೊಂದ ಗರ್ಭಿಣಿ ಯುವತಿ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದು ಆರೋಪಿಯ ವಿರುದ್ಧ ಪ್ರಕರಣ ದಾಖಲಾಗಿದೆ.

ಯುವತಿಯ ತಂದೆ–ತಾಯಿ ಕೂಲಿ ಕೆಲಸಕ್ಕೆ ಹೋದ ನಂತರ ಯುವತಿ ಮನೆಗೆ ಹೋಗಿ ಕಳೆದ ಒಂದು ವರ್ಷದಿಂದಲೂ ಹಲವು ಬಾರಿ ಅತ್ಯಾಚಾರ ಮಾಡಿರುವ ಆರೋಪಿ ಪೃಥ್ವಿ, ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ನಿಮ್ಮ ತಂದೆ–ತಾಯಿಯನ್ನು ಚಾಕುವಿನಿಂದ ಚುಚ್ಚಿ ಸಾಯಿಸುವುದಾಗಿ ಹೇಳಿ ಬೆದರಿಕೆ ಹಾಕಿದ್ದ.

ಆಕೆಗೆ ಹೊಟ್ಟೆ ನೋವು ಕಾಣಿಸಿಕೊಂಡಿತ್ತು ಆಗ ಪೋಷಕರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪರೀಕ್ಷೆ ಮಾಡಿಸಲಾಗಿ ಆಕೆಯು ಗರ್ಭಿಣಿಯಾಗಿರುವುದು ದೃಢಪಟ್ಟಿದೆ. ಈ ವೇಳೆ ತನ್ನ ಮೇಲೆ ನಡೆದ ಅತ್ಯಾಚಾರ ಪ್ರಕರಣವನ್ನು ತಿಳಿಸಿದ್ದಾಳೆ.

ಆರೋಪಿ ಪೃಥ್ವಿಯನ್ನು ವಿಚಾರಿಸಿದಾಗ, ಆತ ಅತ್ಯಾಚಾರ ಮಾಡಿರುವ ತಪ್ಪನ್ನು ಒಪ್ಪಿಕೊಂಡಿದ್ದನು. ಮದುವೆಯಾಗುವುದಾಗಿ ಭರವಸೆ ನೀಡಿದ್ದ. ಈ ಸಂಬಂಧ ರಾಜಿ ಪಂಚಾಯ್ತಿ ಕೂಡ ಆಗಿತ್ತು. ಅದರೆ ಇದುವರೆಗೂ ಆರೋಪಿ ಮದುವೆಯಾಗದೆ ನಾಪತ್ತೆಯಾಗಿದ್ದಾನೆ. ಕುಟುಂಬದವರು ಕೂಡ ಸ್ಪಂದಿಸದ ಕಾರಣ ಪೊಲೀಸರಿಗೆ ದೂರು ನೀಡಲಾಗಿದೆ

ಅಮೆರಿಕಾ ಆರಿಜೋನ ಸ್ಟೇಟ್ ಯುನಿವರ್ಸಿಟಿಗೆ ನೇಮಕ

ಭಾರತೀನಗರ: ಇಲ್ಲಿಗೆ ಸಮೀಪದ ಕೆ.ಶೆಟ್ಟಹಳ್ಳಿಯ ಎಸ್.ಬಿ. ಭರತೇಶ್ ಚಕ್ರವರ್ತಿ ಅಮೆರಿಕಾದ ಪ್ರತಿಷ್ಠಿತ ಆರಿಝೋನ ಸ್ಟೇಟ್ ಯುನಿವರ್ಸಿಟಿ ಸ್ಕೂಲ್ ಆಫ್ ಕಂಪ್ಯೂಟಿಂಗ್ ಅಂಡ್ ಆಗ್‌ಮೆಂಟೆಡ್ ಇಂಟಲಿಜೆನ್ಸಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡಿದ್ದಾರೆ. ಭರತೇಶ್ ಅವರು ಶೆಟ್ಟಹಳ್ಳಿ ಗ್ರಾಮದ ಬೋರಯ್ಯ ಅವರ ಪುತ್ರರಾಗಿದ್ದು, ಅದೇ ಯೂನಿವರ್ ಸಿಟಿಯಲ್ಲಿ ಪೋಸ್ಟ್ ಡಾಕ್ಟೋರಲ್ ಫೆಲೋ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಬೆಂಗಳೂರಿನ ಆಕ್ಸ್‌ಫರ್ಡ್ ಕಾಲೇಜಿನಲ್ಲಿ ಎಂಟೆಕ್ ಮುಗಿಸಿದ್ದರು.



ಅಭಿಲಾಷ್‌ಗೆ ಪಿಎಚ್.ಡಿ ಪ್ರದಾನ

ಮಂಡ್ಯ: ಮಂಡ್ಯದ ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಅಭಿಲಾಷ್ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ ಪ್ರದಾನ ಮಾಡಿದೆ ಅಭಿಲಾಷ್ ಅವರು ಮೈಸೂರಿನ ಮಹಾರಾಜ ಕಾಲೇಜಿನ ಆರ್.ತಿಮ್ಮರಾಯಪ್ಪ ಅವರ ಮಾರ್ಗದರ್ಶನದಲ್ಲಿ "Goods and Services Tax Implications on Selected FMCG Products: A Perceptual Study in Karnataka" ವಿಷಯದಲ್ಲಿ ಸಂಶೋಧನೆ ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಈ ವಿಷಯದಲ್ಲಿ ಪಿಎಚ್.ಡಿ ಪದವಿ ಪಡೆದಿದ್ದಾರೆ.



ಮೂರನೇ ಪುಟದಿಂದ

ಮತಗಳ್ಳತನ ವಿರೋಧಿ ಪ್ರತಿಭಟನೆ

ಶಿವಕುಮಾರ್ ನಿಯೋಗ ಭೇಟಿಗೆ ಖರ್ಗೆ ಸಮಯ ನೀಡಿದ್ದರಾದರೂ, ರಾಹುಲ್ ಮತ್ತು ವೇಣುಗೋಪಾಲ್ ಇನ್ನೂ ಸಮಯ ನೀಡಿಲ್ಲ. ಆದರೆ, ಶಿವಕುಮಾರ್ ತಮ್ಮ ದೆಹಲಿಯ ಮೂರು ದಿನಗಳ ಭೇಟಿ ಸಂದರ್ಭದಲ್ಲಿ ಪಕ್ಷದ ಎಲ್ಲಾ ಮುಖಂಡರನ್ನು ಭೇಟಿ ಮಾಡಲು ಮುಂದಾಗಿದ್ದಾರೆ.

ಸಿದ್ದರಾಮಯ್ಯ ಮಾತ್ರ ರಾಹುಲ್ ಹೊರತುಪಡಿಸಿ ಯಾವುದೇ ನಾಯಕರನ್ನು ಭೇಟಿ ಮಾಡಲು ಆಸಕ್ತಿ ಹೊಂದಿಲ್ಲ. ಒಂದು ವೇಳೆ ತಮ್ಮ ದೆಹಲಿ ಭೇಟಿ ವೇಳೆ ರಾಹುಲ್ ಅವಕಾಶ ನೀಡಿದರೆ ಅವರೊಂದಿಗೆ ಮುಖಾಮುಖಿ ಮಾತುಕತೆ ನಡೆಸಲು ಮುಂದಾಗಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಶಿವಕುಮಾರ್ ತಮ್ಮ ಬೆಂಬಲಿತ ಶಾಸಕರು ಮತ್ತು ರಾಜ್ಯ ಮುಖಂಡರಿಗೆ ಸಾರಿಗೆ ಹಾಗೂ ದೆಹಲಿಯಲ್ಲಿ ತಂಗಲು ವ್ಯವಸ್ಥೆ ಮಾಡಿದ್ದಾರೆ ಎನ್ನಲಾಗಿದೆ.

ಮತಗಳ್ಳತನ ಆರೋಪ ಕರ್ನಾಟಕದಿಂದ ಆರಂಭಗೊಂಡು ಇದೀಗ ದೆಹಲಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಹೋರಾಟ ನಡೆಸಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ. ದೆಹಲಿಗೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ನಮ್ಮಲ್ಲಿ ಯಾವುದೇ ಗುಂಪುಗಾರಿಕೆಯೂ ಇಲ್ಲ, ಭಿನ್ನಮತವೂ ಇಲ್ಲ. ಎಐಸಿಸಿ ಹಮ್ಮಿಕೊಂಡಿರುವ ಮತಗಳ್ಳತನ ವಿರುದ್ಧದ ಹೋರಾಟದಲ್ಲಿ ಪಾಲ್ಗೊಳ್ಳಲು ಏಕಾಂಗಿಯಾಗಿ ಹೋಗುತ್ತಿದ್ದೇನೆ. ನಾನು ಯಾವ ಗುಂಪನ್ನು ಕರೆದುಕೊಂಡು ಹೋಗುತ್ತಿಲ್ಲ.

ಕೆಲವು ಶಾಸಕರು ತಮ್ಮ ಕ್ಷೇತ್ರದ ಮುಖಂಡರೊಂದಿಗೆ ದೆಹಲಿಗೆ ತೆರಳಿದ್ದಾರೆ. ನನಗೂ ಇದಕ್ಕೂ ಸಂಬಂಧ ಇಲ್ಲ. ದೆಹಲಿ ಪ್ರವಾಸ ವೇಳೆ ವರಿಷ್ಠರು ಸಮಯಾವಕಾಶ ನೀಡಿದರೆ ಭೇಟಿ ಮಾಡುತ್ತೇನೆ ಎಂದರು.

ಮಹಿಳೆ ಜೀವನಾಂಶಕ್ಕೆ ಅನರ್ಹ

ಬೇರೆ ಯಾವುದೇ ಹೊಣೆಗಾರಿಕೆ ಇಲ್ಲದ ಪತ್ನಿಗೆ ಅಂತಹ ಮೊತ್ತವು ಅಲ್ಪ ಎಂದು ಹೇಳಲಾಗುವುದಿಲ್ಲ; ಆದರೆ ಪುರುಷನು ತನ್ನ ವಯಸ್ಸಾದ ಪೋಷಕರನ್ನು ಮತ್ತು ಇತರ ಸಾಮಾಜಿಕ ಬಾಧ್ಯತೆಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿರುತ್ತಾನೆ ಎಂಬುದನ್ನು ಹೈಕೋರ್ಟ್ ಗಮನಿಸಿದೆ.

ಆಕೆ ಒಬ್ಬ ಸಂಪಾದನೆ ಮಾಡುತ್ತಿರುವ ಮಹಿಳೆ ಮತ್ತು ತನ್ನನ್ನು ತಾನು ಪೋಷಿಸಿಕೊಳ್ಳಲು ಸಮರ್ಥಳಾಗಿರುವುದರಿಂದ ಆ ಮಹಿಳೆ ತನ್ನ ಪತಿಯಿಂದ ಯಾವುದೇ ಜೀವನಾಂಶ ಪಡೆಯಲು ಅರ್ಹಳಲ್ಲ ಎಂದು ಹೈಕೋರ್ಟ್ ಗಮನಿಸಿದೆ.

ವಿವಾಹಿತ ಪತ್ನಿ ಅಫಿಡವಿಟ್‌ನಲ್ಲಿ ಸಂಪೂರ್ಣ ಸತ್ಯವನ್ನು ಬಹಿರಂಗಪಡಿಸಿಲ್ಲ ಎಂದು ಮಹಿಳೆಯ ಪತಿ ಪರ ವಕೀಲರು ನ್ಯಾಯಾಲಯದಲ್ಲಿ ವಾದಿಸಿದ್ದಾರೆ. ಆಕೆ ತನ್ನನ್ನು ಅನಕ್ಷರಸ್ಥ ಮತ್ತು ನಿರುದ್ಯೋಗಿ ಮಹಿಳೆ ಎಂದು ಹೇಳಿಕೊಂಡಿದ್ದಾಳೆ. ಪುರುಷ ಸಲ್ಲಿಸಿದ ದಾಖಲೆಯನ್ನು ವಿಚಾರಣಾ ನ್ಯಾಯಾಲಯದ ಮುಂದೆ ತೋರಿಸಿದಾಗ, ಆಕೆ ತನ್ನ ಆದಾಯವನ್ನು ಪಾಟಿ ಸವಾಲಿನ ಸಮಯದಲ್ಲಿ ಒಪ್ಪಿಕೊಂಡಿದ್ದಾಳೆ. ಹೀಗಾಗಿ, ಅವರು ಶುದ್ಧ ಕೈಗಳಿಂದ ವಿಚಾರಣಾ ನ್ಯಾಯಾಲಯದ ಮುಂದೆ ಬರಲಿಲ್ಲ ಎಂಬುದು ಸ್ಪಷ್ಟವಾಗಿದೆ ಎಂದು ಪುರುಷನ ವಕೀಲರು ತಮ್ಮ ವಾದಗಳನ್ನು ಮಂಡಿ ಸುತ್ತಾ ಹೇಳಿದ್ದಾರೆ. ನ್ಯಾಯಾಲಯ ತನ್ನ ಆದೇಶದಲ್ಲಿ, ಸತ್ಯವನ್ನು ಗೌರವಿಸದ ಮತ್ತು ವಾಸ್ತವಿಕ ಸಂಗತಿಗಳನ್ನು ನಿಗ್ರಹಿಸುವ ದಾವೆದಾರರ ಪ್ರಕರಣಗಳನ್ನು ನ್ಯಾಯಾಲಯದಿಂದ ಹೊರ ಹಾಕಬೇಕು ಎಂದು ಹೇಳಿದೆ. ಗೌತಮ್ ಬುದ್ಧ ನಗರದ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರು ಫೆಬ್ರವರಿ 17 ರಂದು ನೀಡಿದ್ದ ತೀರ್ಪು ಮತ್ತು ಆದೇಶವನ್ನು ವ್ಯಕ್ತಿ ಪ್ರಶ್ನಿಸಿದ್ದರು ಮತ್ತು ಆತ ಸಲ್ಲಿಸಿದ ಕ್ರಿಮಿನಲ್ ಪರಿಷ್ಕರಣಾ ಅರ್ಜಿಯನ್ನು ಹೈಕೋರ್ಟ್ ಅನುಮತಿಸಿತ್ತು.

ಮೈಸೂರಲ್ಲಿ ಅದ್ದೂರಿ ಹನುಮನ ಉತ್ಸವ



ಹಾರ ಹಾಕಿ ಸಿಂಗಾರಗೊಳಿಸಲಾಗಿದ್ದ ಹನುಮ ಮೂರ್ತಿಗೆ ಪೂಜೆ ಸಲ್ಲಿಸಲಾಯಿತು. ಕೇಸರಿ ಶಾಲು ಧರಿಸಿ ಬಂದಿದ್ದ ಅಪಾರ ಸಂಖ್ಯೆಯ ಶ್ರೀರಾಮನ ಭಕ್ತರು ಹನುಮ ಜಯಂತಿಯ ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸಿ, ರಾಮ ಜಪ ಮಾಡಿದರು. ಮುಗಿಲು ಮುಟ್ಟಿದ ಜಯಕಾರದೊಂದಿಗೆ ಮೆರವಣಿಗೆಯುದ್ದಕ್ಕೂ ಭಗವಧ್ವಜ ಹಿಡಿದು ಸಾಗಿ ಗಮನ ಸೆಳೆದರು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಹೊರಟ ಆಂಜನೇಯಸ್ವಾಮಿ ಮೂರ್ತಿಗಳ ಮೆರವಣಿಗೆ ದೊಡ್ಡಗಡಿಯಾರ, ಅಶೋಕ ರಸ್ತೆ ಇರ್ವಿನ್ ರಸ್ತೆ, ಆಯುರ್ವೇದ ಕಾಲೇಜು ವೃತ್ತ, ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸು ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ ಶಾಂತಲಾ ಚಿತ್ರಮಂದಿರ ವೃತ್ತ ಚಾಮರಾಜ ಜೋಡಿ ರಸ್ತೆ, ಬಸವೇಶ್ವರ ವೃತ್ತದ ಮೂಲಕ ಗನ್‌ಹೌಸ್ ಮುಂಭಾಗ ಅಂತ್ಯಗೊಂಡಿತು.

ಕಣ್ಮನ ಸೆಳೆದ ಮೂರ್ತಿಗಳು: ಹನುಮ ಜಯಂತಿ ಮೆರವಣಿಗೆಯಲ್ಲಿ ತೆರೆದ ವಾಹನದಲ್ಲಿ ಹನುಮಮೂರ್ತಿಗಳೊಂದಿಗೆ ಈಶ್ವರನ ಮೂರ್ತಿ, ಶ್ರೀರಾಮನ ಮೂರ್ತಿಯನ್ನು ಮೆರವಣಿಗೆ ಕೊಂಡೊಯ್ಯಲಾಯಿತು. ಮೆರವಣಿಗೆಯಲ್ಲಿ ರಾಮ, ಹನುಮ, ವೆಂಕಟೇಶ್ವರ ಹಾಗೂ ವಿವಿಧ ವೇಷಧಾರಿಗಳು ಗಮನ ಸೆಳೆದರು.

> ಹನುಮೋತ್ಸವ ಸಮಿತಿ ವತಿಯಿಂದ ಅದ್ದೂರಿಯಾಗಿ, ಹನುಮನ ಹಬ್ಬವನ್ನು ಅತ್ಯಂತ ಭಕ್ತಿಯಿಂದ ಮಾಡಲಾಗುತ್ತಿದೆ. ನಾವು ರಾಮನನ್ನು ಸ್ಮರಣೆ ಮಾಡುವಾಗ ಆಂಜನೇಯನನ್ನು ಸಹ ಸ್ಮರಿಸುತ್ತೇವೆ. ಹಿಂದೂಗಳ ಪಾಲಿಗೆ ಆರಾಧ್ಯದೈವ ರಾಮನ ಭಂಟ ಹನುಮಂತ. ಅಂತಹ ವೀರಾಂಜನೇಯನ ಹಬ್ಬದಲ್ಲಿ ಎಲ್ಲರೂ ಪಾಲ್ಗೊಂಡಿರುವುದು ಸಂತಸ.
>
> -ಪ್ರತಾಪ್ ಸಿಂಹ, ಮಾಜಿ ಸಂಸದ

ಕಲಾತಂಡಗಳ ಸೊಬಗು: ಮೆರವಣಿಗೆಯಲ್ಲಿ ನಂದಿಕಂಬ, ವೀರಗಾಸೆ, ಕಂಸಾಳೆ, ಬೀಸು ಕಂಸಾಳೆ, ಗಾರುಡಿಗೊಂಬೆ, ಡೊಳ್ಳುಕುಣಿತ, ನಗಾರಿ, ಕಾಡಿನ ಮಕ್ಕಳ ವೇಷಧಾರಿಗಳು, ಪೂಜಾ ಕುಣಿತ, ಒಂಟಿ ಬಸವ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ತಮಟೆ ಶಬ್ಧಕ್ಕೆ ಹೆಜ್ಜೆ ಹಾಕಿದ ಜಿಟಿಡಿ, ನಾಗೇಂದ್ರ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಶಾಸಕ ಜಿ.ಟಿ. ದೇವೇಗೌಡರು ತಮಟೆಯ ಸದ್ದಿಗೆ ಹೆಜ್ಜೆ ಹಾಕಿದರು. ಅವರಿಗೆ ಮಾಜಿ ಶಾಸಕ ಎಲ್.ನಾಗೇಂದ್ರ ಕೂಡ ಸಾಥ್ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್‌ಗಳಾದ ಎಸ್.ಸಂದೇಶ್ ಸ್ವಾಮಿ, ಶಿವಕುಮಾರ್, ಹಿರಿಯ ವಕೀಲರೂ ಆದ ಲಾ ಗೈಡ್ ಮಾಸ ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್, ಹಿರಿಯ ನ್ಯಾಯವಾದಿ ಹರೀಶ್ ಕುಮಾರ್ ಹೆಗ್ಡೆ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಂ. ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರಶಾಂತ್‌ಗೌಡ, ಜೆ. ಗೋಪಿ, ರಮಣಿ, ಸುನೀಲ್, ಎಂ.ಸತೀಶ್, ಛಾಯಾದೇವಿ, ವಿವಿ ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್, ಹನುಮಂತೋತ್ಸವ ಸಮಿತಿಯ ಸಂಜಯ್, ಶಂಭು, ಮನು, ಅಪ್ಪಿ, ಹಿಂದೂಪರ ಸಂಘಟನೆಗಳ ಮುಖಂಡರಾದ ಮೈ.ಕಾ. ಪ್ರೇಮ್ ಕುಮಾರ್, ರಾಕೇಶ್ ಭಟ್, ಶಿವು ಪಟೇಲ್, ಜಯಸಿಂಹ, ಸಂದೇಶ್ ಪವಾರ್, ಟಿ.ಎಸ್. ಅರುಣ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬಿಗಿ ಬಂದೋಬಸ್ತ್: ಮೆರವಣಿಗೆ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ನಗರ ಪೊಲೀಸ್ ಆಯುಕ್ತರಾದ ಸೀಮಾಲಾಟ್ಕರ್ ಅವರೇ ಖುದ್ದು ಪೊಲೀಸ್ ಬಂದೋಬಸ್ತ್ ಉಸ್ತುವಾರಿ ನೋಡಿಕೊಂಡರು. ಡಿಸಿಪಿಗಳಾದ ಆರ್.ಎನ್. ಬಿಂದುಮಣಿ, ಕೆ.ಎಸ್.ಸುಂದರ ರಾಜ್ ನೇತೃತ್ವದಲ್ಲಿ ಸಿಎಆರ್ ಡಿಸಿಪಿ, ನಾಲ್ವರು ಎಸಿಪಿಗಳು, 15ಕ್ಕೂ ಹೆಚ್ಚು ಇನ್ಸ್‌ಪೆಕ್ಟರ್‌ಗಳು, 25 ಸಬ್ ಇನ್ಸ್‌ಪೆಕ್ಟರ್‌ಗಳು, ಸಿಎಆರ್, ಕೆಎಸ್‌ಆರ್‌ಪಿ, ಕಮಾಂಡೋ ಪಡೆ ಪೊಲೀಸರನ್ನು ನಿಯೋಜಿಸಲಾಗಿತ್ತು.

ಯತೀಂದ್ರ ಸರ್ಟಿಫಿಕೇಟ್ ಕೊಡೋದು ಬೇಕಾಗಿಲ್ಲ

ಕೋಲಾರ, ಡಿ.13– ರಾಜ್ಯದಲ್ಲಿ ಸಿಎಂ ಬದಲಾವಣೆ ಇಲ್ಲ, 5 ವರ್ಷ ಸಿದ್ದರಾಮಯ್ಯನವ್ರೇ ಸಿಎಂ ಎಂದು ಹೇಳಿಕೆ ನೀಡಿರುವ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ವಿರುದ್ಧ ಕೆಲ ಕಾಂಗ್ರೆಸ್ ನಾಯಕರೇ ಗರಂ ಆಗಿದ್ದಾರೆ. ಮಾಲೂರು ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ, ಡಾ. ಯತೀಂದ್ರ ವಿರುದ್ಧ ಕಿಡಿಕಾರಿದ್ದಾರೆ. ಸಿಎಂ ಪುತ್ರ ಆ ರೀತಿ ಮಾತನಾಡೋದು ತಪ್ಪು. ಅವರು ಸರ್ಟಿಫಿಕೇಟ್ ಕೊಡೋದು ಬೇಕಾಗಿಲ್ಲ ಎಂದು ಹರಿಹಾಯ್ದಿದ್ದಾರೆ.

ಕೋಲಾರದಲ್ಲಿ ಮಾತನಾಡಿದ ನಂಜೇಗೌಡ, ಸಿಎಂ ಪುತ್ರ ಆ ರೀತಿ ಮಾತಾಡೋದು ತಪ್ಪು. ಸಿಎಂ ಹಾಗೂ ಡಿಸಿಎಂ ಪರವಾಗಿ ಮಾತನಾಡೋ ಶಾಸಕರು ಇದ್ದಾರೆ. ಆದರೆ ಯತೀಂದ್ರ ಅವರು ಸಿಎಂ ಪರ ಮಾತನಾಡದೇ ಆರಾಮಾಗಿ ಇರಬೇಕು ಎಂದಿದ್ದಾರೆ. ಸಿಎಂ ಸಿದ್ದರಾಮಯ್ಯಗೆ ರಾಷ್ಟ್ರೀಯ ನಾಯಕರಾಗೋ ಅರ್ಹತೆ ಇದೆ. ಯತೀಂದ್ರ ಅವರು ಸರ್ಟಿಫಿಕೇಟ್ ಕೊಡೋದು ಬೇಕಾಗಿಲ್ಲ ಅಂತ ಕೆ.ವೈ. ನಂಜೇಗೌಡ ಟಾಂಗ್ ಕೊಟ್ಟಿದ್ದಾರೆ.

ನಾಯಕತ್ವ ಬದಲಾವಣೆ ಚರ್ಚೆಗೆ ಶೀಘ್ರವೇ ತೆರೆ: ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರ ಹೋರಾಟದಿಂದ ನಾವೆಲ್ಲಾ ಶಾಸಕರು ಗೆದ್ದಿದ್ದೇವೆ. ನಾಯಕತ್ವ ಬದಲಾವಣೆ ಚರ್ಚೆ ಬಗ್ಗೆ ಯಾವ ಶಾಸಕರೂ ಮಾತನಾಡಬಾರದು. ಶೀಘ್ರದಲ್ಲೇ ಹೈಕಮಾಂಡ್ ಈ ಬಗ್ಗೆ ತೆರೆ ಎಳೆಯಲಿದೆ ಅಂತ ನಂಜೇಗೌಡ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸಿಎಂ ಹಾಗೂ ಡಿಸಿಎಂ ಹೈಕಮಾಂಡ್ ವಿರುದ್ಧ ಹೋಗೋರಲ್ಲ ಎಂದಿರುವ ಅವರು, ಬೆಳಗಾವಿಯಲ್ಲಿ ನಡೆದ ಡಿನ್ನರ್ ಪಾಲಿಟಿಕ್ಸ್ ಡಿಸಿಎಂ ಡಿಕೆಶಿ ಮಾಡಿದ್ದಲ್ಲ, ಅಲ್ಲಿನ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ವ್ಯವಸ್ಥೆ ಮಾಡಿದ್ದು ಎಂದಿದ್ದಾರೆ. ಇನ್ನು ಆ ಮೀಟಿಂಗ್‌ನಲ್ಲಿ ಯಾವುದೇ ರಾಜಕೀಯದ ಬಗ್ಗೆ ಚರ್ಚೆ ಆಗಿಲ್ಲ ಎಂದು ನಂಜೇಗೌಡ ಸ್ಪಷ್ಟಪಡಿಸಿದ್ದಾರೆ.

ಸಾವಿತ್ರಮ್ಮ ಅಪ್ಪಯ್ಯ ಹಿರಿಯ ಸಾಧಕಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು, ಡಿ.12–ಲೇಖಿಕಾ ಸಾಹಿತ್ಯ ವೇದಿಕೆಯು ಸಾವಿತ್ರಮ್ಮ ಅಪ್ಪಯ್ಯ ಹಿರಿಯ ಸಾಧಕಿ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿಲಾಗಿದೆ. ಸಾಮಾಜಿಕ– ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ, 70 ವರ್ಷ ದಾಟಿದ ಸಾಧಕಿಯರು ಅರ್ಜಿ ಸಲ್ಲಿಸಬಹುದು. ಸ್ಮರಣಿಕೆ, ಶಾಲು, ಫಲತಾಂಬೂಲ, ಅಭಿನಂದನಾ ಪತ್ರ, ಪ್ರಯಾಣ ಭತ್ಯೆವನ್ನು ಪ್ರಶಸ್ತಿ ಒಳಗೊಂಡಿರುತ್ತದೆ. ವಿವರಗಳನ್ನು ಮೊ.9916378955 ವಾಟ್ಸ್ ಆಪ್ ಮೂಲಕ ಕಳುಹಿಸಿ ಎಂದು ಲೇಖಿಕಾ ಸಾಹಿತ್ಯ ವೇದಿಕೆಯ ಸಂಚಾಲಕಿ ಶೈಲಜಾ ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡ ನಾಮಫಲಕ ಅಳವಡಿಕೆ ಕಡ್ಡಾಯ

ಕಡ್ಡಾಯ ಕನ್ನಡ ಭಾಷಾ ನಾಮಫಲಕ ಅಳವಡಿಕೆ ಕುರಿತು ನಿಗಾವಹಿಸಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಆದಷ್ಟೂ ಬೇಗ ರಾಜ್ಯದಲ್ಲಿ ನಿಯಮ ಸಂಪೂರ್ಣ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ ಎಂದಿದ್ದಾರೆ.

ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಡ್ಡಾಯವಾಗಿ ಕನ್ನಡ ನಾಮಫಲಕಗಳನ್ನು ಅಳವಡಿಸುವ ಸಂಬಂಧ ನಿಯಮಗಳನ್ನು ಈಗಾಗಲೇ ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆಗೆ ಅಂತಿಮ ಅನುಮೋದನೆಗಾಗಿ ಕಳುಹಿಸಲಾಗಿದೆ ಎಂದು ಹೇಳಿದರು. ಮುಂದಿನ ಕೆಲವು ವಾರಗಳಲ್ಲಿ ಕಾರ್ಯವಿಧಾನ ಪೂರ್ಣಗೊಂಡ ನಂತರ, ರಾಜ್ಯಾದ್ಯಂತ ಆದೇಶ ಹೊರಡಿಸಲಾಗುವುದು ಎಂದು ಅವರು ಹೇಳಿದರು.

ಕನ್ನಡ ನಾಮಫಲಕ ಅಭಿಯಾನವು ಅನೇಕ ಜಿಲ್ಲೆಗಳಲ್ಲಿ ಹೆಚ್ಚು ಯಶಸ್ವಿಯಾಗಿದೆ. ಹನ್ನೊಂದು ಜಿಲ್ಲೆಗಳಲ್ಲಿ ಶೇ. 100 ಅನುಷ್ಠಾನ ಸಾಧಿಸಿದ್ದರೆ, ಉಳಿದವು ಶೇ.80 ಮತ್ತು 90ರಷ್ಟು ಅನುಷ್ಠಾನಗೊಂಡಿವೆ. ಎಲ್ಲಾ ಜಿಲ್ಲೆಗಳಲ್ಲಿ ಸಂಪೂರ್ಣ ಅಳವಡಿಕೆ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಅವರು ಹೇಳಿದರು.

ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲಾಗಿದೆ, ಇದರಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರು, ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಇದ್ದಾರೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಸಮಿತಿಗಳು ಸಹ ಜಾರಿಯಲ್ಲಿವೆ. ಬೆಂಗಳೂರಿನಲ್ಲಿ ಎಂಟು ಮೇಲ್ವಿಚಾರಣಾ ವಲಯಗಳನ್ನು ರಚಿಸಲಾಗಿದ್ದು, ವಿಶೇಷ ತಪಾಸಣಾ ತಂಡವನ್ನು ಸ್ಥಾಪಿಸಲಾಗುವುದು. ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ನೇಮಿಸಿಕೊಳ್ಳಲಾಗುವುದು ಮತ್ತು ಮೇಲ್ವಿಚಾರಣಾ ಕೋಶಕ್ಕಾಗಿ ಕಚೇರಿ ಈಗಾಗಲೇ ಕಾರ್ಯನಿರ್ವಹಿಸಲು ಪ್ರಾರಂಭಿಸಿದೆ ಎಂದು ಅವರು ಹೇಳಿದರು.

ನಾಮಫಲಕ ಹಾಕದಿದ್ದರೆ ಮೊದಲ ಅಪರಾಧಕ್ಕೆ 5,000 ರೂ., ಎರಡನೇ ಅಪರಾಧಕ್ಕೆ 10,000 ರೂ. ಮತ್ತು ನಂತರದ ಪ್ರತಿ ಉಲ್ಲಂಘನೆಗೆ 20,000 ರೂ. ದಂಡ ವಿಧಿಸಲಾಗುತ್ತದೆ ಎಂದು ಹೇಳಿದರು. ಎಲ್ಲಾ ನಾಮ ಫಲಕಗಳಲ್ಲಿ 60:40 ಕನ್ನಡ ಬೋರ್ಡ್ ಪ್ರದರ್ಶಿಸಬೇಕು, ಹೆಚ್ಚಿನ ಭಾಗ ಕನ್ನಡವನ್ನು ಆಕ್ರಮಿಸಿಕೊಳ್ಳಬೇಕು ಎಂದು ಅವರು ಒತ್ತಿ ಹೇಳಿದರು. ರಾಜ್ಯಾದ್ಯಂತ ಕನ್ನಡದ ಕಡ್ಡಾಯ ಬಳಕೆಯನ್ನು ಜಾರಿಗೊಳಿಸುವಲ್ಲಿ ಸರ್ಕಾರ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ತಂಗಡಗಿ ಸ್ಪಷ್ಟಪಡಿಸಿದರು.

ಆಹ್ವಾನ ಸ್ವೀಕರಿಸಿ ಅವಾಂತರಕ್ಕೀಡಾದ ಮಂಡ್ಯದ ಯುವಕ!

ಕೆಲಹೊತ್ತು ಸಹಜವಾಗಿ ಮಾತನಾಡಿದ ಆಕೆ, ಅಲ್ಲಿನ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ನೀಡಿದ್ದಳು. ಈ ವೇಳೆ ಇಬ್ಬರೂ ಮದ್ಯ ಸೇವನೆ ಮಾಡಿದ್ದರಂತೆ. ಇದೇ ವೇಳೆ ಆಕೆಗೊಂದು ಫೋನ್ ಕರೆ ಬಂದಿದ್ದು, ನನ್ನ ಸಂಬಂಧಿಕರೊಬ್ಬರು ಮೃತಪಟ್ಟಿದ್ದಾರೆ ಹೋಗಿ ಬರುತ್ತೇನೆ ಎಂದು ಅಲ್ಲಿಂದ ಹೊರಟಿದ್ದಾಳೆ.

ಅಷ್ಟರಲ್ಲಿ ರಚನಾಳ ತಾಯಿ ಮತ್ತು ದಿನೇಶ್ ಎಂಬುವರು ಆಟೋದಲ್ಲಿ ಮನೆಗೆ ಬಂದಿದ್ದಾರೆ. ಮಹದೇವ್ ನೀಡಿದ್ದ ಹಣದ ವಿಚಾರವಾಗಿ ಪ್ರಶ್ನಿಸಿದ್ದಾರೆ. ಬಳಿಕ ದಿನೇಶ್, ರಚನಾ ಮತ್ತು ಆಕೆಯ ತಾಯಿಯನ್ನು ಹೊರಗೆ ಕಳುಹಿಸಿ, ಸ್ನೇಹಿತರಾದ ದರ್ಶನ್ ಮತ್ತು ಸುಜಿತ್‌ನನ್ನು ಅಲ್ಲಿಗೆ ಕರೆಸಿಕೊಂಡಿದ್ದಾನೆ. ಮೂವರೂ ಸೇರಿ ಮಹದೇವನ ಬಟ್ಟೆ ಬಿಚ್ಚಿಸಿ, ಅದನ್ನು ಸುಟ್ಟು ಹಾಕಿದ್ದಾರೆ. ಆತನ ತಲೆಗೆ ಏರ್‌ಗನ್ ಹಿಡಿದು ಬೆದರಿಸಿ, ದೊಣ್ಣೆ ಮತ್ತು ಕತ್ತಿಯಿಂದ ತೀವ್ರ ಹಲ್ಲೆ ನಡೆಸಿದ್ದಾರೆ. ಅಲ್ಲದೆ ಮಹದೇವನ ಮೊಬೈಲ್ ಕಿತ್ತುಕೊಂಡು, ನೀನು ಈ ಸ್ಥಿತಿಯಲ್ಲಿರುವುದನ್ನು ವಿಡಿಯೋ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುತ್ತೇವೆ. ನೀನು 50 ಲಕ್ಷ ಹಣ ನೀಡಿದರೆ ಮಾತ್ರ ನಿನ್ನನ್ನು ಇಲ್ಲಿಂದ ಹೊರಗೆ ಬಿಡುವುದಾಗಿ ಬೆದರಿಸಿದ್ದಾರೆ.

ಘಟನೆಯಿಂದ ವಿಚಲಿತನಾಗಿದ್ದ ಮಹದೇವ, ಇಂದು ಬೆಳಗ್ಗೆ ಶೌಚಾಲಯಕ್ಕೆ ಹೋಗುವುದಾಗಿ ಹೇಳಿ ಒಳ ಉಡುಪಿನಲ್ಲೇ ಕೊಠಡಿಯಿಂದ ಹೊರಬಂದವನೇ ಅಲ್ಲಿಂದ ತಪ್ಪಿಸಿಕೊಳ್ಳಲು ಓಡಿದ್ದಾನೆ. ಇದನ್ನು ಗಮನಿಸಿದ ಮೂವರು ಖದೀಮರು, ಮಹದೇವನನ್ನು ಹಿಂಬಾಲಿಸಿ ಆಟೋದಲ್ಲಿ ಕೂರಿಸಿಕೊಳ್ಳಲು ಯತ್ನಿಸಿದ್ದಾರೆ ಹೇಗೋ ಅವರಿಂದ ತಪ್ಪಿಸಿಕೊಂಡು ಬೇರೊಂದು ಆಟೋದಲ್ಲಿ ನಗರದ ಪೊಲೀಸ್ ಠಾಣೆಗೆ ತೆರಳಿ, ರಕ್ಷಣೆ ಪಡೆದಿದ್ದಾನೆ. ಕೂಡಲೇ ಪೊಲೀಸರು, ಮಹದೇವನನ್ನು ಬಂಧಿಸಿಟ್ಟಿದ್ದ ಸ್ಥಳಕ್ಕೆ ದೌಡಾಯಿಸಿದರಾದರೂ ಅಷ್ಟರಲ್ಲಿ ಖದೀಮರು ಪರಾರಿಯಾಗಿದ್ದರು.

ಅರೆಬೆತ್ತಲಾಗಿದ್ದ ಮಹದೇವನನ್ನು ಆಟೋಗೆ ಹತ್ತಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ದೃಶ್ಯ, ಕಟ್ಟಡವೊಂದರ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಮಹದೇವ ನೀಡಿದ ದೂರಿನನ್ವಯ ರಚನಾ, ಆಕೆಯ ತಾಯಿ ಸೇರಿದಂತೆ ಒಟ್ಟು ಆರು ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಬಂಧನಕ್ಕೆ ಶೋಧ ಮುಂದುವರೆಸಿದ್ದಾರೆ. ಮಹದೇವ ಮೇಲೆ ಹಲ್ಲೆ ನಡೆಸಿದ್ದ ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಮತದಾರರ ಪಟ್ಟಿಯ ಲೋಪ ನಿವಾರಣೆಗೆ ಚುನಾವಣಾ ಆಯೋಗದ ದಿಟ್ಟ ಹೆಜ್ಜೆ

ಮೈಸೂರು ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ಮ್ಯಾಪಿಂಗ್ ಕಾರ್ಯಕ್ಕೆ ಚಾಲನೆ

- ಮೈಸೂರು ನಗರ, ಜಿಲ್ಲೆಯಲ್ಲಿ 2,915 ಬೂತ್
- ಬಿಎಲ್‌ಒ ಸೇರಿ ಇತರೆ ಸಿಬ್ಬಂದಿ ಈ ಕಾರ್ಯದಲ್ಲಿ ಭಾಗಿ
- ಎರಡಕ್ಕಿಂತ ಹೆಚ್ಚು ಕಡೆ ಮತಪಟ್ಟಿಯಲ್ಲಿ ಹೆಸರಿರುವುದು ಡಿಲೀಟ್
- ಮುಂಬರುವ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಹಿನ್ನೆಲೆಯಲ್ಲಿ ಕ್ರಮ

ಮೈಸೂರು, ಡಿ.13(ಬಿಎಲ್‌ಯು)– ಮುಂಬರುವ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಹಿನ್ನೆಲೆಯಲ್ಲಿ 2025 ನೇ ಸಾಲಿನ ಮತದಾರರ ಪಟ್ಟಿಯನ್ನು ಖಚಿತಪಡಿಸುವ ಅಥವಾ ಮ್ಯಾಪಿಂಗ್ ಮಾಡುವ ಕಾರ್ಯ ಆರಂಭವಾಗಿದೆ.

ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಮತಪಟ್ಟಿಯನ್ನು ಮ್ಯಾಪಿಂಗ್ ಮಾಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ 2,915 ಮತಗಟ್ಟೆಗಳಿದ್ದು, ಪ್ರತಿಯೊಂದು ಮತಗಟ್ಟೆಯಲ್ಲಿಯೂ ಬೂತ್ ಮಟ್ಟದ ಅಧಿಕಾರಿ ನೇತೃತ್ವದ ಸಿಬ್ಬಂದಿ ಮತದಾರರ ಪಟ್ಟಿ ಮ್ಯಾಪಿಂಗ್ ಮಾಡುವ ಕಾರ್ಯ ಆರಂಭಿಸಿದ್ದಾರೆ.



ಮೈಸೂರಿನ ರಾಮಾನುಜ ರಸ್ತೆಯ ಸೇಂಟ್ ಮೇರಿಸ್ ಶಾಲೆಯ ಬೂತ್‌ನಲ್ಲಿ ಶನಿವಾರ ಮತದಾನದ ಮ್ಯಾಪಿಂಗ್‌ನಲ್ಲಿ ತೊಡಗಿರುವ ಮತಗಟ್ಟೆ ಸಿಬ್ಬಂದಿಗಳು.

ಇಂದಿನಿಂದ ಆರಂಭವಾಗಿರುವ ಮ್ಯಾಪಿಂಗ್ ಕಾರ್ಯ ನಾಳೆ ಕೂಡ ಮುಂದುವರೆಯಲಿದೆ. ಬೆಳಿಗ್ಗೆ 10 ರಿಂದ 5 ಗಂಟೆವರೆಗೆ ಆಯಾ ಮತಗಟ್ಟೆಯಲ್ಲಿ ಹಾಜರಿರುವ ಬೂತ್ ಮಟ್ಟದ ಅಧಿಕಾರಿಗಳು ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡಲಿದ್ದಾರೆ.

2002ರಲ್ಲಿ ನಡೆದ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ (ಎಸ್‌ಎಲ್ ಆರ್) ಯ ಪಟ್ಟಿಯನ್ನು 2025 ನೇ ಸಾಲಿನ ಮತದಾರರ ಪಟ್ಟಿಗೆ ಹೋಲಿಕೆ ಮಾಡುತ್ತಿದ್ದಾರೆ. ಈ ಮೂಲಕ 2002 ರಲ್ಲಿ ಮತ ಚಲಾಯಿಸಿದವರನ್ನು 2025 ರ ಮತಪಟ್ಟಿಯಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳುತ್ತಾರೆ.

ಇದರಿಂದ 2002ಕ್ಕಿಂತ 2025ರಲ್ಲಿ ಹೆಚ್ಚುವಾಗಿರುವ ಮತದಾರರ ಸಂಖ್ಯೆಯ ಮಾಹಿತಿ ಲಭ್ಯವಾಗಲಿದೆ. ಈ ಮೂಲಕ ಮತಪಟ್ಟಿಯಲ್ಲಿರುವ ಲೋಪ ದೋಷವನ್ನು ಸರಿಪಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

2002ರಲ್ಲಿ ಮತದಾನ ಮಾಡಿದವರ ಹೆಸರು 2025ರ ಮತಪಟ್ಟಿಯಲ್ಲಿ ಇಲ್ಲದಿದ್ದರೆ ಮುಂಬರುವ ಮತದಾರರ ಸಮಗ್ರ ಪರಿಷ್ಕರಣೆ ವೇಳೆ ಅವರ ಹೆಸರನ್ನು ಸೇರಿಸಲಿದ್ದಾರೆ.

ಮತದಾರರು ಆಯಾ ಮತದಾನ ಮಾಡುವ ಕೇಂದ್ರಕ್ಕೆ ಭೇಟಿ ನೀಡಿ, ಬೂತ್ ಮಟ್ಟದ ಅಧಿಕಾರಿಯನ್ನು ಭೇಟಿ ಮಾಡಬೇಕು. 2002ರಲ್ಲಿ ಮತದಾನ ಮಾಡಿದ ಗುರುತಿನ ಚೀಟಿ, ಮತದಾನ ಮಾಡಿದ ಮತಕ್ಷೇತ್ರ, ಮತದಾನ ಕೇಂದ್ರ, ಮತದಾನ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆಯ ದಾಖಲಾತಿಗಳನ್ನು ಹಾಜರುಪಡಿಸಿ ಮತದಾರ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೇ ಎಂದು ಖಚಿತಪಡಿಸಿಕೊಳ್ಳಬೇಕು.

ಚುನಾವಣಾ ಆಯೋಗದ ಇಂತಹ ಕ್ರಮದಿಂದ ಚುನಾವಣೆ ವೇಳೆ ನಕಲಿ ಮತದಾನ ಮಾಡುವುದು ತಪ್ಪುತ್ತದೆ. ಅಲ್ಲದೆ ಮತದಾನದ ಸಮಗ್ರ ಪರಿಷ್ಕರಣೆ ವೇಳೆ ಒಬ್ಬ ವ್ಯಕ್ತಿ ಬೇರೆ ಬೇರೆ ಸ್ಥಳಗಳಲ್ಲಿ ಮತಪಟ್ಟಿಯಲ್ಲಿ ಹೆಸರು ಹೊಂದುವುದು ಡಿಲೀಟ್ ಆಗುತ್ತದೆ.

ಮತಗಟ್ಟೆಗೆ ಮತದಾರರು ಬರಲಿ ಅಥವಾ ಬಿಡಲಿ ಬೂತ್ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ 2002ರ ಮತದಾರರ ಪಟ್ಟಿಯಲ್ಲಿರುವ ಹೆಸರುಗಳನ್ನು 2025 ರಲ್ಲಿನ ಮತದಾರ ಪಟ್ಟಿಗೆ ಹೋಲಿಕೆ ಮಾಡುತ್ತಾರೆ.

2002ರ ಮತಪಟ್ಟಿಯನ್ನು 2025 ಕ್ಕೆ ಹೋಲಿಕೆ ಮಾಡಿದ ಸಂದರ್ಭದಲ್ಲಿ ಹೆಚ್ಚು ಅಥವಾ ಕಡಿಮೆ ಸಂಖ್ಯೆ ಇರುವುದು ಪತ್ತೆಯಾದರೆ ಬೂತ್ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಅನುಮಾನ ಇರುವ ಮನೆಗಳಿಗೆ ಭೇಟಿ ನೀಡಿ ಮತಪಟ್ಟಿಯಲ್ಲಿ ಹೆಸರು ಇರುವ ಅಥವಾ ಇಲ್ಲದಿರುವುದನ್ನು ಖಾತರಿಪಡಿಸಿಕೊಳ್ಳುತ್ತಾರೆ.

ಮತಗಳ್ಳತನ ಅಥವಾ ಓಟ್ ಚೋರಿ ಬಗ್ಗೆ ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಚುನಾವಣಾ ಆಯೋಗದ ವಿರುದ್ಧ ಗಂಭೀರ ಆರೋಪ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮತಪಟ್ಟಿಯಲ್ಲಿ ಯಾವುದೇ ಲೋಪಗಳು ಇರದಂತೆ ಚುನಾವಣಾ ಆಯೋಗ ಮತಪಟ್ಟಿಯ ಮ್ಯಾಪಿಂಗ್ ಸೇರಿದಂತೆ ಇತರೆ ಕಾರ್ಯವನ್ನು ಕೈಗೆತ್ತಿಕೊಂಡಿದೆ.

ಮತದಾರರ ಪಟ್ಟಿಯ ಮ್ಯಾಪಿಂಗ್ ಬಗ್ಗೆ ಜನರಿಗೆ ಮಾಹಿತಿ ನೀಡಿಲ್ಲ

ಮತದಾರರ ಪಟ್ಟಿಯ ಮ್ಯಾಪಿಂಗ್ ಬಗ್ಗೆ ಜನರಿಗೆ ಮಾಹಿತಿ ನೀಡದಿರುವುದು ನೀರಸ ಪ್ರತಿಕ್ರಿಯೆಗೆ ಮೂಲ ಕಾರಣವಾಗಿದೆ. ಮತದಾರರ ಪಟ್ಟಿಯ ಮ್ಯಾಪಿಂಗ್ ಡಿಸೆಂಬರ್ 13 ಮತ್ತು 14 ರಂದು ನಡೆಯಲಿದೆ. ಆದರೆ ಈ ಬಗ್ಗೆ ಒಂದು ದಿನ ಮುಂಚಿತವಾಗಿ, ಅಂದರೆ ಡಿಸೆಂಬರ್ 12 ರಂದು ಜನರಿಗೆ ಮಾಹಿತಿ ನೀಡಿದ್ದಾರೆ. ಅಲ್ಲದೆ ಮತದಾರರ ಪಟ್ಟಿಯ ಮ್ಯಾಪಿಂಗ್ ಎಂದರೇನು ಎಂಬ ಬಗ್ಗೆ ಕೂಡ ಜನರಿಗೆ ಮಾಹಿತಿ ನೀಡಿಲ್ಲ. ಈ ಎಲ್ಲಾ ಕಾರಣದಿಂದ ಮತದಾರರು ಮತಗಟ್ಟೆ ಕಡೆ ತಿರುಗಿಯೂ ಕೂಡ ನೋಡಲಿಲ್ಲ. ಇದರಿಂದ ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ ಒಬ್ಬನೇ ಒಬ್ಬ ಮತದಾರ ಮತಗಟ್ಟೆಗೆ ಬರಲಿಲ್ಲ.

ಮತದಾರರ ದಾರಿ ಕಾದ ಬೂತ್ ಮಟ್ಟದ ಅಧಿಕಾರಿಗಳು

ಮತದಾರರ ಪಟ್ಟಿಯ ಮ್ಯಾಪಿಂಗ್ ಮಾಡುವುದಕ್ಕೆ ಮತದಾರರ ಸಹಭಾಗಿತ್ವ ಬಹಳ ಮುಖ್ಯ ಆದರೆ ಮತದಾರರು ಮತಗಟ್ಟೆಗೆ ಭೇಟಿ ನೀಡಿ ಮತಪಟ್ಟಿಯಲ್ಲಿ ತಮ್ಮ ಹೆಸರು, ವಿಳಾಸ, ಮತಗಟ್ಟೆ ಸಂಖ್ಯೆ ಸೇರಿದಂತೆ ಇತರೆ ವಿವರ ಸರಿಯಾಗಿದೆಯೇ ಎಂಬ ಬಗ್ಗೆ ಸ್ವಯಂ ಪರಿಶೀಲನೆ ನಡೆಸುತ್ತಿಲ್ಲ. ಇದರಿಂದ ಬೂತ್‌ಗಳಲ್ಲಿ ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಬೆಳಿಗ್ಗೆಯಿಂದ ಸಂಜೆವರೆಗೆ ಮತದಾರರ ದಾರಿ ಕಾಯುವುದು ಸಾಮಾನ್ಯವಾಗಿತ್ತು. ಇದರಿಂದ ಚುನಾವಣಾ ಆಯೋಗ ನಡೆಸುವ ಮ್ಯಾಪಿಂಗ್ ಕಾರ್ಯಕ್ಕೆ ಮತದಾರರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಚುನಾವಣಾ ಆಯೋಗ ನೀಡಿರುವ ಈ ಅವಕಾಶವನ್ನು ಬಳಸಿಕೊಂಡು ಮತಪಟ್ಟಿಯಲ್ಲಿ ತಮ್ಮ ಹೆಸರು ಇದೆಯೇ ಎಂದು ಮತದಾರರು ಖಚಿತಪಡಿಸಿಕೊಳ್ಳಬೇಕು. ಈಗ ಮೌನವಾಗಿದ್ದು ಚುನಾವಣೆ ಸಂದರ್ಭದಲ್ಲಿ ತಮ್ಮ ಹೆಸರು ಮತಪಟ್ಟಿಯಲ್ಲಿ ಇಲ್ಲ ಎಂದು ಆರೋಪ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ಎದುರಾಗಿದೆ.

ಎಂಸಿಡಿಸಿಸಿ ಬ್ಯಾಂಕ್ ಮತ ಎಣಿಕೆ ವೇಳೆ ಅಕ್ರಮ ನಡೆದಿದೆ

- ಬ್ಯಾಂಕ್ ನಿರ್ದೇಶಕರೂ ಆದ ಶಾಸಕ ಜಿ.ಡಿ.ಹರೀಶ್‌ಗೌಡ ಆರೋಪ
- ಕೋರ್ಟ್ ಆದೇಶವೂ ಉಲ್ಲಂಘನೆ ಆಗಿದೆ; ಈ ಸಂಬಂಧ ಕಾನೂನು ಹೋರಾಟ

ಮೈಸೂರು, ಡಿ.13(ಎಂಟಿವೈ)– ಎಂಸಿಡಿಸಿಸಿ ಬ್ಯಾಂಕ್‌ನ ಮೂರು ಸ್ಥಾನಗಳ ಚುನಾವಣೆಯ ಮತ ಎಣಿಕೆ ವೇಳೆ ಹೈಕೋರ್ಟ್ ಆದೇಶ ಉಲ್ಲಂಘಿಸಿದ್ದಲ್ಲದೆ, ಮತಪತ್ರಗಳನ್ನೇ ಬದಲಾಯಿಸಿ ಎಣಿಕೆ ಮಾಡಲಾಗಿದೆ ಎಂದು ಶಾಸಕ ಜಿ.ಡಿ. ಹರೀಶ್ ಗೌಡ ದೂರಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರು–ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಚುನಾವಣೆ ಯಾವ ರೀತಿ ನಡೆದಿತ್ತು ಎನ್ನುವುದನ್ನು ನೋಡಿದ್ದೇವೆ. ಹಿಂದಿನ ಸಹಕಾರ ಸಚಿವ ಕೆಎನ್. ರಾಜಣ್ಣ ಅವರೇ ಐದು ಮತಗಳನ್ನು ಸೇರಿಸಿ ಗೆಲುವು ಸಾಧಿಸಲು ಅನುಕೂಲ ಮಾಡಿಕೊಟ್ಟಿದ್ದನ್ನು ಹೇಳಿದ್ದರು. ಅದರ ಮುಂದುವರಿದ ಭಾಗವಾಗಿ ಈಗ ಎಣಿಕೆ ನಡೆದಿದೆ. ನ್ಯಾಯಾಲಯವು ಮತ ಎಣಿಕೆಗೆ ಅನುಮತಿ ನೀಡಿದರೂ ನಂತರ ಸೆಕ್ಷನ್ 17ರ ಕಾಯ್ದೆ ಅಡಿ ಹೋಗುವಂತೆ ಹೇಳಿತ್ತು ಆದರೆ ಹೈಕೋರ್ಟ್ ಆದೇಶ ವನ್ನು ಉಲ್ಲಂಘನೆ ಮಾಡಲಾಗಿದೆ ಎಂದು ದೂರಿದರು.

ಗೃಹ ನಿರ್ಮಾಣ ಸಹಕಾರ ಸಂಘದ ಕ್ಷೇತ್ರದಲ್ಲಿ ಮೂರು ಮತಗಳ ಮತಪತ್ರದ ಬಾಕ್ಸ್ ಅನ್ನು ಪ್ರತ್ಯೇಕವಾಗಿ ಇಡಲಾಗಿತ್ತು. ಈ ಮತಗಳನ್ನು ಎಣಿಕೆ ಮಾಡಿರುವುದರಲ್ಲಿ ಒಂದು ಮತ ಹೆಚ್.ವಿ.ರಾಜೀವ್, ಎರಡು ಮತ ಜಿ.ಎನ್.ಮಂಜುನಾಥ್‌ಗೆ ಬಿದ್ದಿವೆ. ಆದರೆ ಮತ ಚಲಾಯಿಸಿರುವ ಮತದಾರರು ನನ್ನ ಬಳಿ ಬಂದು ಪ್ರಾಮಾಣಿಕವಾಗಿ ಮತ ಚಲಾಯಿಸಿದ್ದೇವೆ ಎಂದು ಹೇಳಿದ್ದಾರೆ. ಮತ ಹಾಕಿರುವ ಮತದಾರರೇ ಹೇಳುತ್ತಿರುವುದನ್ನು ಗಮನಿಸಿದರೆ ಎಣಿಕೆ ವೇಳೆ ವ್ಯತ್ಯಾಸ ಆಗಿರುವುದು ಕಾಣಿಸುತ್ತದೆ. ದೇಶಾದ್ಯಂತ ಮತ ಚೋರಿ ಬಗ್ಗೆ ಮಾತನಾಡುವ ರಾಹುಲ್ ಗಾಂಧಿ ಅವರು ಎಂಸಿಡಿಸಿಸಿ ಬ್ಯಾಂಕ್ ಮತ ಚೋರಿ ಕುರಿತು ಬಂದು ನೋಡಬೇಕು ಎಂದು ಆಗ್ರಹಿಸಿದರು.

ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಲಾಗಿದೆ. ಕಾನೂನು ಬಾಹಿರವಾಗಿ ಎಣಿಕೆ ಮಾಡಲಾಗಿದೆ. ಮತ ಚಲಾಯಿಸಿದ ವ್ಯಕ್ತಿಗಳು ಮೋಸ ಆಗಿದೆ ಎನ್ನುವ ಅಂಶವನ್ನು ಹೇಳಿರುವುದರಿಂದ ಕಾನೂನು ಹೋರಾಟ ಮಾಡುತ್ತೇವೆ. ಈಗಾಗಲೇ ಮತ ಚಲಾಯಿಸಿದ ವ್ಯಕ್ತಿಗಳು ಹೋರಾಟ ಮಾಡಲು ಸಿದ್ಧರಿದ್ದಾರೆ. ಹೀಗಾಗಿ ಕಾನೂನು ಹೋರಾಟ ಮಾಡುವುದಾಗಿ ತಿಳಿಸಿದರು.

ರಾಜ್ಯದ ಅಭಿವೃದ್ಧಿ ಕುರಿತು ಆಲೋಚನೆ ಮಾಡುತ್ತಿಲ್ಲ: ಕಾಂಗ್ರೆಸ್ ನಾಯಕರಿಗೆ ಮುಖ್ಯಮಂತ್ರಿ ಬದಲಾವಣೆ, ಅಧಿಕಾರ ಹಂಚಿಕೆ ಚಿಂತೆಯೇ ಹೊರತು ರಾಜ್ಯದ ಅಭಿವೃದ್ಧಿ ಕುರಿತು ಯೋಚನೆ ಮಾಡುತ್ತಿಲ್ಲ. ಇದರಿಂದ ರಾಜ್ಯದ ಅಭಿವೃದ್ಧಿ ಮರೆತಿದ್ದಾರೆ. ಸಿಎಂ, ಡಿಸಿಎಂ ಆಪ್ತ ಸಚಿವರು, ಶಾಸಕರು ಪ್ರತಿದಿನ ಅಧಿಕಾರ ಹಂಚಿಕೆಯ ಬಗ್ಗೆ ಮಾತನಾಡುತ್ತಿದ್ದಾರೆ. ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಸದನದಲ್ಲಿ ಚರ್ಚೆಯಾಗುತ್ತಿಲ್ಲ. ಬದಲಿಗೆ ಕೆಲವರು ನಾಯಕತ್ವ ಬದಲಾವಣೆಯ ಚಿಂತೆಯಲ್ಲಿದ್ದರೆ, ಇನ್ನೂ ಹಲವರು ಸಚಿವ ಸ್ಥಾನದ ಚಿಂತೆ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತಾಗಿ ಕರೆದಿರುವ ಅಧಿವೇಶನಕ್ಕೆ 30 ಕೋಟಿ ಖರ್ಚಾಗುತ್ತದೆ. ಇವರ ಚಿಂತೆಯಿಂದ ಹಣ ಪೋಲಾಗುತ್ತದೆ. ಶಾಸಕರು ಪ್ರಸ್ತಾಪಿಸಿದ ವಿಚಾರಗಳಿಗೆ ಉತ್ತರ ನೀಡುವಂತಾಗಬೇಕು ಎಂದು ಒತ್ತಾಯಿಸಿದರು.


ಕನ್ನಡ ಸಂಘಟನೆಗಳು ಕುವೆಂಪು ನೆನೆದಂತೆ, ಆಲೂರು ವೆಂಕಟರಾಯರನ್ನೂ ನೆನೆಯಬೇಕಿದೆ

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಮತ

ಮೈಸೂರು, ಡಿ.13(ಎಸ್‌ಪಿಎನ್)– ಕನ್ನಡ ಸಂಘ–ಸಂಸ್ಥೆ, ಸಂಘಟನೆಗಳು ಕುವೆಂಪು ಅವರನ್ನು ನೆನೆದಷ್ಟೇ, ಕರ್ನಾಟಕ ಏಕೀಕರಣದ ರೂವಾರಿ ಆಲೂರು ವೆಂಕಟರಾಯರನ್ನೂ ನೆನೆಯುವುದು ಆದ್ಯ ಕರ್ತವ್ಯವಾಗಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ಒಂದನೇ ಹಂತದ ಜಿಲ್ಲಾ ಕಸಾಪ ಭವನದಲ್ಲಿ ಕರ್ನಾಟಕ ಕನ್ನಡ ರಕ್ಷಣಾ ವೇದಿಕೆಯ ಮೈಸೂರು ಜಿಲ್ಲಾ ಘಟಕ ಉದ್ಘಾಟನೆ ಹಾಗೂ ಸಾಧಕರನ್ನು ಸನ್ಮಾನಿಸಿ ಮಾತನಾಡಿದರು. ಕರ್ನಾಟಕ ಏಕೀಕರಣಕ್ಕಾಗಿ ಆಲೂರು ವೆಂಕಟರಾಯರ ಕೊಡುಗೆ ಕುರಿತು ಇಂದಿನ ವಿದ್ಯಾರ್ಥಿಗಳಲ್ಲಿ ಸರಿಯಾದ ಮಾಹಿತಿಯಿಲ್ಲ. ಹಾಗಾಗಿ ಆಲೂರು ವೆಂಕಟರಾಯರ ಬಗ್ಗೆ ವಿದ್ಯಾರ್ಥಿದಿಸೆಯಲ್ಲಿ ತಿಳಿಸುವ ಪ್ರಯತ್ನವಾಗಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ಸಂಘಟನೆಗಳು ಅದರ ಧ್ಯೇಯೋದ್ದೇಶಕ್ಕಾಗಿ ಹೋರಾಟಕ್ಕಿಳಿಯಬೇಕಿದೆ. ಇದರ ಹೊರತಾಗಿಯೂ ಸಂಘ–ಸಂಸ್ಥೆಗಳಲ್ಲಿ ರಾಜಕೀಯ ನುಸುಳಿ ಅದರ ಯಂತ್ರಗಳಾಗಬಾರದು. ಕನ್ನಡ ಸಂಘಟನೆಗಳು ಭಾಷೆ, ಸಂಸ್ಕೃತಿ, ಪರಂಪರೆಯ ರಕ್ಷಣೆಯ ಕೆಲಸ ಮಾಡುವುದು ಅತ್ಯವಶ್ಯಕ. ರಾಜಕೀಯ ಕ್ಷಣಿಕ, ಭಾಷೆ ಶಾಶ್ವತ ಅದಕ್ಕಾಗಿ ಹೋರಾಟ ಅನಿವಾರ್ಯ. ಈ ಮೂಲಕ ಕನ್ನಡ ವಿರೋಧಿ ನಡೆಯನ್ನು ಪ್ರಶ್ನಿಸಿ, ಕನ್ನಡ ಕಟ್ಟುವ ಕೆಲಸವಾಗಬೇಕಿದೆ ಎಂದು ತಿಳಿಸಿದರು.



70ನೇ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸಿಂದುವಳ್ಳಿ ಶಿವಕುಮಾರ್, ಎ.ಪಿ.ಶ್ರೀನಿವಾಸನ್ ಅವರನ್ನು ಸನ್ಮಾನಿಸಲಾಯಿತು.

ನಮ್ಮ ಪರಂಪರೆ, ಸಂಸ್ಕೃತಿ ಕನ್ನಡ ಭಾಷೆಯಿಂದ ನಿರ್ಮಿತವಾಗಿದೆ. ನಾವೆಲ್ಲರೂ ಉತ್ತಮವಾದ ರಾಜ್ಯ, ಭೂಪ್ರದೇಶದಲ್ಲಿ ಹುಟ್ಟಿ ಬದುಕು ನಡೆಸುತಿದ್ದು, ಅದನ್ನು ಕಾಪಾಡಿಕೊಳ್ಳುವ ಕೆಲಸ ಮಾಡಬೇಕಿದೆ. ಕೇಂದ್ರ ಸರ್ಕಾರದ ಮೇಲೆ ಹಲವು ರಾಜಕೀಯ ಪಕ್ಷಗಳು ಕನ್ನಡ ವಿರೋಧಿ ಹಿಂದಿ ಹೇರಿಕೆ ಎಂಬ ಸುಳ್ಳು ಅಪಾದನೆಯನ್ನು ಹೊರಿಸಲಾಗುತ್ತಿದ್ದು, ಭಾರತದಲ್ಲಿ ಹಲವಾರು ಭಾಷೆಗಳಿದ್ದು, ಸ್ಥಳೀಯ ಭಾಷೆಗಳ ಉತ್ತೇಜನ ನೀಡುವ ಕೆಲಸ ಸರ್ಕಾರ ಮಾಡುತ್ತಿದೆ. ನಮ್ಮ ಹೋರಾಟ ಎಂದೆಂದಿಗೂ ಸ್ಥಳೀಯ ಭಾಷೆಗಳ ಪರವಾಗಿದೆ. ಕೇಂದ್ರ ಸರ್ಕಾರದ ಈ ನಡೆಯನ್ನು ಜನರು ಗುರುತಿಸಬೇಕಿದೆ ಎಂದು ಮನವಿ ಮಾಡಿದರು.

ಕನ್ನಡದ ಉತ್ತೇಜನಕ್ಕಾಗಿ ಕೇಂದ್ರ ಸರ್ಕಾರ ಕನ್ನಡ ಶಾಸ್ತ್ರೀಯ ಕೇಂದ್ರ ತೆರೆಯಲು, ಮೈಸೂರಿನಲ್ಲಿ ಸ್ಥಳ ಪರಿಶೀಲಿಸಿ, ಜಾಗ ಗುರುತು ಮಾಡಲಾಗಿದೆ. ವಿಶ್ವವಿದ್ಯಾನಿಲಯದಿಂದ ಸ್ಥಳ ಆಯ್ಕೆ ಮುಗಿದಿದ್ದು, ಪ್ರತ್ಯೇಕವಾಗಿ ಕೇಂದ್ರ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ. ಇದರಿಂದ ಕನ್ನಡ ಸಂಸ್ಕೃತಿ, ಪರಂಪರೆ, ಇತಿಹಾಸ, ಭಾಷೆ ಉತ್ತೇಜನಕ್ಕೆ ಅವಕಾಶವಿದೆ. ಇದು ಕನ್ನಡಕ್ಕಾಗಿ ಸಿಕ್ಕ ಬಹುದೊಡ್ಡ ಭಾಗ್ಯ ಎಂದು ಸಂಸದ ಯದುವೀರ್ ತಿಳಿಸಿದರು.

ಸನ್ಮಾನ: ಈ ವೇಳೆ 70ನೇ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸಿಂದುವಳ್ಳಿ ಶಿವಕುಮಾರ್, ಎ.ಪಿ.ಶ್ರೀನಿವಾಸ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಸಿಂಧುವಳ್ಳಿ ದಾಸೋಹ ಮಠದ ಶ್ರೀ ಶಿವಕುಮಾರ್ ಸ್ವಾಮೀಜಿ, ಮಾಜಿ ಶಾಸಕ ಎಲ್.ನಾಗೇಂದ್ರ, ಕಸಪಾ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಬಿಜೆಪಿ ಮುಖಂಡ ಚೌಡಪ್ಪ, ನಗರಪಾಲಿಕೆ ಮಾಜಿ ಸದಸ್ಯ ಸುಬ್ಬಯ್ಯ, ಸಮಾಜ ಸೇವಕ ಗೋಪಾಲಸ್ವಾಮಿ, ಯುವರಾಜ್, ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಚಾ.ಗು.ನಾಗರಾಜು, ಜಿಲ್ಲಾಧ್ಯಕ್ಷ ಸಂತೋಷ್, ಪ್ರಧಾನ ಕಾರ್ಯದರ್ಶಿ ವಿನಯ್‌ಕುಮಾರ್ ಮತ್ತಿತರರಿದ್ದರು.

ದುಶ್ಚಟಗಳಿಂದ ದೂರವಿರಿ; ವಿದ್ಯಾರ್ಥಿಗಳಿಗೆ ಕಿವಿಮಾತು



'ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳ ಅರಿವು ಅಭಿಯಾನ' ಕಾರ್ಯಕ್ರಮಕ್ಕೆ ಜಿಲ್ಲಾ ಘಟಕದ ಅಧ್ಯಕ್ಷ ಸೈಯದ್ ಮುದಾಸ್ಸೀರ್ ಚಾಲನೆ ನೀಡಿದರು.

ಮೈಸೂರು, ಡಿ.13(ವಿವಿಹೆಚ್)– ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರ ಇರಬೇಕು. ಉತ್ತಮ ಆರೋಗ್ಯದಿಂದ ಮಾತ್ರ ಗುಣಮಟ್ಟದ ಜೀವನ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಮಾದಕ ವಸ್ತುಗಳು ವೈಯಕ್ತಿಕ ಜೀವನವನ್ನು ಮಾತ್ರವಲ್ಲದೇ ಇಡೀ ಸಮಾಜವನ್ನೇ ವಿನಾಶದತ್ತ ಕೊಂಡೊಯ್ಯುತ್ತದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಘಟಕ ಅಧ್ಯಕ್ಷ ಸೈಯದ್ ಮುದಾಸ್ಸೀರ್ ಕಿವಿಮಾತು ಹೇಳಿದರು.

ಮೈಸೂರಿನ ಗೌಸಿಯನಗರ(ಕಲ್ಯಾಣಗಿರಿ) ಸರ್ಕಾರಿ ಪ್ರೌಢಶಾಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಘಟಕದ ವತಿಯಿಂದ 'ನಮ್ಮ ನಡೆ ಮಾದಕ ವಸ್ತುಗಳ ನಿರ್ನಾಮದ ಕಡೆ', 'ಬದುಕಿ, ಬದುಕಲು ಬಿಡಿ' ಧ್ಯೇಯ ವಾಕ್ಯದೊಂದಿಗೆ ಆಯೋಜಿಸಲಾಗಿದ್ದ "ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳ ಅರಿವು ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳು ಹಣ ಸಂಪಾದಿಸಲು ಭಾಗಶಃ ಕೆಟ್ಟ ಹಾದಿ ಹಿಡಿದಿದ್ದಾರೆ. ಇದು ಸಮಾಜ ಮಾರಕ ಕೆಲಸವಾಗಿದೆ. ಉನ್ನತ ಶಿಕ್ಷಣ ಪಡೆದು ಪೋಷಕರು ಹೆಮ್ಮೆ ಪಡುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಮುಖ್ಯ ಶಿಕ್ಷಕರಾದ ಮಾದೇವಸ್ವಾಮಿ ಮಾತನಾಡಿ, ಹದಿಹರೆಯದ ವಿದ್ಯಾರ್ಥಿಗಳು ಕೆಟ್ಟ ಚಟಗಳಿಗೆ ಬಲಿಯಾಗುತ್ತಿದ್ದಾರೆ. ಮಾದಕ ವಸ್ತುಗಳ ಸೇವನೆಯಿಂದ ಬರುವ ರೋಗಗಳು ಹಾಗೂ ದೈಹಿಕ, ಮಾನಸಿಕ ಆರೋಗ್ಯದ ಮೇಲೆ ಉಂಟಾಗುವ ಕೆಟ್ಟ ಪರಿಣಾಮಗಳ ಬಗ್ಗೆ ಅರಿವಿರಬೇಕು ಎಂದರು.

ಕೆ ಆರ್ ಆಸ್ಪತ್ರೆಯ ಆರ್.ಎಂ.ಒ. ಡಾ. ಎಂ.ಐ.ನಯಾಜ್ ಪಾಷ ಪಿಪಿಟಿ ಮೂಲಕ ಡ್ರಗ್ಸ್ ಸೇವನೆಯಿಂದ ಉಂಟಾಗುವ ತೊಂದರೆಗಳ ಬಗ್ಗೆ ಮಾಹಿತಿ ನೀಡಿದರು.

ಅಲ್ ಅನ್ಸಾರ್ ಆಸ್ಪತ್ರೆಯ ವೈದ್ಯ ಸೈಯದ್ ಉಮರ್, ಡಾ. ಅಮೀನಾ ಸಿದ್ದೀಖಾ, ನಿಕಟಪೂರ್ವ ಕಾರ್ಯದರ್ಶಿ ಅಜೀಜ್ ಖಾನ್, ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಝಮೀರಾ ತಾಜ್, ಮಹಿಳಾ ಸಂಘಟನಾ ಕಾರ್ಯದರ್ಶಿ ತಸ್ನೀಮ್ ಫಿರ್ದೋಸ್, ಶಿಕ್ಷಕರಾದ ಸೈಯದ್ ನಯಾಜ್, ಕೆಎಸ್‌ಜಿ ಮೇವಾದ ಸಲಹೆಗಾರರಾದ ಝರೀನ ಖುರ್ಷೀದ್, ಹಿರಿಯ ಉಪಾಧ್ಯಕ್ಷ ಸೈಯದ್ ದಸ್ತಗೀರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೈಯದ್ ಸಾಧಿಕ್ ಪಾಷ ಉಪಸ್ಥಿತರಿದ್ದರು.

ಇಂದು ಎಂಜಿಪಿ ಸಾಮಾನ್ಯ ಸಭೆ

ಮೈಸೂರು,ಡಿ.13(ಎಸ್‌ಪಿಎನ್)– ಕಾನೂನು ಸುವ್ಯವಸ್ಥೆ ಹಾಗೂ ಅಪರಾಧ ತಡೆಗಟ್ಟುವಿಕೆ ಮಾಸಾಚರಣೆ ಪ್ರಯುಕ್ತ ಸಾರ್ವಜನಿಕರ ಜೊತೆ ಮುಕ್ತವಾಗಿ ಚರ್ಚಿಸಲು ನರಸಿಂಹರಾಜ ಉಪ ವಿಭಾಗದ ಎಸಿಪಿ ಮ್ಯಾಥ್ಯೂ ಥಾಮಸ್ ಅವರೊಂದಿಗೆ ಡಿ.14ರಂದು ಸಂಜೆ 4 ಗಂಟೆಗೆ ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಸಂವಾದ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ದೂ:0821–2515150, ಮೊ.94807–33933 ಸಂಪರ್ಕಿಸಬಹುದು.

ಹೆಚ್.ಡಿ.ಕೋಟೆಯ ಕಾಡಂಚಲ್ಲಿ ತಲೆ ಎತ್ತಿರುವ ಅಕ್ರಮ ರೆಸಾರ್ಟ್, ಹೋಂ ಸ್ಟೇಗಳು!

ಸಿಲಿಕಾನ್ ಸಿಟಿ ಬೆಂಗಳೂರಿನ ಟೆಕ್ಕಿಗಳೇ ಇವುಗಳ ಮಾಮೂಲಿ ಗಿರಾಕಿಗಳು!!

- ಒಂದು ದಿನಕ್ಕೆ 3 ರಿಂದ 5 ಸಾವಿರ ದರ ನಿಗದಿ
- ರಾತ್ರಿ ಆಯಿತೆಂದರೆ ಫೈರ್ ಕ್ಯಾಂಪ್
- ಕಿವಿ ತೂತಾಗುವಂತಹ ಸಂಗೀತ ಅಬ್ಬರ
- ವನ್ಯಜೀವಿಗಳು ಕಾಡಿನಿಂದ ನಾಡಿಗೆ ಬರಲು ಇದೂ ಒಂದು ಕಾರಣ



ಕಬಿನಿ ಹಿನ್ನೀರಿನ ಜಮೀನುಗಳಿಗೆ ಚಿನ್ನದ ಬೆಲೆ

ಹತ್ತಾರು ರೆಸಾರ್ಟ್‌ಗಳಿರುವ ಹೆಚ್.ಡಿ.ಕೋಟೆಯ ಕಬಿನಿ ಹಿನ್ನೀರಿನ ಜಮೀನುಗಳಿಗೆ ಚಿನ್ನದ ಬೆಲೆ ಬಂದಿದೆ. ಈ ಮೊದಲು ಎಕರೆ ಐದಾರು ಲಕ್ಷ ರೂಪಾಯಿಗೆ ದೊರೆಯುತ್ತಿತ್ತು. ಆದರೆ ಈಗ ಸುತ್ತ ಮುತ್ತ ಹತ್ತಾರು ರೆಸಾರ್ಟ್ ಹಾಗೂ ಹೋಂ ಸ್ಟೇ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ಇಲ್ಲಿನ ಭೂಮಿಗೆ ಚಿನ್ನದ ಬೆಲೆ ಬಂದಿದೆ.

ಒಂದು ಎಕರೆ ಭೂಮಿಗೆ ಕನಿಷ್ಟ 50 ರಿಂದ 80 ಲಕ್ಷ ರೂಪಾಯಿವರೆಗೆ ಬೆಲೆ ಇದೆ. ಜಮೀನುಗಳಲ್ಲಿ ರೆಸಾರ್ಟ್ ಹಾಗೂ ಹೋಂ ಸ್ಟೇ ನಿರ್ಮಿಸಿ ಭಾರೀ ಲಾಭ ಮಾಡುತ್ತಿದ್ದಾರೆ. ಕೆಲವರು ರೆಸಾರ್ಟ್ ಹಾಗೂ ಹೋಂ ಸ್ಟೇ ನಿರ್ಮಿಸಿದರೆ, ಮತ್ತೆ ಕೆಲವರು ಜಮೀನು ಸುತ್ತ ಕಾಂಪೌಂಡ್ ಹಾಗೂ ಮುಳ್ಳು ತಂತಿ ಬೇಲಿ ಹಾಕಿಸಿ ಫಾರಂ ಹೌಸ್ ಮಾಡಿಕೊಂಡಿದ್ದಾರೆ.

ಬೆಂಗಳೂರು, ಮೈಸೂರಿನ ರೈತರು ಬಡಾವಣೆ ನಿರ್ಮಾಣ ಮಾಡಲು ಜಮೀನು ಮಾರಾಟ ಮಾಡಿ, ಆ ಹಣದಲ್ಲಿ ಇಲ್ಲಿ ಜಮೀನು ಖರೀದಿಸಿದ್ದಾರೆ. ಇದರಿಂದ ಈ ಭಾಗದ ಜಮೀನುಗಳಿಗೆ ಭಾರೀ ಬೇಡಿಕೆ ಬಂದಿದೆ.

ಮೈಸೂರು, ಡಿ.13(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ಅಕ್ರಮ ರೆಸಾರ್ಟ್ ಹಾಗೂ ಹೋಂ ಸ್ಟೇಗಳು ನಾಯಿ ಕೊಡೆಗಳಂತೆ ತಲೆ ಎತ್ತಿವೆ. ಅದರಲ್ಲೂ ಹೆಚ್.ಡಿ. ಕೋಟೆಯ ನಾಗರಹೊಳೆ ಹಾಗೂ ಬಂಡೀಪುರ ಅಭಯಾರಣ್ಯದ ಕಾಡಂಚಿನ ಖಾಸಗಿ ಜಮೀನುಗಳಲ್ಲಿ ಅಕ್ರಮ ರೆಸಾರ್ಟ್ ಮತ್ತು ಹೋಂ ಸ್ಟೇಗಳು ರಾಜಾರೋಷವಾಗಿ ವ್ಯವಹಾರ ವಹಿವಾಟು ನಡೆಸುತ್ತಿವೆ.

ಸಿಲಿಕಾನ್ ಸಿಟಿ ಬೆಂಗಳೂರಿನ ಐಟಿ, ಬಿಟಿ ಉದ್ಯೋಗಿಗಳಿಗೆ ಶನಿವಾರ ಹಾಗೂ ಭಾನುವಾರ ಕಡ್ಡಾಯ ರಜೆ. ವಾರದ ಐದು ದಿನ ಬೆಳಿಗ್ಗೆಯಿಂದ ರಾತ್ರಿವರೆಗೆ ಗಂಟೆಗಟ್ಟಲೆ ಕಂಪ್ಯೂಟರ್ ಮುಂದೆ ಕುಳಿತು ರೋಸಿ ಹೋಗುವ ಟೆಕ್ಕಿಗಳು ರಿಲ್ಯಾಕ್ಸ್ ಬಯಸುತ್ತಾರೆ.

ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯದ ಹಸಿರು ವನ, ಅಪರೂಪದ ಪ್ರಾಣಿ ಸಂಕುಲದ ವೈಶಿಷ್ಟತೆ ಟೆಕ್ಕಿಗಳನ್ನು ಕೈ ಬೀಸಿ ಕರೆಯುತ್ತದೆ. ಶನಿವಾರ ಮುಂಜಾನೆ ಬೆಂಗಳೂರಿನಿಂದ ಹೊರಡುವ ಟೆಕ್ಕಿಗಳು ಭಾನುವಾರ ಸಂಜೆವರೆಗೆ ರೆಸಾರ್ಟ್ ಹಾಗೂ ಹೋಂ ಸ್ಟೇಗಳಲ್ಲಿ ಕಾಲ ಕಳೆಯುತ್ತಾರೆ.

ಮೈಸೂರಿನ ಹೆಚ್.ಡಿ.ಕೋಟೆಯ ಕಾಡಂಚಿನ ಗ್ರಾಮಗಳಲ್ಲಿ ಅಕ್ರಮವಾಗಿ ತಲೆ ಎತ್ತಿರುವ ರೆಸಾರ್ಟ್ ಹಾಗೂ ಹೋಂ ಸ್ಟೇಗಳು ಆನ್‌ಲೈನ್‌ನಲ್ಲಿ ಗ್ರಾಹಕರನ್ನು ಬುಕ್ ಮಾಡುತ್ತಿವೆ. ಸುತ್ತಲಿನ ಅದ್ಭುತ ಪರಿಸರದ ಫೋಟೋಗಳನ್ನು ತಮ್ಮ ವೆಬ್‌ಸೈಟ್‌ನಲ್ಲಿ ಹಾಕಿ ಗ್ರಾಹಕರನ್ನು ಅತ್ಯಾಕರ್ಷಿಸುತ್ತಿವೆ.

ಬೆಂಗಳೂರಿನ ಕಾಂಕ್ರಿಟ್ ಕಾಡು ನೋಡಿ ಬೇಸತ್ತಿರುವ ಟೆಕ್ಕಿಗಳು ಸೇರಿದಂತೆ ಇತರರು ಕಾಡಂಚಿನಲ್ಲಿರುವ ರೆಸಾರ್ಟ್ ಹಾಗೂ ಹೋಂ ಸ್ಟೇಗಳಲ್ಲಿ ವಾಸ್ತವ್ಯ ಹೂಡಲು ಮುಗಿ ಬೀಳುತ್ತಿದ್ದಾರೆ. ಒಂದು ವಾರ, 15 ದಿನ ಮುಂಚಿತವಾಗಿ ಬುಕ್ ಮಾಡಿ ಆನ್‌ಲೈನ್‌ನಲ್ಲೇ ಹಣ ಪಾವತಿ ಮಾಡುತ್ತಾರೆ.

ಹೆಚ್.ಡಿ.ಕೋಟೆಯ ಅಂತರಸಂತೆಯಿಂದ ಕಾರಾಪುರದವರೆಗೆ ಹತ್ತಾರು ಹೋಂ ಸ್ಟೇಗಳು ನಾಯಿ ಕೊಡೆಗಳಂತೆ ತಲೆ ಎತ್ತಿವೆ. ಇವುಗಳಲ್ಲಿ ಬೆರಳಣಿಕೆಯಷ್ಟು ರೆಸಾರ್ಟ್ ಹಾಗೂ ಹೋಂ ಸ್ಟೇಗಳು ಮಾತ್ರ ಅಧಿಕೃತವಾಗಿ ಸರ್ಕಾರದಿಂದ ಅನುಮತಿ ಪಡೆದಿವೆ. ಇವುಗಳನ್ನು ಬಿಟ್ಟು ಶೇಕಡ 70 ರಷ್ಟು ರೆಸಾರ್ಟ್ ಹಾಗೂ ಹೋಂ ಸ್ಟೇಗಳು ಅಕ್ರಮವಾಗಿವೆ.

ತನಿಖೆಗೆ ಹುಣಸೂರು ಉಪ ವಿಭಾಗಾಧಿಕಾರಿ ನೇತೃತ್ವದ ಸಮಿತಿ ರಚನೆ

ಅಕ್ರಮ ರೆಸಾರ್ಟ್ ಹಾಗೂ ಹೋಂ ಸ್ಟೇಗಳ ವಿರುದ್ಧ ಕ್ರಮ ಕೈಗೊಳ್ಳಲು ಹುಣಸೂರು ಉಪ ವಿಭಾಗಾಧಿಕಾರಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚನೆ ಮಾಡಲಾಗಿದೆ.

ಹೆಚ್.ಡಿ.ಕೋಟೆ ಹಾಗೂ ಹುಣಸೂರು ಭಾಗದಲ್ಲಿ ಎಷ್ಟು ರೆಸಾರ್ಟ್ ಹಾಗೂ ಹೋಂ ಸ್ಟೇಗಳಿವೆ. ಇವುಗಳಲ್ಲಿ ಅಕ್ರಮ ಯಾವುದು, ಸಕ್ರಮ ಯಾವುದು ಎಂಬ ಬಗ್ಗೆ ಸಮಗ್ರ ವರದಿ ನೀಡುವಂತೆ ಸಮಿತಿಗೆ ಸೂಚನೆ ನೀಡಲಾಗಿದೆ.

ಈ ಸಮಿತಿ ಈಗಾಗಲೇ ತನಿಖೆ ಆರಂಭಿಸಿದೆ. ವರದಿ ನೀಡಿದ ನಂತರ ಅಕ್ರಮ ರೆಸಾರ್ಟ್ ಹಾಗೂ ಹೋಂ ಸ್ಟೇಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು.

– ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು.

ಕಡಿಮೆ ಬಂಡವಾಳ; ಭಾರೀ ಲಾಭ!

ಅಕ್ರಮವಾಗಿ ನಿರ್ಮಾಣಗೊಂಡಿರುವ ರೆಸಾರ್ಟ್ ಹಾಗೂ ಹೋಂ ಸ್ಟೇಗಳು ಕಡಿಮೆ ಬಂಡವಾಳ ಹಾಕಿ ಹೆಚ್ಚು ಲಾಭ ಮಾಡುತ್ತಿವೆ. ರೆಸಾರ್ಟ್ ಹಾಗೂ ಹೋಂ ಸ್ಟೇಗಳಲ್ಲಿ ಒಂದು ದಿನಕ್ಕೆ ಒಬ್ಬ ವ್ಯಕ್ತಿಗೆ 3 ರಿಂದ 5 ಸಾವಿರ ರೂಪಾಯಿವರೆಗೆ ದರ ನಿಗದಿ ಮಾಡಿವೆ. ಕಾರಾಪುರ, ಹಳೆ ಬೆಳ್ತೂರು, ಹೊಸಮಾಳ ಸೇರಿದಂತೆ ಕಬಿನಿ ಹಿನ್ನಿರಿನ ಸುಂದರ ಪರಿಸರದಲ್ಲಿ ಹತ್ತಾರು ರೆಸಾರ್ಟ್ ಹಾಗೂ ಹೋಂ ಸ್ಟೇಗಳಿವೆ.

ಸೂರ್ಯಾಸ್ತವಾಗಿ ಕತ್ತಲಾಗುತ್ತಿದ್ದಂತೆ ಕ್ಯಾಂಪ್ ಫೈರ್ ಹಾಕಲಾಗುತ್ತದೆ. ಕಿವಿಗಡಚಿಕ್ಕುವಂತೆ ಸಂಗೀತದ ಅಬ್ಬರವಿರುತ್ತದೆ. ಇದರಿಂದ ಸಹಜವಾಗಿಯೇ ಕಾಡು ಪ್ರಾಣಿಗಳು ವಿಚಲಿತವಾಗುತ್ತವೆ. ಹುಲಿ ಸೇರಿದಂತೆ ಇತರೆ ಪ್ರಾಣಿಗಳು ಕಾಡಿನಿಂದ ನಾಡಿನತ್ತ ಬರಲು ರೆಸಾರ್ಟ್ ಹಾಗೂ ಹೋಂ ಸ್ಟೇಗಳು ಮೂಲ ಕಾರಣವಾಗಿವೆ.

ಅಕ್ರಮ ರೆಸಾರ್ಟ್ ಹಾಗೂ ಹೋಂ ಸ್ಟೇಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದರು.

ವಿದ್ಯಾರ್ಥಿಗಳು ಶಿಸ್ತು, ಸಮಯ ಪ್ರಜ್ಞೆ ಉತ್ತಮ ಸಂಸ್ಕಾರ ಮೈಗೂಡಿಸಿಕೊಳ್ಳಿ

ಕುಶಾಲನಗರ, ಡಿ.13–ವಿದ್ಯಾರ್ಥಿಗಳು ಶಿಸ್ತು, ಸಂಯಮ, ಸಮಯ ಪ್ರಜ್ಞೆ ಹಾಗೂ ಉತ್ತಮ ಸಂಸ್ಕಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ತಹಸೀಲ್ದಾರ್ ಕಿರಣ್ ಜಿ.ಗೌರಯ್ಯ ತಿಳಿಸಿದ್ದಾರೆ.

ಪಟ್ಟಣದ ಕನ್ನಡ ಭಾರತಿ ಪದವಿ ಹಾಗೂ ಪದವಿಪೂರ್ವ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳು ಕಾಲೇಜು ಜೀವನವನ್ನು ಮೋಜು ಮಸ್ತಿಗಾಗಿ ಹಾಳುಮಾಡಿಕೊಳ್ಳಬಾರದು; ಇದೊಂದು ಗೋಲ್ಡನ್ ಲೈಫ್ ಕಠಿಣ ಪರಿಶ್ರಮ, ನಿರ್ದಿಷ್ಟ ಗುರಿಯೊಂದಿಗೆ ಏಕಾಗ್ರತೆ ಹಾಗೂ ಶ್ರದ್ಧೆ ಅಧ್ಯಯನಶೀಲತೆ ಬೆಳೆಸಿಕೊಂಡು ಉನ್ನತ ಶಿಕ್ಷಣ ಪಡೆದು ಸಮಾಜದಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು. ಪೋಷಕರು ಹಾಗೂ ಗುರುಹಿರಿಯರು ಗೌರವ ನೀಡುವುದರ ಜೊತೆಗೆ ಅವರ ಆಸೆ ಆಕಾಂಕ್ಷೆ ಹಾಗೂ ನಿರೀಕ್ಷೆಯಂತೆ ಉನ್ನತ ಸ್ಥಾನ ಮಾನಕ್ಕೆ ಹೋದಾಗ ಮಾತ್ರ ಪೋಷಕರ ಕನಸು ನನಸಾಗಿಸಲು ಸಾಧ್ಯ ಎಂದರು.


ಕನ್ನಡ ಭಾರತಿ ಪದವಿ ಹಾಗೂ ಪದವಿಪೂರ್ವ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಭಾಗವಹಿಸಿರುವ ವಿದ್ಯಾರ್ಥಿ ವೃಂದ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಪುಟ್ಟರಾಜು ಮಾತನಾಡಿ, ಪೋಷಕರು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಸಮನ್ವಯತೆ ಅತಿ ಮುಖ್ಯ. ವಿದ್ಯಾರ್ಥಿಗಳು ಮೊಬೈಲ್‌ನಿಂದ ದೂರವಿದ್ದು ಪಠ್ಯದತ್ತ ಹೆಚ್ಚು ಗಮನಕೊಡಬೇಕು. ದೇಶಕ್ಕಾಗಿ ತ್ಯಾಗ ಬಲಿದಾನಗೈದ ಮಹಾಪುರುಷರ ಆದರ್ಶಗಳು ವಿದ್ಯಾರ್ಥಿಗಳಲ್ಲಿ ಅರಳಬೇಕಿದೆ. ಹಾಗಾಗಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣದತ್ತ ಒಲವು ತೋರಬೇಕು ಎಂದು ಕಿವಿಮಾತು ಹೇಳಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಶಾಂತಕುಮಾರ್ ವಾರ್ಷಿಕ ವರದಿ ವಾಚಿಸಿದರು. ಮೈಸೂರು ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾದ ಬೈಲಕೊಪ್ಪದ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಬಿ.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಗೌತಮ್ ವಿದ್ಯಾ ಟ್ರಸ್ಟ್ ಕಾರ್ಯದರ್ಶಿ ಬಿ.ರಾಮಕೃಷ್ಣಯ್ಯ, ಆಡಳಿತಾಧಿಕಾರಿ ಜೈವರ್ಧನ್, ಪದವಿ ಕಾಲೇಜು ವಿಭಾಗದ ಪ್ರಾಂಶುಪಾಲ ಕೆ.ಎಸ್. ರುದ್ರಪ್ಪ, ಹಿರಿಯ ಉಪನ್ಯಾಸಕರಾದ ಡಾ.ನಾಗೇಂದ್ರ ಸ್ವಾಮಿ, ಸೌಮ್ಯ, ರಶ್ಮಿತಾ ಪಾಲ್ಗೊಂಡಿದ್ದರು. ಉಪನ್ಯಾಸಕಿ ವಿನೀತಾ ಸ್ವಾಗತಿಸಿದರು. ವಿದ್ಯಾರ್ಥಿಗಳಾದ ರಶ್ಮಿ ಹಾಗೂ ಸಚಿನ್ ಗಾನ ಹಾಗೂ ಚೈತ್ರ ಪ್ರಾರ್ಥಿಸಿದರು. ರಶ್ಮಿ ನಿರೂಪಿಸಿದರು. ಸ್ಮಿತಾ ವಂದಿಸಿದರು.

ಆಸ್ತಿ ತಗಾದೆ ತೆಗೆಯುತ್ತಿರುವ ರತನ್ ಕುಟುಂಬ ವಿರುದ್ಧ ಕ್ರಮಕ್ಕೆ ಐನ್‌ಮನೆ ಆಗ್ರಹ

ವಿರಾಜಪೇಟೆ,ಡಿ.13–ಆಸ್ತಿ ವಿಚಾರದಲ್ಲಿ ವಿನಾಕಾರಣ ಕಿರುಕುಳ ನೀಡುತ್ತಿರುವ ಕಾವಾಡಿ ಗ್ರಾಮದ ಮಾಚಿಮಂಡ ರತನ್ ಮತ್ತು ಅವರ ಮನೆಯವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಐನ್‌ಮನೆ ಕುಟುಂಬದ ಮಾಚಿಮಂಡ ಸರೋಜ ಅಪ್ಪಚ್ಚು ನೇತೃತ್ವದಲ್ಲಿ ಕುಟುಂಬದ ಸದಸ್ಯರು ಇಂದು ಡಿವೈಎಸ್‌ಪಿ ಮಹೇಶ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಅಪ್ಪಚ್ಚು ಅವರ ಸ್ವಾಧೀನದಲ್ಲಿರುವ ಗದ್ದೆಯನ್ನು ಕಾಫಿ ತೋಟಮಾಡಿ 30 ವರ್ಷಗಳಿಂದಲೂ ಅದರ ಫಸಲನ್ನು ಪಡೆಯುತ್ತಿದ್ದರು. ಏಕಾಏಕಿ ರತನ್ ಕುಟುಂಬದವರು 2 ವರ್ಷಗಳಿಂದ ಅಪ್ಪಚ್ಚು ಅವರ ತೋಟದ ಫಸಲನ್ನು ಕುಯ್ದು ತೊಂದರೆ ಕೊಡುತ್ತಿದ್ದು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಆಸ್ತಿ ವಿಚಾರದಲ್ಲಿ ನಾಲ್ಕು ವರ್ಷಗಳಿಂದಲೂ ರತನ್ ಅವರ ಪತ್ನಿ ರುಕ್ಮಿಣಿ ಮಕ್ಕಳಾದ ಬ್ರಿಜೇಶ್ ಮತ್ತು ನಿತೇಶ್ ವಿರುದ್ಧ ದಾರಿ ಮತ್ತು ಆಸ್ತಿ ವಿಚಾರದಲ್ಲಿ ಗಲಾಟೆ ಮಾಡಿದ್ದಕ್ಕಾಗಿ ಪೊಲೀಸ್ ಠಾಣೆಯಲ್ಲಿ ಅವರ ಮೇಲೆ 22 ಪ್ರಕರಣಗಳಿದ್ದು, ಈಗಲೂ ಎಲ್ಲರೊಂದಿಗೂ ಗಲಾಟೆ ಹಲ್ಲೆಗೆ ಮುಂದಾಗುತ್ತಿದ್ದಾರೆ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರು ಒತ್ತಾಯಿಸಿದರು


ಕಾವಾಡಿಯ ಮಾಚಿಮಂಡ ಐನ್ ಮನೆ ಸದಸ್ಯರೊಂದಿಗೆ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಸಭೆ ನಡೆಸಿದರು. ಗ್ರಾಮಾಂತರ ಠಾಣಾಧಿಕಾರಿ ಎನ್.ಜೆ. ಲತಾ ಉಪಸ್ಥಿತರಿದ್ದರು.

ಡಿವೈಎಸ್‌ಪಿ ಮಹೇಶ್ ಕುಮಾರ್ ಮಾತನಾಡಿ ನಿಮ್ಮ ಮನವಿಯನ್ನು ವರಿಷ್ಠಾಧಿಕಾರಿಗಳಿಗೆ ನೀಡಿ ಬಳಿಕ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಬಳಿಕ ಕಾವಾಡಿಯ ಮಾಚಿಮಂಡ ಐನ್ ಮನೆ ಸದಸ್ಯರೊಂದಿಗೆ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಸಭೆ ನಡೆಸಿ ಕಾನೂನು ರೀತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ನಗರ ಠಾಣಾಧಿಕಾರಿ ಪ್ರಮೋದ್, ಗ್ರಾಮಾಂತರ ಠಾಣಾಧಿಕಾರಿ ಎನ್.ಜೆ.ಲತಾ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕಾವಾಡಿ ಮಾಚಿಮಂಡ ಐನ್ ಮನೆಯ ಬಿ.ವಸಂತ, ಸುವಿನ್ ಗಣಪತಿ, ಪೆಮ್ಮಯ್ಯ, ಗ್ರೇಸ್ಮಾ ಅಪ್ಪಯ್ಯ, ವಿಠಲ ಪೂವಯ್ಯ, ಪುಷ್ಪ ಪೂವಯ್ಯ, ನಂದು ಅಯ್ಯಣ್ಣ, ರಾಜ ನಾಚಪ್ಪ, ಉಮೇಶ್, ಬೋಪಣ್ಣಿ, ಜಿ.ಮುತ್ತಪ್ಪ ಸೇರಿದಂತೆ ಸುಮಾರು 60ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಪತ್ರಕರ್ತರ ಸಂಘದಿಂದ ನಮ್ಮ ಮಡಿಕೇರಿ ನಮ್ಮ ಹೆಮ್ಮೆ ಸಂವಾದ

ಮಡಿಕೇರಿ, ಡಿ.13–ನಗರ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳೊಂದಿಗೆ ದಿನವೂ ಹೆಚ್ಚುತ್ತಿರುವ ವಾಹನ ದಟ್ಟಣೆ, ರಸ್ತೆಗಳ ಅವ್ಯವಸ್ಥೆ, ಸ್ವಚ್ಛತೆಯ ಪರಿಜ್ಞಾನವಿಲ್ಲದೆ ಉಂಟಾಗುತ್ತಿರುವ ಅಶುಚಿತ್ವ, ಅನಧಿಕೃತ ಹೋಂ ಸ್ಟೇಗಳಿಂದ ಉದ್ಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಕೊಡಗು ಪತ್ರಕರ್ತರ ಸಂಘದಿಂದ ಆಯೋಜಿತ ವಿಷನ್ ನಮ್ಮ ಮಡಿಕೇರಿ ನಮ್ಮ ಹೆಮ್ಮೆ ಸಂವಾದ ಕಾರ್ಯಕ್ರಮದಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು.

ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ. ಮಾತನಾಡಿ, 1691ರಲ್ಲಿ ಮುದ್ದು ರಾಜನಿಂದ ನಿರ್ಮಾಣವಾದ ಮಡಿಕೇರಿ 344 ವರ್ಷಗಳ ಭವ್ಯ ಇತಿಹಾಸವನ್ನು ಹೊಂದಿದೆ. ಈ ಪುಟ್ಟ ನಗರಿ ಬದಲಾವಣೆಗಳಿಗೆ ಮೈಯೊಡ್ಡುತ್ತಲೆ ಬಂದಿದ್ದು, ಭವಿಷ್ಯದಲ್ಲಿ ಮಡಿಕೇರಿಯನ್ನು ಸುಂದರ ನಗರವನ್ನಾಗಿ ರೂಪಿಸುವ ಮತ್ತು ಸಂರಕ್ಷಿಸುವ ಬಗ್ಗೆ ಯಾವುದೇ ಅಭಿಪ್ರಾಯ ಭೇದಗಳಿದ್ದರೂ ಬದಿಗೊತ್ತಿ, ಜಾತಿ ಮತಗಳ ಭೇದವಿಲ್ಲದೆ ನಗರದ ನಾಗರಿಕರೆಲ್ಲರು ಕೈ ಜೋಡಿಸಬೇಕೆಂದು ಆಶಯ ವ್ಯಕ್ತಪಡಿಸಿದರು.

ಶ್ರೀ ಓಂಕಾರೇಶ್ವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಎ.ಸಿ. ದೇವಯ್ಯ ಮಾತನಾಡಿ, ಹಲವಾರು ಅಂತರಾಷ್ಟ್ರೀಯ ಹಾಕಿ ಆಟಗಾರರನ್ನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಡುಗೆಯಾಗಿ ನೀಡಿರುವ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ ಪ್ರಸ್ತುತ, ಕನಿಷ್ಟ ಕಾಳಜಿಯೂ ಇಲ್ಲದೆ ಶೋಚನೀಯ ಸ್ಥಿತಿಯಲ್ಲಿದೆ. ಈ ಬಗ್ಗೆ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಹಿತ ಯಾರೂ ಗಮನಹರಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಮುಡಾ ಅಧ್ಯಕ್ಷ ರಾಜೇಶ್ ಯಲ್ಲಪ್ಪ ಪ್ರತಿಕ್ರಿಯಿಸಿ, ಜಿಲ್ಲೆಯ ಶಾಸಕರು ಈ ನಿಟ್ಟಿನಲ್ಲಿ ಆಸಕ್ತಿ ವಹಿಸಿದ್ದು 1.5 ಕೋಟಿ ರೂ. ವೆಚ್ಚದಲ್ಲಿ ಸಿಂಥೆಟಿಕ್ ಲೇನ್, 2.50 ಕೋಟಿ ವೆಚ್ಚದಲ್ಲಿ ಬಾಸ್ಕೆಟ್ ಬಾಲ್ ಕೋರ್ಟ್‌ಗಳ ನಿರ್ಮಾಣವಾಗಲಿದೆ ಎಂದರು.


'ನಮ್ಮ ಮಡಿಕೇರಿ–ನಮ್ಮ ಹೆಮ್ಮೆ' ಎಂಬ ಪ್ರವಾಸಿಗರು ಅನುಸರಿಸಬೇಕಾದ ನಿಯಮಗಳ ಮಾಹಿತಿ ಪೋಸ್ಟರ್ ಅನ್ನು ಗಣ್ಯರು ಲೋಕಾರ್ಪಣೆಗೊಳಿಸಿದರು.

ಪುರಸಭಾ ಮಾಜಿ ಸದಸ್ಯ ಟಿ.ಎಂ.ಸತೀಶ್ ಪೈ, ಕಾಂಗ್ರೆಸ್ ನಗರಾಧ್ಯಕ್ಷ ಪ್ರಕಾಶ್ ಆಚಾರ್ಯ, ನಗರಸಭಾ ಸದಸ್ಯರಾದ ಅರುಣ್ ಶೆಟ್ಟಿ, ಅಪ್ಪಣ್ಣ, ಎಸ್.ಸಿ. ಸತೀಶ್, ನಗರಸಭಾ ಮಾಜಿ ಅಧ್ಯಕ್ಷ ಹೆಚ್.ಎಂ.ನಂದಕುಮಾರ್, ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಆಯುಕ್ತ ಕೆ.ಟಿ.ಬೇಬಿ ಮ್ಯಾಥ್ಯು, ಭಾರತೀಯ ವಿದ್ಯಾ ಭವನದ ಪ್ರಮುಖರಾದ ಬಾಲಾಜಿ ಕಾಶ್ಯಪ್, ಲಯನ್ಸ್ ಸಂಸ್ಥೆಯ ಅಧ್ಯಕ್ಷ ಮದನ್, ನಗರಠಾಣಾ ಎಸ್.ಐ ಶ್ರೀಧರ್, ಹೋಟೇಲ್ ರೆಸಾರ್ಟ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ನಾಜಿರ್, ಹೋಂಸ್ಟೇ ಅಸೋಸಿಯೇಷನ್ ಅಧ್ಯಕ್ಷೆ ಮೋಂತಿ ಗಣೇಶ್, ಗೌಡ ವಿದ್ಯಾ ಸಂಘದ ಅಧ್ಯಕ್ಷ ಅಂಬೆಕಲ್ಲು ನವೀನ್, ನಗರ ಚೇಂಬರ್ ನಿರ್ದೇಶಕ ಎಂ.ಧನಂಜಯ್, ನಗರಸಭೆ ಮಾಜಿ ಅಧ್ಯಕ್ಷೆ ಅನಿತಾ ಪೂವಯ್ಯ, ಪತ್ರಕರ್ತ ಕುಲ್ಲೇಟಿರ ಅಜಿತ್ ನಾಣಯ್ಯ, ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ, ಹಿರಿಯ ಪತ್ರಕರ್ತ ಜಿ. ಚಿದ್ವಿಲಾಸ್ ಮಾತನಾಡಿದರು.

ನಗರಸಭಾ ಅಧ್ಯಕ್ಷೆ ಪಿ.ಕಲಾವತಿ ಮಾತನಾಡಿ, ಪ್ರವಾಸೋದ್ಯಮಕ್ಕೆ ಪೂರಕವಾದ ಕ್ರಮಗಳನ್ನು ಕೈಗೊಳ್ಳಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುವುದಾಗಿ ತಿಳಿಸಿದರು.

ಪೌರಾಯುಕ್ತ ರಮೇಶ್ ಮಾತನಾಡಿ, ನಗರಸಭಾ ಕಚೇರಿ ಪಕ್ಕದ ಹಳೆಯ ಕಾವೇರಿ ಕಲಾ ಕ್ಷೇತ್ರವಿರುವ ಜಾಗದಲ್ಲಿ 9.50 ಕೋಟಿ ವೆಚ್ಚದ 'ಕಲಾ ಭವನ' ನಿರ್ಮಾಣಕ್ಕೆ ಟೆಂಡರ್ ಅನುಮೋದನೆಯಾಗಿ ಕ್ರಿಯಾಯೋಜನೆ ಸಿದ್ಧವಾಗುತ್ತಿದೆ. ಶೀಘ್ರ ಕಾಮಗಾರಿ ನಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಕರ್ತರ ಸಂಘದಿಂದ ಹೊರತರಲಾದ 'ನಮ್ಮ ಮಡಿಕೇರಿ–ನಮ್ಮ ಹೆಮ್ಮೆ' ಎಂಬ ಪ್ರವಾಸಿಗರು ಮಡಿಕೇರಿಯಲ್ಲಿ ಅನುಸರಿಸಬೇಕಾದ ನಿಯಮಗಳ ಮಾಹಿತಿ ಪೋಸ್ಟರ್ ಅನ್ನು ಗಣ್ಯರು ಲೋಕಾರ್ಪಣೆಗೊಳಿಸಿದರು. ಕಾರ್ಯಕ್ರಮದಲ್ಲಿ ಪುರಸಭೆ ಮಾಜಿ ಸದಸ್ಯ ಡಾ. ಎಂ.ಜಿ. ಪಾಟ್ಕರ್, ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ರತ್ನಾಕರ್ ರೈ, ಕಾರ್ಯದರ್ಶಿ ಬಿ.ಕೆ. ಕಾರ್ಯಪ್ಪ, ರೋಟರಿ ವುಡ್ಸ್ ಕಾರ್ಯದರ್ಶಿ ಪ್ರಮೀಳಾ ಶೆಟ್ಟಿ, ನಗರಸಭಾ ಮಾಜಿ ಅಧ್ಯಕ್ಷೆ ಜುಲೈಕಾಬಿ, ಸದಸ್ಯರಾದ ಶ್ವೇತಾ ಪ್ರಶಾಂತ್, ಮೇರಿ ವೇಗಸ್, ಶಾರದಾ ನಾಗರಾಜ್, ಚಿತ್ರಾವತಿ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ಪಾಲ್ಗೊಂಡಿದ್ದರು.

ಇಂದು ಅಖಂಡ ಏಕಾಹ ಭಜನೆ

ಮಡಿಕೇರಿ: ಶ್ರೀ ರಾಮಾಂಜನೇಯ ಭಜನಾ ಮಂಡಳಿ ವತಿಯಿಂದ 35ನೇ ವಾರ್ಷಿಕೋತ್ಸವದ ಪ್ರಯುಕ್ತ ನಾಳೆ (ಭಾನುವಾರ) ಅಖಂಡ ಏಕಾಹ ಭಜನಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ವಿಭಾಗ ಮಟ್ಟದ ಸ್ಪರ್ಧೆಯಲ್ಲಿ 8 ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆ


ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ಕೊಡಗು ಜಿಲ್ಲೆಯ 8 ವಿದ್ಯಾರ್ಥಿಗಳು.

ನಾಪೋಕ್ಲು, ಡಿ.13–ಇತ್ತೀಚೆಗೆ ಉಡುಪಿಯಲ್ಲಿ ನಡೆದ ಮೈಸೂರು ವಿಭಾಗ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಜಿಲ್ಲೆಯ ಎಂಟು ಮಂದಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಿಭಾಗ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಅರುವತ್ತೊಕ್ಲಿನ ವಿದ್ಯಾನಿಕೇತನ ಪ.ಪೂ. ಕಾಲೇಜು ಪ್ರಥಮ ಪಿಯುಸಿಯ ಎಂ.ಹರಿಕೃಷ್ಣನ್ ಪ್ರಥಮ. ಗುಡ್ಡಂಡ ಕಾರ್ಯಪ್ಪ ದ್ವಿತೀಯ ಪಿಯುಸಿ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾನೆ.

ಚರ್ಚಾ ಸ್ಪರ್ಧೆಯಲ್ಲಿ ಪೊನ್ನಂಪೇಟೆ ಸಿಐಟಿಯು ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿನಿ ಪುಗ್ಗೇರ ಕ್ಷಮಾ ಕಾವೇರಮ್ಮ ದ್ವಿತೀಯ ಸ್ಥಾನ. ಜನಪದ ನೃತ್ಯ ವಿಭಾಗದಲ್ಲಿ ಮಡಿಕೇರಿ ಸಂತ ಜೋಸೆಫ್ ಕಾನ್ವೆಂಟ್‌ನ ಪ್ರಥಮ ಪಿಯು ವಿದ್ಯಾರ್ಥಿನಿ ಇಂಚರ ಎ. ತೃತೀಯ ಸ್ಥಾನ. ಕುಶಾಲನಗರ ಸರ್ಕಾರಿ ಕಾಲೇಜಿನ ಪ್ರಥಮ ಪಿಯು ವಿದ್ಯಾರ್ಥಿನಿ ಅರಬಿಯಾ, ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಸ್ಥಾನ. ಭಾವಗೀತೆಯಲ್ಲಿ ಕೂಡಿಗೆ ಸರ್ಕಾರಿ ಪಿಯು ಕಾಲೇಜಿನ ಪ್ರಾತಿ ಬಡಿಗೇರ್ ತೃತೀಯ ಸ್ಥಾನ. ವಿಜ್ಞಾನ ಮಾದರಿ ಸ್ಪರ್ಧೆಯಲ್ಲಿ ಕೂಡಿಗೆ ಸರ್ಕಾರಿ ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿ ರಾಜೇಶ್ ದ್ವಿತೀಯ ಸ್ಥಾನ. ಚಿತ್ರಕಲೆಯಲ್ಲಿ ಕುಶಾಲನಗರ ಕನ್ನಡ ಭಾರತಿ ಪಪೂ ಕಾಲೇಜಿನ ಎಂ.ವಿಸ್ಮಯ ತೃತೀಯ ಸ್ಥಾನ ಗಳಿಸಿದ್ದಾನೆ.

ನರ್ಸಿಂಗ್ ವಿದ್ಯಾರ್ಥಿನಿ ನೇಣಿಗೆ ಶರಣು

ಕೊಳ್ಳೇಗಾಲ, ಡಿ.13–ಹೊಟ್ಟೆನೋವು ತಾಳಲಾರದೆ ನರ್ಸಿಂಗ್ ತರಬೇತಿ ನಿರತ ಯುವತಿ ನೇಣಿಗೆ ಶರಣಾಗಿರುವ ಘಟನೆ ಹೊಸ ಹಂಪಾಪುರ ಗ್ರಾಮದಲ್ಲಿ ಜರುಗಿದೆ.



ಹೊಸ ಹಂಪಾಪುರ ಗ್ರಾಮದ ಪ್ರಿಯಾಂಕ(20) ಎಂಬಾಕೆ ಮೃತ ದುರ್ದೈವಿ. ಈಕೆಗೆ ಆಗಾಗ್ಗೆ ಹೊಟ್ಟೆನೋವು ಕಾಣಿಸಿಕೊಳ್ಳುತ್ತಿದ್ದು, ಗುಣಮುಖವಾಗದ ಕಾರಣ ಜೀವನದಲ್ಲಿ ಜಿಗುಪ್ಸೆಗೊಂಡು ಮನೆಯಲ್ಲಿ ಯಾರೂ ಇಲ್ಲದಿರುವಾಗ ನೇಣಿಗೆ ಶರಣಾಗಿದ್ದಾಳೆ. ಸ್ಥಳೀಯರು ಆಸ್ಪತ್ರೆಗೆ ಕರೆತಂದು ಚಿಕಿತ್ಸೆಗೆ ದಾಖಲಿಸಿದರಾದರೂ ಈಕೆ ಸಾವನ್ನಪ್ಪಿರುವುದಾಗಿ ವೈದ್ಯರು ಖಚಿತಪಡಿಸಿದರು.

ಮೃತಳ ತಾಯಿ ನಂಜಮ್ಮಣ್ಣಿ ಪಟ್ಟಣ ಪೊಲೀಸರಿಗೆ ದೂರು ನೀಡಿದ ಮೇರೆಗೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಬಳಿಕ ವಾರಸುದಾರರಿಗೆ ಶವ ಒಪ್ಪಿಸಿ ಮುಂದಿನ ಕ್ರಮಕೈಗೊಂಡಿದ್ದಾರೆ.

ಈಚರ್ ವಾಹನ ಮಗುಚಿ 21 ಕುರಿಗಳು ಸಾವು


ಈಚರ್ ವಾಹನ ಪಲ್ಟಿಯಾಗಿರುವುದು

ಕೊಳ್ಳೇಗಾಲ, ಡಿ.13–ತಾಲೂಕಿನ ನರೀಪುರ ಗ್ರಾಮದ ಪಾಳ್ಯ ಕ್ರಾಸ್‌ನಲ್ಲಿ ಆಡುಕುರಿಗಳನ್ನು ತುಂಬಿಕೊಂಡು ಸಾಗುತ್ತಿದ್ದ ಈಚರ್ ವಾಹನ ಪಲ್ಟಿಯಾಗಿ ಸುಮಾರು 21 ಆಡು, ಕುರಿ ಮರಿಗಳು ಸಾವನ್ನಪ್ಪಿದ ಘಟನೆ ಜರುಗಿದೆ.

ಈಚರ್ ಗೂಡ್ಸ್ ವಾಹನ (ಟಿಎನ್–37, ಸಿಕ್ಯೂ 7177)ದಲ್ಲಿ ಸುಮಾರು 200 ಆಡು–ಕುರಿ ಸಾಗಿಸಲಾಗುತ್ತಿದ್ದರೆನ್ನಲಾಗಿದ್ದು, ಚಾಲಕನ ನಿಯಂತ್ರಣ ತಪ್ಪಿ ಮುಗುಚಿದೆ. ವಾಹನದಲ್ಲಿದ್ದ ಚಾಲಕ ಹಾಗೂ 6 ಮಂದಿ ಪ್ರಯಾಣಿಕರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇದರಲ್ಲಿ ಆರೇಳು ಕುರಿಗಳ ಸ್ಥಿತಿ ಚಿಂತಾಜನಕವಾಗಿದೆ. ಚಾಲಕ ರಮೇಶ್ ಪೊಲೀಸರಿಗೆ ದೂರು ನೀಡಿದ್ದು, ಕೊಳ್ಳೇಗಾಲ ಗ್ರಾಮಾಂತರ ಠಾಣೆಯ ಎಎಸ್‌ಐ ಗೋಪಾಲ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಮ್ಮದು ಸಾಧು–ಸಂತರ ಭವ್ಯ ಪರಂಪರೆ ಹೊಂದಿರುವ ದೇಶ

ಹನೂರು, ಡಿ.13–ಸಾಧು ಸಂತರ ಭವ್ಯ ಪರಂಪರೆಯನ್ನು ಹಾಗೂ ಆಧ್ಯಾತ್ಮಿಕತೆಯನ್ನು ಹೊಂದಿರುವ ದೇಶ ನಮ್ಮದು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ತಿಳಿಸಿದ್ದಾರೆ.

ಪಟ್ಟಣದ ಶ್ರೀ ಮಲೆ ಮಹದೇಶ್ವರ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಪ್ರತಿಯೊಬ್ಬ ಪ್ರಜೆಯಲ್ಲೂ ಸಹ ಧಾರ್ಮಿಕತೆ ತುಂಬಿ ತುಳುಕುತ್ತಿದೆ. ಜಗತ್ತನ್ನು ಸೃಷ್ಟಿ ಮಾಡಿದ ಭಗವಂತನ ಮೇಲೆ ಅಪಾರವಾದ ಭಕ್ತಿ ಇದೆ. ಇಡೀ ದೇಶದಲ್ಲಿ ಕಣ್ಣಿಗೆ ಕಾಣುವ ಅನೇಕ ವೈಜ್ಞಾನಿಕ ಸಂಶೋಧನೆಗಳನ್ನು ವಿಜ್ಞಾನಿಗಳು ಮಾಡಿದರೆ ಅಂತರಂಗದ ಸಂಶೋಧನೆಯನ್ನು ಸಾಧು ಸಂತರು ಮಾಡಿದ್ದಾರೆ ಎಂದರು.

ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಮಾತನಾಡಿ, ಮಹಾತ್ಮರ ಮಾರ್ಗದರ್ಶನ ನಮ್ಮ ಬದುಕಿಗೆ ಯಾವಾಗಲು ಬೆಳಕಾಗಿದೆ ಎಂದರೆ ತಪ್ಪಾಗಲಾರದು. ಧಾರ್ಮಿಕ ಸಾಮಾಜಿಕ ಶೈಕ್ಷಣಿಕ ಕ್ರಾಂತಿ ಉಂಟು ಮಾಡಿದ ಸಂಸ್ಥೆಗಳಲ್ಲಿ ಜೆಎಸ್‌ಎಸ್ ಸಂಸ್ಥೆ ಮೊದಲ ಸಾಲಿನಲ್ಲಿ ಇರುತ್ತದೆ. ರಾಜೇಂದ್ರ ಮಹಾಸ್ವಾಮಿಗಳು ತಾವು ಹೊಟ್ಟೆ ಹಸಿವಿನಿಂದ ಇದ್ದರೂ ತಮ್ಮ ಮಕ್ಕಳು ಹಸಿವಿನಿಂದ ಇರಬಾರದು ಎಂದು ಮಕ್ಕಳಿಗೆ ಹೊಟ್ಟೆ ತುಂಬಿಸಿ ಶಿಕ್ಷಣ ಕೊಡಿಸಿದರು ಎಂದು ಸ್ಮರಿಸಿದರು.


ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಜಯಂತಿ ಮಹೋತ್ಸವವನ್ನು ಸುತ್ತೂರು, ಆದಿಚುಂಚನಗಿರಿ, ಸಾಲೂರು ಮಠದ ಸ್ವಾಮೀಜಿಗಳು ಉದ್ಘಾಟಿಸಿದರು.

ಶಾಸಕ ಎಂ ಆರ್ ಮಂಜುನಾಥ್ ಮಾತನಾಡಿ ಇಡೀ ಜಗತ್ತಿನಲ್ಲಿ ಶಿಕ್ಷಣ ಕ್ರಾಂತಿಯನ್ನೇ ಉಂಟು ಮಾಡಿದ್ದಾರೆ. ಅದರಲ್ಲೂ ನಮ್ಮ ಈ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿಯನ್ನು ಉಂಟು ಮಾಡುವ ಮೂಲಕ ತಾಲೂಕಿನ ಜನರು ಪ್ರಜ್ಞಾವಂತರಾಗಲು ಸಾಧ್ಯವಾಗಿದೆ ಎಂದು ಹೇಳಿದರು.

ಗುರು ಮಲ್ಲೇಶ್ವರ ಮಠದ ಶ್ರೀ ಮಹಾಂತ ಸ್ವಾಮಿ, ಸಾಲೂರು ಮಠದ ಡಾ. ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಶ್ರೀ ಭಗೀರಥ ಮಠದ ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಮುಮ್ಮಡಿ ಶಿವರುದ್ರ ಸ್ವಾಮೀಜಿ, ಮಾಜಿ ಶಾಸಕರಾದ ಎಸ್.ಬಾಲರಾಜು, ಎನ್.ಮಹೇಶ್, ನಿರಂಜನ್ ಕುಮಾರ್, ನರೇಂದ್ರ, ಪರಿಮಳ ನಾಗಪ್ಪ, ಸಮಾಜ ಸೇವಕರಾದ ನಿಶಾಂತ್, ದತ್ತೇಶ್ ಕುಮಾರ್, ಜನಧ್ವನಿ ವೆಂಕಟೇಶ್, ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದ ಪದಾಧಿಕಾರಿಗಳು ಇದ್ದರು.

ರಕ್ತದಾನ ಶಿಬಿರ

ಶ್ರೀಗಳ 110ನೇ ದಶಮಾನೋತ್ಸವದ ನಿಮಿತ್ತ ತಾಲೂಕು ರೈತ ಸಂಘದ ಅಧ್ಯಕ್ಷ ಅಮ್ಜದ್ ಖಾನ್ ನೇತೃತ್ವದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಸುಮಾರು 40ಕ್ಕೂ ಹೆಚ್ಚು ಜನರು ಶಿಬಿರದಲ್ಲಿ ಭಾಗವಹಿಸಿದ್ದರು. ಇದೇ ರೀತಿ ಉಚಿತ ಆರೋಗ್ಯ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಬಿಪಿ ಶುಗರ್, ಇಸಿಜಿ ಸೇರಿದಂತೆ ಇನ್ನಿತರ ತಪಾಸಣೆಯನ್ನು ಮಾಡಲಾಯಿತು. 550 ಜನರು ತಪಾಷಣೆಯನ್ನು ಮಾಡಿಸಿಕೊಂಡರು.

ಸುಪ್ತ ಪ್ರತಿಭೆ ಹೊರಹೊಮ್ಮಲು ಸುವರ್ಣಾವಕಾಶ ಪ್ರತಿಭಾ ಕಾರಂಜಿ


ಬೇಗೂರು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನುದ್ದೇಶಿಸಿ ಸತೀಶ್ ಮಾತನಾಡಿದರು.

ಬೇಗೂರು, ಡಿ.13–ಗ್ರಾಮದ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಬೇಗೂರು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಸತೀಶ್ ಉದ್ಘಾಟಿಸಿದರು.

ಮಕ್ಕಳಲ್ಲಿರುವ ಸುಪ್ತ ಪ್ರತಿಭೆಗಳನ್ನು ಹೊರಹೊಮ್ಮಲು ಇದು ಒಂದು ಸುವರ್ಣಾವಕಾಶ. ಶಿಕ್ಷಕರು, ಮಕ್ಕಳ ಪೋಷಕರು ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಮಕ್ಕಳು ಭಾಗವಹಿಸಲು ಉತ್ತೇಜಿಸಬೇಕಿದೆ ಶಾಲೆಯ ಎಲ್ಲಾ ಮಕ್ಕಳು ಭಾಗವಹಿಸಿದರೆ ಪ್ರತಿಭಾ ಕಾರಂಜಿ ಉತ್ತಮ ವೇದಿಕೆ ಆಗುತ್ತದೆ ಎಂದರು.

ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಜೇತರಾದ ಶಾಲೆಗಳ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು ನ್ಯಾಷನಲ್ ಶಾಲೆಯ ಆವರಣದಲ್ಲಿ ಮಕ್ಕಳ ಸಂತಸ ಎಲ್ಲರನ್ನು ಒಮ್ಮೆ ಬೆರಗಾಗಿಸಿತು ಮತ್ತು ಮಕ್ಕಳ ವಿವಿಧ ವೇಷ ಭೂಷಣ ಎಲ್ಲರ ಗಮನ ಸೆಳೆಯಿತು

ಬೇಗೂರು ಗ್ರಾಪಂ ಅಧ್ಯಕ್ಷ ಜಯಮ್ಮ, ಬಿಆರ್‌ಪಿ ಶೋಭಾ, ಸಿಆರ್‌ಪಿ ಚಂದ್ರಶೇಖರ್, ಪ್ರಾಥಮಿಕ ಶಾಲೆ ಶಿಕ್ಷಕರ ಸಂಘದ ಜಿಲ್ಲಾ ಉಪಾಧ್ಯಕ್ಷ ಅನ್ನಪೂರ್ಣಮ್ಮ, ನ್ಯಾಷನಲ್ ಶಾಲೆಯ ಮುಖ್ಯ ವ್ಯವಸ್ಥಾಪಕಿ ಅನಿತಾ ಮಹೇಶ್, ಬೆಳಚಲವಾಡಿ ಶಾಲೆಯ ಮುಖ್ಯ ಶಿಕ್ಷಕ ಪ್ರಸನ್ನ, ಬೇಗೂರು ಕ್ಲಸ್ಟರ್ ಮಟ್ಟದ ಹದಿನೈದರಿಂದ ಇಪ್ಪತ್ತಕ್ಕೂ ಹೆಚ್ಚು ಶಾಲೆಯ ಮುಖ್ಯ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು

ಪ್ರತಿಭಾ ಕಾರಂಜಿಯಲ್ಲಿ ಸಮಗ್ರ ಪ್ರಶಸ್ತಿ

ಗುಂಡ್ಲುಪೇಟೆ, ಡಿ.13 (ಸೋಮ್.ಜಿ)– ತಾಲೂಕಿನ ತೆರಕಣಾಂಬಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಡೆದ ಹೋಬಳಿ ಮಟ್ಟದ ಪ್ರತಿಭಾಕಾರಂಜಿ ಹಾಗೂ ಕಲೋತ್ಸವ ಸ್ಪರ್ಧೆಗಳಲ್ಲಿ ಇಲ್ಲಿನ ಇದೇ ವಸತಿ ಶಾಲೆಯ ವಿದ್ಯಾರ್ಥಿಗಳು ಸಮಗ್ರ ಪ್ರಶಸ್ತಿ ಗಳಿಸಿಕೊಂಡಿದ್ದಾರೆ.


ಸಮಗ್ರ ಪ್ರಶಸ್ತಿ ಗಳಿಸಿಕೊಂಡ ಮೊರಾರ್ಜಿ ದೇಸಾಯಿ ವಸತಿ ಶಾಲಾ ವಿದ್ಯಾರ್ಥಿಗಳು

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಶ್ರಯದಲ್ಲಿ ನಡೆದ ಚರ್ಚಾಸ್ಪರ್ಧೆ, ಭಾಷಣ, ಆಶು ಭಾಷಣ, ನೃತ್ಯ, ಗಾಯನ ಸ್ಪರ್ಧೆಗಳಲ್ಲಿ ಜಯಗಳಿಸಿದ್ದಾರೆ. ಈ ವಿದ್ಯಾರ್ಥಿಗಳ ಸಾಧನೆಗೆ ಪ್ರಾಂಶುಪಾಲ ಮಹದೇವಪ್ರಸಾದ್ ಹಾಗೂ ಸಿಬ್ಬಂದಿವರ್ಗದವರು ಅಭಿನಂದಿಸಿದ್ದಾರೆ.

ಈ ವೇಳೆ ವನ್ಯಜೀವಿ ಛಾಯಾಗ್ರಾಹಕ ಆರ್.ಕೆ.ಮಧು, ಬಿಆರ್‌ಸಿ ಡಾ॥ ಸರೋಜ, ಸಿಆರ್‌ಪಿ ಶಿವಕುಮಾರ್, ಶಾಲೆಯ ಶಿಕ್ಷಕರು ಮತ್ತು ಮಕ್ಕಳು ಹಾಜರಿದ್ದರು.

78 ಮಕ್ಕಳಿಗೆ ಜನನ ಪ್ರಮಾಣ ಪತ್ರ


ಬುಡಕಟ್ಟು ಆಶ್ರಮ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಆಧಾರ್ ಕಾರ್ಡ್ ವಂಚಿತ 78 ಮಕ್ಕಳಿಗೆ ಜನನ ಪ್ರಮಾಣ ಪತ್ರ ನೀಡಲಾಯಿತು.

ಚಾಮರಾಜನಗರ, ಡಿ.13–ನಗರದ ಜೆಎಂಎಫ್‌ಸಿ ನ್ಯಾಯಾಲದಲ್ಲಿ ಶನಿವಾರ ಆಯೋಜಿಸಿದ್ದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ತಾಲೂಕಿನ 6 ಆಶ್ರಮ ಶಾಲೆಗಳ 27 ಬುಡಕಟ್ಟು ಆಶ್ರಮ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಆಧಾರ್ ಕಾರ್ಡ್ ವಂಚಿತ 78 ಮಕ್ಕಳಿಗೆ ಜನನ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆ ಯಶಸ್ವಿಗೊಂಡಿತು.

ತಾಲೂಕಿನ ಕಾಡಂಚಿನ ಪ್ರದೇಶದ ರಂಗಸಂದ್ರ, ಕೋಳಿಪಾಳ್ಯ, ಪುಣಜನೂರು, ಬೇಡಗುಳಿ, ಮುರಟಿಪಾಳ್ಯ ಹಾಗೂ ಕೆ. ಗುಡಿ ಗಿರಿಜನ ಆಶ್ರಮ ಶಾಲೆಯ ಮಕ್ಕಳಿಗೆ ಪೋಷಕರು ತಮ್ಮ ಮಕ್ಕಳ ಜನನ ಪ್ರಮಾಣವನ್ನು ಸಕಾಲಕ್ಕೆ ನೀಡದೆ ಮಕ್ಕಳ ದಾಖಲಾತಿಗೆ ತೊಡಕಾಗಿತ್ತು. ಆದರೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಡಿಯ ಮಕ್ಕಳಿಗೆ ಆಯಾ ಪಾಲಕರ ಆಧಾರ್ ಕಾರ್ಡ್ ದಾಖಲೆ ಆಧರಿಸಿ, ಮೊದಲಿಗೆ ಶಾಲೆಗಳಿಗೆ ಪ್ರವೇಶಾತಿ ನೀಡಿದ್ದಾರೆ. ನಂತರ ಆ ವಿದ್ಯಾರ್ಥಿಗಳಿಗೆ ಕಾನೂನು ಬದ್ಧವಾಗಿ ಜನನ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ದೊರಕಿಸಲು ಕ್ರಮ ವಹಿಸಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ಈ ಹಿನ್ನೆಲೆಯಲ್ಲಿ ಇಂದು ಆಯೋಜಿಸಿದ್ದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ವಿಚಾರಣೆ ನಡೆದು ಜನನ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆ ಪೂರ್ಣಗೊಂಡಿದೆ.

ನ್ಯಾಯಾಲಯದ ಆದೇಶದನ್ವಯ 27 ಹಾಡಿಗಳ ಆಯಾ ವ್ಯಾಪ್ತಿಯ ಗ್ರಾಪಂ ಮತ್ತು ಲೆಕ್ಕಾಧಿಕಾರಿಗಳು ಜನನ ಪ್ರಮಾಣ ಪತ್ರ ನೀಡಲಿದ್ದು, ಆಶ್ರಮ ಶಾಲೆಯ 78 ಮಕ್ಕಳಿಗೆ ಸಾಮೂಹಿಕವಾಗಿ ಕಾನೂನು ಬದ್ಧವಾಗಿ ಆಧಾರ್ ಕಾರ್ಡ್ ಲಭಿಸಿ, ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿದೆ. ಇದಕ್ಕೆ ಶ್ರಮಿಸಿದ ಎಲ್ಲರಿಗೂ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸುಬ್ಬರಾಯ ಅಭಿನಂದಿಸಿದ್ದಾರೆ. ಈ ಸಂದರ್ಭದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮ್ಯಾನೇಜರ್ ಸುರೇಶ್, ಆಶ್ರಮ ಶಾಲೆ ಮುಖ್ಯ ಶಿಕ್ಷಕ ಬಸವಣ್ಣ, ಕುಮಾರಸ್ವಾಮಿ, ಸೋಮಣ್ಣ, ಶಿವಣ್ಣ, ಸಿದ್ದರಾಜು ಇದ್ದರು.

ಆರಾಧನಾ ಸಮಿತಿ ಸದಸ್ಯರ ನೇಮಕ

ಯಳಂದೂರು, ಡಿ.13(ವಿ.ನಾಗರಾಜು)–ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯ ನಾಮನಿರ್ದೇಶಿತ ಸದಸ್ಯರಾಗಿ ಮಸಣಾಪುರ ಗ್ರಾಮದ ಎಂ. ಶಿವನಂಜಯ್ಯ ಅವರನ್ನು ನೇಮಕ ಮಾಡಲಾಗಿದೆ.



ಕಂದಾಯ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಎಂ.ಮಾಲಾ ಈ ಸಂಬಂಧ ಆದೇಶ ನೀಡಿದ್ದಾರೆ. ಇದಕ್ಕೆ ಕಾರಣಕರ್ತರಾದ ಶಾಸಕ ಎ.ಆರ್. ಕೃಷ್ಣಮೂರ್ತಿಗೆ ಶಿವನಂಜಯ್ಯ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ವಾರದ ಮಿತ್ರ

ಸಾಪ್ತಾಹಿಕ ಪುರವಣಿ


ಮೈಸೂರು ಮಿತ್ರ

ಭಾನುವಾರ 14-12-2025

ಭಾವೈಕ್ಯದ ಮಹಾಬೆಳಕು

ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು

ಮಳವಳ್ಳಿಯಲ್ಲಿ ನಾಳೆಯಿಂದ 1066ನೇ ಜಯಂತಿ



ಡಿಸೆಂಬರ್ 15ರಂದು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಯನ್ನು ಸುತ್ತೂರು ಶ್ರೀಕ್ಷೇತ್ರದಿಂದ ಮಳವಳ್ಳಿಗೆ ಶ್ರದ್ಧಾಭಕ್ತಿಯಿಂದ ತಂದು ಪ್ರತಿಷ್ಠಾಪಿಸಲಾಗುತ್ತದೆ. ಈ ಮಹೋತ್ಸವವನ್ನು 16.12.2025ರಂದು ಭಾರತದ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರು ಉದ್ಘಾಟಿಸಲಿದ್ದು, ಡಿಸೆಂಬರ್ 21ರಂದು ಕರ್ನಾಟಕದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಂದ ಸಮಾರೋಪಗೊಳ್ಳುತ್ತದೆ

ಬ್ಯಾ.ರಾ. ಪ್ರಸನ್ನಕುಮಾರ್

ಫೋನ್: 9206376889

ಭಾರತದ ಪ್ರಮುಖ ಆಧ್ಯಾತ್ಮಿಕ ಮತ್ತು ಧಾರ್ಮಿಕ ಕೇಂದ್ರ. ಮೈಸೂರಿನಿಂದ ದಕ್ಷಿಣಕ್ಕೆ 28 ಕಿಮೀ ದೂರದಲ್ಲಿರುವ ಸುತ್ತೂರೆಂಬ ಕುಗ್ರಾಮವೊಂದು ಜಗದ ಭೂಪಟದಲ್ಲಿ ಬೆರಗುಗಣ್ಣಿನಿಂದ ನೋಡುವಂತೆ ಮಾಡಿ ಪ್ರದಕ್ಷಿಣಾಪುರವನ್ನು ಶ್ರೀಕ್ಷೇತ್ರವನ್ನಾಗಿಸಿ ಜಗದ ಜನರ ಭವದ ಭಾರವ ಕಳೆದು ಭವದ ವಿಭೂತಿಯಾಗಿ ಗದ್ದಿಗೆಯಲ್ಲಿ ಶಾಂತರೂಪದಲ್ಲಿ ಕುಳಿತು ಸಕಲ ಜೀವಂಗಳಿಗೂ ಲೇಸನ್ನೇ ಬಯಸುತ್ತಿದ್ದಾರೆ ಸುತ್ತೂರಯ್ಯ ಶಿವರಾತ್ರೀಶ್ವರ ಭಗವತ್ಪಾದರು.

ಪುರೇಣೇತಿಹಾಸ

ಸೊತ್ತೀಯೂರು, ಶ್ರೋತಿಯೂರು ಪ್ರದಕ್ಷಿಣಾಪುರ ಎಂದು ಕರೆಯಲಾಗುತ್ತಿದ್ದ ಕಪಿಲಾನದಿ ತೀರದಲ್ಲಿರುವ ಶ್ರೀಕ್ಷೇತ್ರ ಸುತ್ತೂರು ಗಂಗ, ಚೋಳ, ಹೊಯ್ಸಳ ರಾಜಮನೆತನಗಳ ರಾಜ್ಯಪಾಲರ ಆಡಳಿತ ಕೇಂದ್ರವಾಗಿದ್ದುದು, ಮಲೆ ಮಹದೇಶ್ವರರು, ಯಡಿಯೂರು ಸಿದ್ಧಲಿಂಗೇಶ್ವರರು, ಕಲ್ಯಾಣಕ್ರಾಂತಿಯ ನಂತರ ಅನೇಕ ಶರಣರು ಇಲ್ಲಿ ಬಂದು ನೆಲೆಸಿದ್ದರೆಂಬುದನ್ನು, ಶಾಸನಗಳು, ಕಾವ್ಯಗಳು, ದೇಸೀಯ ಸಾಹಿತ್ಯ ಬರಹಗಳು ಸ್ಪಷ್ಟಪಡಿಸುತ್ತವೆ.

ಗುರುಪರಂಪರೆ

ಆದಿಗುರು ಭಗವತ್ಪಾದ ಶಿವರಾತ್ರಿ ಶಿವಯೋಗಿಗಳಿಂದ ಆರಂಭವಾಗಿ ಇದುವರೆಗೂ ಇಪ್ಪತ್ಮೂರನೆಯ ಜಗದ್ಗುರುಗಳಾದ ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮತ್ತು ಪ್ರಸ್ತುತ ಪರಮ ಪೂಜ್ಯ ಜಗದ್ಗುರುಗಳಾದ ಶ್ರೀ ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರೆಗೆ ಇಪ್ಪತ್ತನಾಲ್ಕು ಜಗದ್ಗುರುಗಳು ಸಮಾಜಮುಖಿ ಕಾಯಕದಿಂದ ಜನಮಾನಸದ ಹೃದಯ ಸಿಂಹಾಸನದಲ್ಲಿ ಶಾಶ್ವತವಾಗಿ ಸ್ಥಿರವಾಗಿ ನೆಲೆಸಿರುತ್ತಾರೆ.

ಶ್ರೀಮಠದ ಸ್ಥಾಪನೆ

ತಲಕಾಡಿನ ಗಂಗರಾಜ ನಾಲ್ಕನೆಯ ರಾಚಮಲ್ಲನಿಗೂ ಚೋಳರಾಜ ರಾಜರಾಜ ಚೋಳನಿಗೂ ಹಗೆತನವುಂಟಾಗಿ ಯುದ್ಧ ಸಂಘರ್ಷದ ಕಾರ್ಮೋಡ ಕವಿದು, ಅಶಾಂತಿಯ ಕತ್ತಲೆ ಆವರಿಸಿದ ಸಂದರ್ಭದಲ್ಲಿ ಶಾಂತಿಯ ಸೂರ್ಯನಂತೆ ಶಿವರಾತ್ರೀಶ್ವರ ಭಗವತ್ಪಾದರು ಉದಯಿಸಿ, ಆ ರಾಜದ್ವಯರು ಹಿಂಸೆಯ ಉದ್ದೇಶವನ್ನು ಕೈಬಿಟ್ಟು ಶಾಂತಿಯ ಬೆಳಕಾಗಿ ಎರಡು ವಿಭಿನ್ನ ಸಂಸ್ಕೃತಿಗಳ ವಿನಿಮಯದ ಹೃದಯಾಲಿಂಗನಕ್ಕೆ ಕಾರಣವಾಗಿ ಸಾಮ್ರಾಜ್ಯವೆಂದರೆ ಬರಿ ಗಡಿ ವಿಸ್ತರಣೆಯಲ್ಲ ಜನಪರ ಆಡಳಿತ ನೀಡಿ ಜನರ ಕಲ್ಯಾಣ ಮಾಡಿ ಲೋಕ ಸಂಗ್ರಹ ಕಾಯಕದಲ್ಲಿ ನಿರತರಾಗಿರೆಂದು ಆಶೀರ್ವದಿಸಿದರು.

ಅದರಂತೆ ಈರ್ವ ರಾಜರು ನಡೆದುಕೊಂಡರು. ಚೋಳ ಚಕ್ರಾಧಿಪತಿ ರಾಜರಾಜ ಚೋಳನು ಶಿವರಾತ್ರೀಶ್ವರರ ಚರಣಕ್ಕೆ ಲಲಾಟ ಸಮರ್ಪಿಸಿ ದಕ್ಷಿಣದೇಶದ ಪಾವನಗಂಗೆಯಾದ ಕಪಿಲಾ ನದಿ ದಂಡೆಯ ಸುತ್ತೂರಿನಲ್ಲಿ ಮಠ ಸ್ಥಾಪಿಸಲು ಅರಿಕೆ ಮಾಡಿಕೊಂಡಿದ್ದರ ಫಲವಾಗಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಶ್ರೀಮತ್ಸುತ್ತೂರು ವೀರಸಿಂಹಾಸನ ಪೀಠ ಸ್ಥಾಪನೆಯಾಗಿ ಮುಂದೆ ಎರಡನೆಯ ಪೀಠಾಧಿಪತಿಗಳಾದ ರಾಜೇಂದ್ರ ಚೋಳನಿಗೆ ರಾಜಗುರುಗಳಾಗಿದ್ದ ಜಗದ್ಗುರು ಶ್ರೀ ಈಶಾನೇಶ್ವರ ಒಡೆಯರ್ ಮಹಾಸ್ವಾಮಿಗಳು ಚೋಳ ಮಹಾರಾಜರು ಶ್ರೀಮಠದ ಹತ್ತಿರ ಶ್ರೀಸೋಮೇಶ್ವರ ಮತ್ತು ಅಮೃತೇಶ್ವರಿ ದೇವಾಲಯವನ್ನು ನಿರ್ಮಾಣ ಮಾಡಿದ್ದರ ಬಗ್ಗೆ ಅಲ್ಲಿರುವ ಶಾಸನದಲ್ಲಿ ಉಲ್ಲೇಖಿಸಲಾಗಿದೆ. (23/10/1032) ದೇವಾಲಯವನ್ನು ಚೋಳ ಕಲಾ ವಾಸ್ತುಶಿಲ್ಪಕ್ಕೆ ತೊಂದರೆಯಾಗದಂತೆ ಪ್ರಸ್ತುತ ಜಗದ್ಗುರುಗಳು ಅಭಿವೃದ್ಧಿಪಡಿಸಿರುವುದರಿಂದ ಅದರ ಐತಿಹಾಸಿಕತೆಯ ಮೆರಗನ್ನು ಮತ್ತಷ್ಟು ಹೆಚ್ಚಿಸಿದೆ.

ಪವಾಡ ಪುರುಷರ ಕ್ಷೇತ್ರ

ನಾಲ್ಕನೆಯ ಗುರುಗಳಾದ ಸಿದ್ಧನಂಜ ದೇಶಿಕೇಂದ್ರರ ಕಾಲದಲ್ಲಿ ಮಹಾಶರಣ ಮಲೆ ಮಹದೇಶ್ವರರು ಸುತ್ತೂರಿನಲ್ಲಿ ಸ್ವಲ್ಪಕಾಲ ನೆಲೆಸಿ ರಾಗಿ ಬೀಸುವ ಕಾಯಕ ಮಾಡಿ ಖಂಡುಗ ರಾಗಿಯನ್ನು ಕ್ಷಣ ಮಾತ್ರದಲ್ಲಿ ಬೀಸಿ ಪವಾಡ ಮಾಡಿ ಸುತ್ತೂರು ಸುಖವೆಂದು ಬಂದರೆ ಕುಕ್ಕೇಲಿ ರಾಗಿ ತುಂಬಿತ್ತು ಎನ್ನುತ್ತಾ ಸುತ್ತೂರು ಮಠದ ಕಾಯಕ ಮಹತ್ವವನ್ನು ಲೋಕಕ್ಕೆ ಸಾರಿದರು. ಈಗಲೂ ಸುತ್ತೂರಿನಲ್ಲಿ ಮಾದೇಶ್ವರರು ಬೀಸಿದ ರಾಗಿ ಕಲ್ಲಿದೆ. ಇಲ್ಲಿ ಯಡಿಯೂರು ಸಿದ್ಧಲಿಂಗೇಶ್ವರರು ಜ್ಞಾನ ದೀಕ್ಷೆ ಪಡೆದರು.

ಜಯಂತಿ ನಡೆದು ಬಂದ ದಾರಿ

ಶ್ರೀಮಠದ ಗುರು ಪರಂಪರೆ ಮತ್ತು ಭಕ್ತಗಣ ಸಮೂಹ ಆದಿ ಜಗದ್ಗುರು ಶಿವರಾತ್ರೀಶ್ವರ ಭಗವತ್ಪಾದರ ಜಯಂತಿಯನ್ನು ಒಂದು ಪರಂಪರೆಯಾಗಿ ನಿರಂತರವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಸುತ್ತೂರಿನಲ್ಲಿ ಆಚರಿಸುತ್ತಿದ್ದ ಜಯಂತಿಯ ಸಂಭ್ರಮವನ್ನು ಮೊದಲ ಬಾರಿಗೆ 1953ರಲ್ಲಿ ಮೈಸೂರಿನಲ್ಲಿ ಮಾಸ ಶಿವರಾತ್ರಿಯಂದು ವಾಣಿವಿಲಾಸ ರಸ್ತೆಯಲ್ಲಿದ್ದ ಜೆಎಸ್‌ಎಸ್ ಗುರುಕುಲದಲ್ಲಿ 22ನೆಯ ಜಗದ್ಗುರು ಮಂತ್ರ ಮಹರ್ಷಿಗಳು ಮತ್ತು 23ನೆಯ ಪರಮ ಪೂಜ್ಯರಾದ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರ ಮಹೋನ್ನತ್ತ ದಿವ್ಯ ಸಾನಿಧ್ಯದಲ್ಲಿ ಮೈಸೂರು ಸಂಸ್ಥಾನದ ಶಿಕ್ಷಣಾಧಿಕಾರಿಗಳಾಗಿದ್ದ ಜೆ.ಬಿ. ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ, ನಂಜುಂಡಾರಾಧ್ಯರವರು ಉಪಸ್ಥಿತಿಯಲ್ಲಿ ಆಚರಿಸಲಾಯಿತು. ಹಾಗಾಗಿ ಪ್ರತಿ ವರ್ಷ ಆದಿಗುರುವಿನ ಜಯಂತಿಯನ್ನು ಮಾಸ ಶಿವರಾತ್ರಿಯಂದೇ ಆಚರಿಸಲಾಗುತ್ತಿದೆ.

ಭಾರತವು ಚೀನಾದೊಡನೆ ಯುದ್ಧ ಸಂಘರ್ಷದಲ್ಲಿದ್ದ ಸಮಯದಲ್ಲಿ ನಡೆದ ಜಯಂತಿಯಲ್ಲಿ ಕರ್ನಾಟಕದ ಮೊದಲ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಪಾಲ್ಗೊಂಡಿದ್ದರು ದೇಶ ಸಂಕಷ್ಟದ ಸಮಯವನ್ನರಿತ ಮಂತ್ರ ಮಹರ್ಷಿಗಳು ತಾವು ಧರಿಸಿದ್ದ ಚಿನ್ನದ ಕರಂಡಿಕೆಯನ್ನು ಮುಖ್ಯಮಂತ್ರಿಗಳಿಗೆ ನೀಡಿ ಆಶೀರ್ವದಿಸಿದರು.

1960ರಲ್ಲಿ ನಡೆದ ಜಯಂತಿಯ ಸಂಭ್ರಮೋತ್ಸವವಂತು ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುದು ಈ ಜಯಂತಿಯ ಸಮಾರೋಪ ಸಮಾರಂಭಕ್ಕೆ ಭಾರತದ ಪ್ರಪ್ರಥಮ ರಾಷ್ಟ್ರಾಧ್ಯಕ್ಷರಾದ ಡಾ. ಬಾಬು ರಾಜೇಂದ್ರ ಪ್ರಸಾದ್‌ರವರು, ಗೊಂಡ್ವಾನದ ಮಹಾರಾಜರು, ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್‌ರವರು ಆಗಮಿಸಿ ಶ್ರೀಮಠದ ಧಾರ್ಮಿಕ, ಆಧ್ಯಾತ್ಮಿಕ, ಸಮಾಜಮುಖಿ ಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು.

1986ರವರೆಗೆ ರಾಜೇಂದ್ರಶ್ರೀಗಳು ಜಯಂತಿಯನ್ನು ಸರ್ವ ಧರ್ಮ ಸಮರಸತೆಗಾಗಿ, ಸಮಾನತೆಯ ತತ್ವ ಪ್ರಚಾರಕ್ಕಾಗಿ ಸಾಮಾಜಿಕ ಶಾಂತಿ ಸಹಬಾಳ್ವೆ, ಹಳ್ಳಿ ಜನರ ಶೈಕ್ಷಣಿಕ ಅಭಿವೃದ್ಧಿಗಾಗಿ ಯುವಕರ ವ್ಯಕ್ತಿತ್ವದ ಬೆಳವಣಿಗಾಗಿ ಸಂದೇಶವಾಹಕರಾಗಿ ನಡೆಸಿದರು. 1986ರ ನಂತರ 21ನೆಯ ಶತಮಾನದ ನಮ್ಮ ನಡುವಿನ ಅಭಿನವ ಬಸವೇಶ್ವರರಂತಿರುವ ಪರಮ ಪೂಜ್ಯ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಭಕ್ತಕೋಟಿಯ ತೀವ್ರ ಒತ್ತಾಸೆಯ ಮೇರೆಗೆ 1033ನೆಯ ಶಿವಯೋಗಿಗಳ ಜಯಂತಿ ಮಹೋತ್ಸವವನ್ನು ಮೈಸೂರಿನ ಹೊರಗೆ ಆಚರಿಸುವ ಮಹತ್ವದ ನಿರ್ಧಾರ ಕೈಗೊಂಡು ಎರಡನೆಯ ಅನುಭವ ಮಂಟಪದ ಮಹಾಮನೆಯನ್ನಾಗಿಸಿ 1992ರಲ್ಲಿ ಮೊದಲ ಬಾರಿಗೆ ಹೆಚ್.ಡಿ.ಕೋಟೆಯ ಸಂತೆಸರಗೂರು ತಾಲೂಕಿನಲ್ಲಿ ಬಹಳ ಯಶಸ್ವಿಯಾಗಿ ನಡೆಸಿದರು.

ಗುಂಡ್ಲುಪೇಟೆ, ಕೊಳ್ಳೇಗಾಲ, ಚಾಮರಾಜನಗರ, ಕೆ.ಆರ್.ನಗರ, ನಂಜನಗೂಡು, ಹುಣಸೂರು, ಪಿರಿಯಾಪಟ್ಟಣ, ಯಳಂದೂರು, ಮೈಸೂರು, ಬೆಂಗಳೂರು, ಪಾಂಡವಪುರ ಮತ್ತು ಶಿವಮೊಗ್ಗಗಳಲ್ಲಿ ನಡೆದು 1066ನೆಯ ಜಯಂತ್ಯೋತ್ಸವವನ್ನು ಪ್ರಾಕೃತಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕವಾಗಿ ಮಹತ್ವವಾಗಿರುವ ಧರೆಗೆ ದೊಡ್ಡವರ ನೆಲೆ ಕಲ್ಯಾಣ ಕ್ರಾಂತಿಯ ನಂತರ ಶರಣರಿಗೆ ಆಶ್ರಯವಿತ್ತ ಪುಣ್ಯಭೂಮಿ ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ 2025 ಡಿಸೆಂಬರ್ 15–22ರವರೆಗೆ ನಡೆಸಲಾಗುತ್ತಿದೆ.



ದ್ರೌಪದಿ ಮುರ್ಮು


ಡಿಸೆಂಬರ್ 15ರಂದು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಯನ್ನು ಸುತ್ತೂರು ಶ್ರೀಕ್ಷೇತ್ರದಿಂದ ಮಳವಳ್ಳಿಗೆ ಶ್ರದ್ಧಾಭಕ್ತಿಯಿಂದ ತಂದು ಪ್ರತಿಷ್ಠಾಪಿಸಲಾಗುತ್ತದೆ. ಈ ಮಹೋತ್ಸವವನ್ನು 16.12.2025ರಂದು ಭಾರತದ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರು ಉದ್ಘಾಟಿಸಲಿದ್ದು, ಡಿಸೆಂಬರ್ 21ರಂದು ಕರ್ನಾಟಕದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಂದ ಸಮಾರೋಪಗೊಳ್ಳುತ್ತದೆ.

ಸಮಾಜಮುಖಿ ಕಾಯಕ ಪ್ರೇಮಿ, ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿಗಳವರ ದಿವ್ಯ ಸಾನಿಧ್ಯ, ಕೃಪಾಶೀರ್ವಾದ ಮತ್ತು ಕಿರಿಯ ಶ್ರೀಗಳಾದ ಜಯರಾಜೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳ ಜಯಂತಿಯು ಇಂದು ಕೇವಲ ಮಠದ ಉತ್ಸವವಾಗದೆ ಸಮಾಜದ ಉತ್ಸವವಾಗಿ ನಾಡಿನ ಹೆಮ್ಮೆಯ ಹಬ್ಬವಾಗಿದೆ. ಏಕೆಂದರೆ ಇಲ್ಲಿ ಇವನಾರವನೆನ್ನದೆ ಎಲ್ಲರೂ ನಮ್ಮವನೆನ್ನುವ ಭಾವ ಮತ್ತು ಸರ್ವ ಜನಾಂಗ ಸರ್ವಧರ್ಮಗಳ ಪೂಜ್ಯರ ಸಮಾವೇಶ. ಸಾಮಾಜಿಕ ಹೋರಾಟಗಾರರ, ಅನ್ನದಾತರ, ದಾರ್ಶನಿಕರ, ನಾಡು ದೇಶ ಮತ್ತು ವಿಶ್ವಕ್ಕೆ ಅಸಾಮಾನ್ಯ ಕೊಡುಗೆ ನೀಡಿದವರ ರಾಜಕಾರಣದ, ಧೀಮಂತರ ಪ್ರಸಿದ್ಧರೆಲ್ಲರ ಸಂಗಮವಾಗಿದೆ ರಂಜನೆ ಮನರಂಜನೆ ಬೋಧನೆಯು ಇಲ್ಲಿ ಗಗನಚುಕ್ಕಿ, ಭರಚುಕ್ಕಿ ಜಲಪಾತಗಳಂತೆ ಬೋರ್ಗರೆಯುತ್ತಾ ಧುಮ್ಮಿಕ್ಕಿ ಮೈಮನಗಳಲ್ಲಿ ವಿದ್ಯುತ್ ಸಂಚಾರವಾಗುತ್ತದೆ. ಮಳವಳ್ಳಿಗೆ ಬರಲು ಎಲ್ಲಾ ದಿಕ್ಕುಗಳಿಂದಲೂ ಉತ್ತಮ ಸಂಚಾರ ವ್ಯವಸ್ಥೆಯಿದೆ. ಬನ್ನಿ, ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಯಂತ್ಯೋತ್ಸವಕ್ಕೆ ಬದುಕು ಪಾವನವಾಗಲಿಕ್ಕೆ.

ಮಕ್ಕಳ ಚಿತ್ರಕಥೆ: ನಾಲ್ವರು ಸ್ನೇಹಿತರು (ಕಳೆದ ವಾರದಿಂದ)

■ ಹೆಚ್.ಜಿ.ಎನ್.ಪ್ರಸಾದ್

ಮೊ. 98453 76199



ಜಿಂಕೆಯ ಮುಖದಲ್ಲಿ ಭಯವನ್ನು ನೋಡಿ ಇವರೆಲ್ಲಾ ಭಯಭೀತರಾದರು. ತಕ್ಷಣವೇ ಆಮೆಯು ಸರೋವರದಲ್ಲಿ ಮಾಯವಾಯಿತು.



ಇಲಿಯು ಬಿಲವನ್ನ ಹೊಕ್ಕಿತು.



ಕಾಗೆಯು ಹಾರಿ ಮರದ ಕೊಂಬೆಯ ಮೇಲೆ ಹೋಗಿ ಕುಳಿತಿತು. ಸ್ವಲ್ಪ ಸಮಯ ಕಳೆಯಿತು. ಕಾಗೆಗೆ ಸಮೀಪದಲ್ಲಿ ಯಾವುದೇ ಅಪಾಯಕಾರಿ ಪ್ರಾಣಿ ಅಥವಾ ಬೇಟೆಗಾರ ಇಲ್ಲವೆಂದು ಖಾತರಿಯಾಯಿತು.



ಎಲ್ಲರೂ ಹೊರ ಬನ್ನಿ... ಇಲ್ಲಿ ಏನೂ ಅಪಾಯವಿಲ್ಲ...! ಎಂದು ಕೂಗಿ, ತನ್ನ ಸ್ನೇಹಿತರನ್ನು ಕರೆಯಿತು.



ಮೂವರೂ ಜೊತೆಯಾಗಿ ಜಿಂಕೆಯ ಬಳಿ ಬಂದರು. ಕಾಗೆ ಜಿಂಕೆಯನ್ನು ಕೇಳಿತು, ನಾನು ಸಮೀಪದಲ್ಲಿ ಯಾವುದೇ ಕ್ರೂರ ಪ್ರಾಣಿಯನ್ನಾಗಲೀ ಅಥವಾ ಬೇಟೆಗಾರನನ್ನಾಗಲೀ ನೋಡಲಿಲ್ಲ.... ನೀನು ಏಕೆ ಭಯಪಟ್ಟು ನಮ್ಮಲ್ಲಿಗೆ ಓಡಿ ಬಂದೆ...?



ಆಗ ಜಿಂಕೆಯು ಕಳಿಂಗದ ರಾಜ ಬೇಟೆಯಾಡಲು ಕಾಡಿನಲ್ಲಿ ಬಿಡಾರ ಹೂಡಿರುವನು. ಅವನ ಇಬ್ಬರು ಸೈನಿಕರು ನನ್ನನ್ನು ಹಿಂಬಾಲಿಸುತ್ತಿದ್ದರು. ನಾನು ತಪ್ಪಿಸಿಕೊಳ್ಳುವ ಸಲುವಾಗಿ ಓಡಿ ಬಂದೆ... ನನಗೆ ಅಡಗಿಕೊಳ್ಳಲು ಅವಕಾಶ ನೀಡಿದ್ದಕ್ಕೆ ನಿಮಗೆ ವಂದನೆಗಳು....! ಎಂದಿತು. (ಮುಂದುವರೆಯುವುದು)

ವಾರಭವಿಷ್ಯ

14.12.2025 ರಿಂದ 20.12.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಶ್ಚಿಕ, ಧನುಸ್ಸು, ಚಂದ್ರ–ಕನ್ಯಾ ತುಲಾ, ವೃಶ್ಚಿಕ, ಧನುಸ್ಸು, ಕುಜ–ಧನುಸ್ಸು, ಬುಧ–ವೃಶ್ಚಿಕ, ಗುರು–ಮಿಥುನ, ಶುಕ್ರ–ವೃಶ್ಚಿಕ, ಧನುಸ್ಸು, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.



ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'

'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'

'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'

ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.

ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ಕೈ ಕೆಸರಾದರೆ ಬಾಯಿ ಮೊಸರು. ಸ್ವಲ್ಪ ತಡವಾಗಿ ನಿಮ್ಮ ಶ್ರಮಕ್ಕೆ ಪ್ರತಿಫಲ ದೊರೆಯುವ ಸಮಯ ಬಂದಿದೆ. ವೃತ್ತಿ ಸ್ಥಾನದಲ್ಲಿ ಹರ್ಷದ ವಾತಾವರಣ ಇರುತ್ತದೆ. ನಿಮ್ಮ ರಾಶ್ಯಾಧಿಪತಿ ಕುಜನಿಂದ ಅಪರಾಧವಿರದೇ ನಿಂದನೆ, ಕಲಹಗಳು. ನೀವು ಮಾಡಿದ ಕೆಲಸದಿಂದ ಅನ್ಯರಿಗೆ ತೊಂದರೆಗಳು. ರುಚಿಸದ ಆಹಾರ ಸೇವನೆಯಿಂದ ಪಿತ್ತ ಪ್ರಕೋಪ. ಮಾನಸಿಕ ತೊಳಲಾಟ. ವಿದ್ಯುತ್ ಯಂತ್ರಗಳನ್ನು ಉಪಯೋಗಿಸುವಾಗ ಜಾಗ್ರತರಾಗಿರಿ.

ಶ್ರೀ ಗಣಪತಿ ಸೇವೆ. ಶುಭ ಸಂಖ್ಯೆ–6

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಉದ್ಯೋಗಸ್ಥ ಸ್ತ್ರೀಯರಿಗೆ ಶುಭ ವಾರ್ತೆ ಬರುವುದು. ಮಿತ್ರರ ಸಹಾಯ ಹಸ್ತ ದೊರಕಿ ಕಾರ್ಯಾನುಕೂಲ. ಗೃಹ ವಸ್ತು ಬಳಕೆ ವಸ್ತುಗಳಿಗೆ ಧನ ವಿನಿಯೋಗ. ನೆರೆಹೊರೆಯವರ ಜೊತೆಗೆ ದ್ವೇಷ ಹಾಗೂ ಜಗಳ ಉಂಟಾಗುವುದು. ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ತಾಳ್ಮೆ ವಹಿಸಿ. ಅನ್ನಾಹಾರಗಳಲ್ಲಿ ಲೋಪದಿಂದ ಆರೋಗ್ಯ ಕೆಡುವುದು. ಪುತ್ರ–ಪುತ್ರಿ, ಭ್ರಾತೃಗಳ ಆಗ್ರಹಕ್ಕೆ ಗುರಿಯಾಗುವಿರಿ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–4

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಕೆಲವೊಂದು ಘಟನೆಗಳು ಮುನ್ಸೂಚನೆ ಇಲ್ಲದೆ ಜರುಗುವುದರಿಂದ ಮನಸ್ಸಿಗೆ ಬೇಸರವಾಗುವುದು. ದುಬಾರಿ ವಸ್ತು ಖರೀದಿಗೆ ಹಣ ವ್ಯಯವಾಗುವುದು. ಶತ್ರುಗಳನ್ನು ಸಮರ್ಥವಾಗಿ ಎದುರಿಸುವಿರಿ. ಮುಂಗೋಪವನ್ನು ತ್ಯಜಿಸಿದರೆ ಒಳ್ಳೆಯದು. ವಾರಾಂತ್ಯಕ್ಕೆ ಸಹೃದಯಿ ಗೆಳೆಯರ ಭೇಟಿ, ಧನ–ಧಾನ್ಯ ಲಾಭ. ಆರೋಗ್ಯದಲ್ಲಿ ಸುಧಾರಣೆ. ಗುರುಜನರ ಭೇಟಿಯಿಂದ ಅನುಮಾನಕ್ಕೆ ಪರಿಹಾರ.

ಶ್ರೀ ದೇವೀಸ್ತುತಿ. ಶುಭ ಸಂಖ್ಯೆ–2

ಕಟಕ (ಹೊ,ಹು,ಹೆ,ಡ,ಡಿ,ಡು)

ವಾರದ ಆದಿಗೆ ಹಣ ಸಂಪಾದನೆಗೆ ಹಲವು ಮಾರ್ಗಗಳು ಹೊರ ಹೊಮ್ಮುವುದು. ಸದಾ ಕ್ರಿಯಾಶೀಲರಾಗಿರುವಿರಿ. ದೂರದ ಊರಿಗೆ ಪ್ರಯಾಣದ ಸಾಧ್ಯತೆಯನ್ನು ತಳ್ಳಿ ಹಾಕಲಾಗದು. ಹಣ ಕೊಡಬೇಕಾದವರು ಮುಖ ಮುಚ್ಚಿ ಓಡಾಡುವರು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಫಲವನ್ನು ನಿರೀಕ್ಷಿಸಬಹುದು. ನ್ಯಾಯಾಲಯದ ವಿಚಾರದಲ್ಲಿ ಅನುಕೂಲಕರ ವಾತಾವರಣ ಉಂಟು. ರಾಹು–ಕೇತುಗಳ ಪ್ರಭಾವದಿಂದ ಪಾಪ ಕಾರ್ಯಗಳಲ್ಲಿ ಆಸಕ್ತಿ ತೋರುವುದು.

ಶ್ರೀ ಗೋವು ಸೇವೆ. ಶುಭ ಸಂಖ್ಯೆ–3

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಶ್ರೀ ಗುರುವಿನ ಅನುಗ್ರಹದಿಂದ ದೈನಂದಿನ ದೋಣಿಯು ಸಾಗುತ್ತಲಿದೆ. ಹಣಕಾಸಿನ ವಿಷಯಗಳು ತೃಪ್ತಿದಾಯಕವಾಗಿದ್ದರೂ ಅಷ್ಟ ಶನಿದೇವನ ಕಾರಣ ಮನಸ್ಸಿಗೆ ಹಾಗೂ ದೇಹಕ್ಕೆ ಒಗ್ಗದ ಘಟನೆಗಳು ನಡೆದು ಬಿಡುತ್ತವೆ. ವಾರ ಮಧ್ಯಾನಂತರ ವ್ಯಾಪಾರ–ವ್ಯವಹಾರಗಳು ಚೆನ್ನಾಗಿ ನಡೆಯುವುದು. ಹಲವರಿಗೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುವುದು. ಹೊಸ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುವಿರಿ.

ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ–1

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದಾಗಿ ಲವಲವಿಕೆಯಿಂದ ಇದ್ದು, ಇದು ಬಿಡುವಿಲ್ಲದ ವಾರವೆನಿಸುವುದು. ಧಾರ್ಮಿಕ ಕಾರ್ಯ ಬಾಹುಳ್ಯಗಳಲ್ಲಿ ನಿರತರಾಗುವಿರಿ. ಮುಖ್ಯ ಕೆಲಸಗಳನ್ನು ಕೈಗೆತ್ತಿಕೊಳ್ಳಿ ಸಫಲರಾಗುವಿರಿ. ನಿವೇಶನ, ಗೃಹ ಖರೀದಿಗೆ ಒಪ್ಪಂದ ಮಾಡಿಕೊಳ್ಳಬಹುದು. ಪ್ರಯಾಣಗಳು ಲಾಭದಾಯಕವೆನಿಸುವುದು. ಸಪ್ತಮ ಶನಿಯ ಕಾರಣ ಪತಿ–ಪತ್ನಿಯರು ಭಿನ್ನಾಭಿಪ್ರಾಯಗಳನ್ನು ಮರೆತು ಅನ್ಯೋನ್ಯವಾಗಿರುವುದು ಒಳಿತು.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–9

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ದೇವತಾ ದರ್ಶನದಿಂದ ಮನಃಶಾಂತಿ, ಉದ್ಯೋಗಾಕಾಂಕ್ಷಿಗಳಿಗೆ ಶುಭ ವಾರ್ತೆ ಬರುವುದು. ವಾರ ಮಧ್ಯೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಧನಾಗಮ, ಶೃಂಗಾರ ವಸ್ತು ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರ ಹಾಗೂ ಧನಲಾಭ. ದೂರ ಪ್ರಯಾಣ ಯೋಗವಿದೆ. ವಿದ್ಯಾರ್ಥಿಗಳ ಬುದ್ಧಿ ಚುರುಕಾಗುವುದು. ನಿಂತು ಹೋಗಿದ್ದ ಕಾರ್ಯ ಕಲಾಪಗಳು ಪುನರಾರಂಭವಾಗುವುದು. ಸ್ತ್ರೀಯರೊಬ್ಬರ ಸಹಾಯ ನಿಮಗೆ ವರದಾನವಾಗಿ ಪರಿಣಮಿಸಲಿದೆ.

ಶ್ರೀ ಲಲಿತಾ ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–5

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಪಂಚಮ ಶನಿಯಿಂದ ಮಕ್ಕಳಲ್ಲಿ ವೈಮನಸ್ಯ, ದುಡುಕು ಸ್ವಭಾವದಿಂದ ಬುದ್ಧಿ ಶೂನ್ಯತೆ ನೀಡುತ್ತಾನೆ. ಅಷ್ಟಮ ಗುರು ವರಮಾನಕ್ಕಿಂತ ಖರ್ಚು ಜಾಸ್ತಿ, ಯತ್ನ ಕಾರ್ಯಗಳಿಗೆ ತಡೆಯನ್ನು ನೀಡುತ್ತಾನೆ. ವಾರದ ಕಡೆಗೆ ಚಂದ್ರಗ್ರಹದ ಕೃಪೆಯಿಂದ ಮನಸ್ಸಿಗೆ ಪ್ರಸನ್ನಗೊಳಿಸುವ ಕೆಲವು ಸಂಗತಿಗಳು ನಿಮ್ಮ ಮನಸ್ಸನ್ನು ತಟ್ಟುತ್ತವೆ. ಬಂಧು–ಮಿತ್ರರ ಮಿಲನದಿಂದ ಹರುಷ, ಪಿಕ್‌ನಿಕ್ ಪ್ರವಾಸಗಳಿಂದ ಸಪ್ತಾಹಕ್ಕೆ ತೆರೆ.

ಶ್ರೀ ನೃಸಿಂಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–8

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ಆಧ್ಯಾತ್ಮ ವಿಷಯಗಳಲ್ಲಿ ಒಲವು ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ. ಹಣಕಾಸು ಸಂಬಂಧ ವಿಚಾರಗಳು ಲಾಭ ತರುತ್ತವೆ. ಉದ್ಯೋಗ ಅರಸುತ್ತಿರುವವರಿಗೆ ಸಂತಸದ ಸುದ್ದಿ ಬರಲಿದೆ. ಪ್ರೇಮ ಪ್ರಸಂಗಗಳು ಮೈಮನಗಳಲ್ಲಿ ಪುಳಕ ಉಂಟು ಮಾಡುವುದು. ವೃತ್ತಿಸ್ಥಳದಲ್ಲಿ ಸಹ ವರ್ತಿಗಳೊಂದಿಗೆ ಘರ್ಷಣೆಯಿಂದ ಸಂಬಂಧಗಳು ಕೆಡುವುದು. ದುಡುಕಿನಿಂದ ಕಾರ್ಯಗೆಡಬಹುದು.

ಶ್ರೀ ಮನೆದೇವರ ದರ್ಶನ. ಶುಭ ಸಂಖ್ಯೆ–7

ಮಕರ (ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ)

ಹಳೆಯ ಹಣಕಾಸು ಸಮಸ್ಯೆಗಳು ಬಗೆಹರಿಯುವ ಸೂಚನೆ ಉಂಟು. ಎದುರಾಗುವ ಕಷ್ಟಗಳನ್ನು ಸಮರ್ಥವಾಗಿ ಎದುರಿಸಲು ಗುರುಬಲವಿದೆ. ಚತುರರಾದ ನೀವು ಎಲ್ಲವನ್ನು ಆತ್ಮಸ್ಥೈರ್ಯದಿಂದ ನಿಭಾಯಿಸುವಿರಿ. ಜಮೀನು, ನಿವೇಶನ ಸಂಬಂಧಿ ವ್ಯವಹಾರಗಳು ಸುಗಮವಾಗಿ ಪೂರ್ಣಗೊಳ್ಳುವುದು. ಸೌಹಾರ್ದಗುಣದಿಂದ ಎಲ್ಲರಲ್ಲೂ ಪ್ರೇಮಾದರಗಳನ್ನು ಗಳಿಸುವಿರಿ. ಆರೋಗ್ಯ ಸುಧಾರಿಸುವುದು.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–1

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಚತುರತೆಯಿಂದ ವ್ಯವಹಾರ ಮಾಡುವುದರಿಂದ ಯಶಸ್ಸು ದೊರೆಯಲಿದೆ. ಜಯಾಪಜಯಗಳು ಸಮನಾಗಿ ಸಾಗುವುದು. ಹಿತೈಷಿಗಳ ಸಹಕಾರದಿಂದ ಅಸಾಧ್ಯವಾದುದನ್ನು ಸಾಧಿಸುವಿರಿ. ನಿಮ್ಮ ಈ ಹಿಂದಿನ ಪರಿಶ್ರಮ ಈಗ ಫಲ ನೀಡಲಿದೆ. ಆನ್‌ಲೈನ್ ಹಣಕಾಸಿನ ವ್ಯವಹಾರದಿಂದ ನಷ್ಟವನ್ನು ಅನುಭವಿಸಬೇಕಾದೀತು. ಹೊಸ ಹೂಡಿಕೆಗಳನ್ನು ಮಾಡಲು ಸೂಕ್ತ ಸಮಯವಲ್ಲ. ನರದೌರ್ಬಲ್ಯ ಕಾಡುತ್ತದೆ.

ಶ್ರೀ ದೇವೀ ಖಡ್ಗಮಾಲ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–3

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಮುಖ್ಯ ಕೆಲಸಗಳು ನಿಧಾನಗತಿಯಲ್ಲಿ ಸಾಗುವುದು. ಆತುರದ ಸ್ವಭಾವದಿಂದ ಹಣ ಕಳೆದುಕೊಳ್ಳುವಿರಿ. ಮನೆಯಲ್ಲಿ ಮನಸ್ಸಿಗೆ ಕಿರಿಕಿರಿ ಉಂಟು ಮಾಡುವ ಪ್ರಸಂಗಗಳು ನಡೆದೀತು. ಆರೋಗ್ಯವೂ ಅಷ್ಟಕಷ್ಟೆ ಸಂಚಾರ ನಿಯಮಗಳನ್ನು ಪಾಲಿಸದೆ ಸರ್ಕಾರಕ್ಕೆ ದಂಡ ಕಟ್ಟಬೇಕಾದೀತು. ವಾರದ ಕಡೆಗೆ ಆದಾಯದ ಹೊಸ ಮಾರ್ಗಗಳು ತೆರೆದುಕೊಳ್ಳುವುದು. ಹೆಚ್ಚು ಸಮಯ ಮನೆಯಿಂದ ಹೊರ ಹೋಗುವ ಪ್ರಸಂಗ ಬಂದರೆ ಮನೆಯ ಬಂದೋಬಸ್ತ್ ಸರ್ಮಪಕವಾಗಿರಲಿ.

ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4

ಮೈಸೂರು ಮಿತ್ರ ಭಾನುವಾರ 14 ಡಿಸೆಂಬರ್ 2025

ಹುಣಸೂರಲ್ಲಿ ಪತ್ರ ಬರಹಗಾರರ ಪ್ರತಿಭಟನೆ



ಪತ್ರ ಬರಹಗಾರರು ಧರಣಿ ನಡೆಸಿ ತಹಸೀಲ್ದಾರ್ ಮಂಜುನಾಥ್‌ರವರಿಗೆ ಮನವಿ ಸಲ್ಲಿಸಿದರು.

ಹುಣಸೂರು, ಡಿ.13– ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ತಾಲೂಕು ದಸ್ತಾವೇಜು ಪತ್ರ ಬರಹಗಾರರ ಸಂಘದ ಆಶ್ರಯದಲ್ಲಿ ತಾಲೂಕು ಕಚೇರಿ ಮುಂದೆ ಪತ್ರಬರಹಗಾರರು ಪ್ರತಿಭಟನಾ ಧರಣಿ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ತಾಲೂಕು ಪತ್ರ ಬರಹಗಾರರ ಸಂಘದ ಅಧ್ಯಕ್ಷ ಗಣೇಶ, ಉಪಾಧ್ಯಕ್ಷ ಬೀರೇಶ್ ಬೇರೆ ರಾಜ್ಯಗಳಲ್ಲಿರುವಂತೆ ಬರಹಗಾರರಿಗೆ ಪ್ರತ್ಯೇಕ ಲಾಗಿನ್ ವ್ಯವಸ್ಥೆ, ನೋಂದಣಿಯಾಗುವ ಪ್ರತಿಯೊಂದು ದಸ್ತಾವೇಜುಗಳಿಗೆ ಪರವಾನಿಗೆ ಪಡೆದ ಬರಹಗಾರರ ಅಥವಾ ವಕೀಲರ ಸಹಿ ಕಡ್ಡಾಯಗೊಳಿಸಬೇಕು ಎಂದು ಆಗ್ರಹಿಸಿದರು.

ಉಪನೋಂದಣಾಧಿಕಾರಿ ಕಚೇರಿಯಲ್ಲಿ ಅನಧಿಕೃತ ವ್ಯಕ್ತಿಗಳು ಬರುವುದನ್ನು ತಡೆಗಟ್ಟಬೇಕು, ಪರವಾನಿಗೆ ಪಡೆದ ಎಲ್ಲಾ ದಸ್ತವೇಜು ಬರಹಗಾರರಿಗೆ ಸರ್ಕಾರದ ವತಿಯಿಂದ ಗುರುತಿನ ಚೀಟಿ ವಿತರಿಸುವುದಲ್ಲದೇ, ಈಗಾಗಲೇ ಇಲಾಖೆ ಅಭಿವೃದ್ಧಿಪಡಿಸಿ ಚಾಲ್ತಿಯಲ್ಲಿರುವ ಕಾವೇರಿ 2.0 ತಂತ್ರಾಂಶದಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸುವುದು ಮತ್ತು ಇದೀಗ ಅಭಿವೃದ್ಧಿಪಡಿಸುತ್ತಿರುವ ಕಾವೇರಿ 3.0 ತಂತ್ರಾಂಶವನ್ನು ಕೈಬಿಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

ಈ ಸಂಬಂಧ ಮನವಿ ಸ್ವೀಕರಿಸಿದ ತಹಸೀಲ್ದಾರ್ ಮಂಜುನಾಥ್ ಮತ್ತು ಪ್ರಭಾರ ಉಪನೋಂದಣಾಧಿಕಾರಿ ಗುರುರಾಜ್ ಅವರು ಪ್ರತಿಭಟನಾಕಾರರ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸುವುದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ಪತ್ರ ಬರಹಗಾರರ ಸಂಘದ ಗೌರಾವಾಧ್ಯಕ್ಷ ಸಿ.ಎಸ್.ನಾಗರಾಜ್, ಹೆಚ್.ಆರ್.ಜಗದೀಶ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ರಾಜಶೇಖರಮೂರ್ತಿ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಹೆಚ್.ಎಸ್.ರವಿ, ತಾ.ಪ್ರಧಾನ ಕಾರ್ಯದರ್ಶಿ ಸಣ್ಣಮಾದಯ್ಯ, ಸಹ ಕಾರ್ಯದರ್ಶಿ ಸಂತೋಷ್‌ಕುಮಾರ್, ಖಜಾಂಚಿ ಧನಂಜಯ, ಸಂಚಾಲಕರಾದ ಹೆಚ್.ಎಸ್.ರವಿಕುಮಾರ್, ಟಿ.ಮಹದೇವನಾಯಕ, ಮುಖಂಡರಾದ ಸಿದ್ದೇಶ್, ಉದಯ್‌ಕುಮಾರ್, ಸತ್ಯನಾರಾಯಣರಾವ್, ಧನರಾಜ್, ಕಿರಣ್ ಸೇರಿದಂತೆ ಹಲವಾರು ಮಂದಿ ಬರಹಗಾರರು ಹಾಗೂ ಅವರ ಸಹಾಯಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಾಲೆಗೆ ಹಾರಿ ರೈತ ಆತ್ಮಹತ್ಯೆ



ಕೆ.ಆರ್.ನಗರ: ಸಾಲಬಾಧೆ ತಾಳಲಾರದೆ ರೈತರೊಬ್ಬರು ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವರದಿಯಾಗಿದೆ. ತಾಲೂಕಿನ ಹೆಬ್ಬಾಳು ಕೊಪ್ಪಲು ಗ್ರಾಮದ ರೈತ ಹರೀಶ್ (48) ಆತ್ಮಹತ್ಯೆಗೆ ಶರಣಾಗಿದ್ದು, ಮೃತರಿಗೆ ಪತ್ನಿ ಹಾಗೂ ಓರ್ವ ಪುತ್ರ, ಪುತ್ರಿ ಇದ್ದಾರೆ.

ಹೆಬ್ಬಾಳು ಸೊಸೈಟಿಯಲ್ಲಿ 1.5 ಲಕ್ಷ ರೂ. ಸೇರಿದಂತೆ ಚಿನ್ನದ ಸಾಲ ಹಾಗೂ ನಾನಾ ಕಡೆ ಕೈಸಾಲ ಮಾಡಿಕೊಂಡಿದ್ದರು ಎನ್ನಲಾಗಿದೆ. ಆದರೆ ಸಾಲ ಹಾಗೂ ಬಡ್ಡಿ ಕಟ್ಟಲಾಗದೆ ನೊಂದಿದ್ದರು. ಗುರುವಾರ ಮಧ್ಯಾಹ್ನ ಎಂದಿನಂತೆ ಮನೆಯಿಂದ ಹೊರ ಹೋದ ಹರೀಶ್ ಗ್ರಾಮದಲ್ಲಿ ಹಾದುಹೋಗಿರುವ ಚಾಮರಾಜ ನಾಲೆಯ ಮೇಲೆ ದ್ವಿಚಕ್ರ ವಾಹನ ಬಿಟ್ಟು ಕಾಣೆಯಾಗಿದ್ದಾರೆ. ನಂತರ ಸಂಜೆ ವೇಳೆಗೆ ಹರೀಶ್ ಮೃತದೇಹ ನಾಲೆಯಲ್ಲಿ ತೇಲಾಡುತ್ತಿರುವ ಬಗ್ಗೆ ದಾರಿ ಹೋಕರು ತಿಳಿಸಿದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಡಿ.16ರಿಂದ ಅಯ್ಯಪ್ಪ ಸ್ವಾಮಿ ಬ್ರಹ್ಮೋತ್ಸವ



ಸುದ್ದಿಗೋಷ್ಠಿಯಲ್ಲಿ ಗುರುಸ್ವಾಮಿ ಪಿ.ದೇವರಾಜಸ್ವಾಮಿ ಮಾತನಾಡಿದರು.

ನಂಜನಗೂಡು: ನಗರದ ಕಪಿಲಾನದಿ ತೀರದ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಡಿ.16 ರಿಂದ ಡಿ.26ರವರೆಗೆ ಅಯ್ಯಪ್ಪ ಸ್ವಾಮಿ ಬ್ರಹ್ಮೋತ್ಸವದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಶಬರಿ ಮಲೆಯ ಪ್ರಧಾನ ಅರ್ಚಕರಾದ ರಾಜೀವರು ತಂತ್ರಿ ಅವರ ಮಾರ್ಗದರ್ಶನದಲ್ಲಿ ನಡೆಯಲಿವೆ ಎಂದು ದೇವಾಲಯದ ಗುರುಸ್ವಾಮಿ ಪಿ.ದೇವರಾಜಸ್ವಾಮಿ ತಿಳಿಸಿದರು.

ನಗರದ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಡಿ.16ರ ಮಂಗಳವಾರ ಬೆಳಗ್ಗೆ 9.30ರಿಂದ 10.15ರವರೆಗೆ ಧ್ವಜಾರೋಹಣ, ಪಡಿಪೂಜೆ 17ರಂದು ಭಗವತಿ ಪೂಜೆ, 20ರಂದು ಶನಿವಾರ ದೇವಾಲಯದ ಆವರಣದಲ್ಲಿ ಭಕ್ತರಿಗೆ ಅನ್ನಸಂತರ್ಪಣೆ ಹಾಗೂ ನಗರದ ರಾಜಬೀದಿಗಳಲ್ಲಿ ಅಯ್ಯಪ್ಪಸ್ವಾಮಿಯ ಉತ್ಸವ ಮೂರ್ತಿಯ ಮೆರವಣಿಗೆ ರಾತ್ರಿ 7 ಗಂಟೆಗೆ ಕಪಿಲಾನದಿಯ ತೇಲುವ ದೇವಾಲಯದಲ್ಲಿ ಅಯ್ಯಪ್ಪಸ್ವಾಮಿ ತೆಪ್ಪೋತ್ಸವ, ಡಿ.25ರ ಗುರುವಾರ ಬೆಳಿಗ್ಗೆ 4.30 ಗಂಟೆಗೆ ಮೈಸೂರಿನ ದತ್ತ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯದಿಂದ ನಂಜನಗೂಡಿನ ದೇವಾಲಯದವರೆಗೆ ಸಾವಿರಾರು ಇರುಮುಡಿ ಹೊತ್ತ ಭಕ್ತರಿಂದ ಬೃಹತ್ ಪಾದಯಾತ್ರೆ, ಡಿ.26ರ ಶುಕ್ರವಾರ ಮಂಡಲಾಭಿಷೇಕದೊಂದಿಗೆ ಅಯ್ಯಪ್ಪ ಸ್ವಾಮಿ ಬ್ರಹ್ಮೋತ್ಸವ ಮುಕ್ತಾಯಗೊಳ್ಳಲಿದೆ ಎಂದು ತಿಳಿಸಿದರು.

ವೃದ್ಧಾಶ್ರಮ ಆರಂಭ: ನಂಜನಗೂಡು ಅಯ್ಯಪ್ಪ ಸ್ವಾಮಿ ದೇವಾಲಯದ ನಿರ್ಮಾತೃ ಪಿ.ಕಾಂತರಾಜ ಸ್ವಾಮಿಗಳ ಅಭಿಲಾಸೆಯಂತೆ ನಗುದ ಚಾಮರಾಜನಗರ ರಸ್ತೆಯ ವಿದ್ಯಾಪೀಠದ ಸಮೀಪ ಉಚಿತ ವೃದ್ಧಾಶ್ರಮವನ್ನು ಆರಂಭಿಸಲು ಸಿದ್ಧತೆಗಳು ನಡೆದಿವೆ, ದೇವಾಲಯದಲ್ಲಿ ಭಕ್ತರು ನೀಡಿರುವ ಕಾಣಿಕೆ 1 ಕೋಟಿ ರೂಪಾಯಿ ಹಾಗೂ ನನ್ನ ಸ್ವಹಸ್ತದಿಂದ ಹೆಚ್ಚಿನ ಹಣ ನೀಡಿ ವೃದ್ಧಾಶ್ರಮವನ್ನು ಆರಂಭಿಸಲಾಗುವುದು, ಮೊದಲಿಗೆ 50 ಮಂದಿ ವೃದ್ಧರಿಗೆ ಆಹಾರ, ವಸತಿ, ಔಷಧಿ, ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುವುದು ಎಂದು ಪಿ.ದೇವರಾಜಸ್ವಾಮಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ದೇವಾಲಯದ ಗೌರವ ಅಧ್ಯಕ್ಷ ನಾರಾಯಣ ಸ್ವಾಮಿ, ಎನ್.ಎಂ.ಮಂಜುನಾಥ್, ಭಕ್ತವತ್ಸಲ, ನಾರಾಯಣ ಉಪಸ್ಥಿತರಿದ್ದರು.

ಕೆರೆಗಳಿಗೆ ನೀರು ತುಂಬಿಸುತ್ತೇವೆ, ಪ್ರತಿಭಟನೆ ಮಾಡಬೇಡಿ

ರೈತರು, ಗ್ರಾಮಸ್ಥರ ಮನವೊಲಿಸಲು ಅಧಿಕಾರಿಗಳ ಹರಸಾಹಸ



ಪ್ರತಿಭಟನೆ ಎಚ್ಚರಿಕೆ ಹಿನ್ನೆಲೆಯಲ್ಲಿ ರಾತ್ರೋರಾತ್ರಿ ಕೆರೆಗೆ ನೀರು ಬಿಟ್ಟಿರುವುದು.

ಹೆಚ್.ಡಿ.ಕೋಟೆ: ಕೆರೆಗೆ ನೀರು ಬಿಟ್ಟಿದ್ದೇವೆ. ಪ್ರತಿಭಟನೆ ನಡೆಸಬೇಡಿ ಎಂದು ರೈತರನ್ನು ಮನವೊಲಿಸಲು ಅಧಿಕಾರಿಗಳು ಮುಂದಾಗಿದ್ದಾರೆ. 'ಮೈಸೂರು ಮಿತ್ರ' ಪತ್ರಿಕೆ ವರದಿ ಹಿನ್ನೆಲೆಯಲ್ಲಿ ಎಚ್ಚೆತ್ತು ಅಧಿಕಾರಿಗಳು ಗ್ರಾಮದಲ್ಲೇ ಬೀಡು ಬಿಟ್ಟಿದ್ದು, ಕೆರೆಗಳಿಗೆ ನೀರು ಹರಿಸಲು ಮುಂದಾಗಿದ್ದಾರೆ. ತಾಲೂಕಿನ ಹಂಪಾಪುರ ಹೋಬಳಿ ವ್ಯಾಪ್ತಿಗೆ ಬರುವ ಒಟ್ಟು 17 ಕೆರೆಗಳಿದ್ದು, ಅದರಲ್ಲಿ 11 ಕೆರೆಗಳಿಗೆ ಮಾತ್ರ ನೀರು ತುಂಬಿಸಿದ್ದು ಉಳಿದ 6 ಕೆರೆಗೆ ನೀರು ತುಂಬಿಸಲು ನಿರ್ಲಕ್ಷ್ಯ ತೋರಿದ್ದಾರೆ ಎಂದು ವರದಿಯಾದ ಹಿನ್ನೆಲೆಯಲ್ಲಿ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಕೆರೆಗಳನ್ನು ತುಂಬಿಸಲು ಮುಂದಾಗಿದ್ದಾರೆ.

ಕೆರೆಯನ್ನು ಸಂಪೂರ್ಣ ತುಂಬಿಸಲು ನಾವು ಮುಂದಾಗಿದ್ದೇವೆ ನೀವು ಈ ಸಂಬಂಧ ಪ್ರತಿಭಟನೆ ಹಮ್ಮಿಕೊಂಡಿರುವುದನ್ನು ಕೈಬಿಡಬೇಕು ಎಂದು ಗ್ರಾಮಸ್ಥರಿಗೆ ಹಾಗೂ ರೈತ ಮುಖಂಡರಲ್ಲಿ ಮನವಿ ಮಾಡಿದ್ದಾರೆ.

ನಾವು ಪ್ರತಿಭಟನೆ ಮಾಡೇ ಮಾಡುತ್ತೇವೆ. ಪ್ರತಿಭಟನಾ ಸ್ಥಳಕ್ಕೆ ನೀವು ಬನ್ನಿ. ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ. ಕೆರೆಗಳಿಗೆ ಸಂಪೂರ್ಣ ನೀರು ತುಂಬಿಸುತ್ತೇವೆ ಎಂದು ಪ್ರತಿಭಟನ ಸ್ಥಳದಲ್ಲಿ ಒಪ್ಪಿಕೊಳ್ಳಬೇಕು ಎಂದು ರೈತರುಗಳು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಅದಕ್ಕೆ ಸಹಾಯಕ ಇಂಜಿನಿಯರ್‌ಗಳು ನಾವು ಆ ರೀತಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಮುಖ್ಯಾಧಿಕಾರಿಗಳು ಬಂದು ಹೇಳಬೇಕು. ಅದು ನಮ್ಮಿಂದ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ರೈತರು ನಿಮ್ಮಿಂದ ಸಾಧ್ಯವಾಗದಿದ್ದರೆ ನಾವು ಪ್ರತಿಭಟನೆಯನ್ನು ಮಾಡೇ ಮಾಡುತ್ತೇವೆ ನಮ್ಮ ಸ್ಥಳಕ್ಕೆ ಮುಖ್ಯಾಧಿಕಾರಿಗಳು ಬರಲಿ ಎಂದು ಇಂಜಿನಿಯರ್‌ಗಳಿಗೆ ತಿಳಿಸಿದ್ದೇವೆ ಎಂದು ರೈತ ಮುಖಂಡರುಗಳು ತಿಳಿಸಿದ್ದಾರೆ.

ಪತ್ನಿಯೊಂದಿಗೆ ಅತಿಯಾದ ಸಲಿಗೆ ಪ್ರಶ್ನಿಸಿದ ಪತಿಯ ಕೊಲೆ

ದಂಪತಿಯೊಂದಿಗೆ ನೆಲೆಸಿದ್ದ ವ್ಯಕ್ತಿಯ ಬಂಧನಕ್ಕೆ ಪೊಲೀಸರ ಶೋಧ



ವಿನೋದ್ ಕುಮಾರ್

ತಿ.ನರಸೀಪುರ, ಡಿ.13– ಪತ್ನಿಯೊಂದಿಗಿನ ಅತಿಯಾದ ಸಲಿಗೆ ಆಕ್ಷೇಪಿಸಿದ ಪತಿಯು ಸಂಬಂಧಿಕನೇ ಮಾರಕಾಸ್ತ್ರಗಳಿಂದ ಕೊಚ್ಚಿ ಭೀಕರವಾಗಿ ಕೊಲೆ ಮಾಡಿರುವ ಘಟನೆ ತಾಲೂಕಿನ ಹಳೇ ತಿರುಮಕೂಡಲಿನ ಅಂಡರ್ ಪಾಸ್ ಸೇತುವೆ ಬಳಿ ನಡೆದಿದೆ.

ಪುರಸಭೆ ವ್ಯಾಪ್ತಿಯ ಹೊಸ ತಿರುಮಕೂಡಲು ನಿವಾಸಿ ವಿನೋದ್ ಅಲಿಯಾಸ್ ವಿನೋದ್ ಕುಮಾರ್ (38) ಕೊಲೆಯಾದ ದುರ್ದೈವಿ. ಗ್ರಾಮದ ಲೇಟ್ ಶಿವರಾಮು ಅವರ ಪುತ್ರ ಧೀರಜ್ ಕೊಲೆ ಮಾಡಿದ ಆರೋಪಿಯಾಗಿದ್ದು, ತಲೆ ಮರೆಸಿಕೊಂಡಿದ್ದಾನೆ. ಈತನ ಪತ್ತೆಗಾಗಿ ಪೊಲೀಸ್ ವಿಶೇಷ ತಂಡ ರಚಿಸಲಾಗಿದೆ.

ಧೀರಜ್, ವಿನೋದ್ ಕುಮಾರ್ ಪತ್ನಿಯೊಂದಿಗೆ ಅತಿಯಾದ ಸಲಿಗೆ ಹೊಂದಿದ್ದು, ಇದನ್ನು ವಿರೋಧಿಸಿದ್ದಕ್ಕಾಗಿ ಆತನನ್ನು ಧೀರಜ್ ಕೊಲೆ ಮಾಡಿದ್ದಾನೆ ಎಂದು ಮೃತನ ಸಹೋದರ ಸುರೇಂದ್ರ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಹತ್ಯೆಯಾದ ವಿನೋದ್ ಕುಮಾರ್ ದೂರದ ಸಂಬಂಧಿಯಾದ ಧೀರಜ್‌ನ ತನ್ನ ತಂದೆ ತಾಯಿ ಮೃತಪಟ್ಟ ಹಿನ್ನೆಲೆಯಲ್ಲಿ ಆತ ವಿನೋದ್ ಮನೆಯಲ್ಲೇ ಉಳಿದುಕೊಂಡಿದ್ದ. ಈ ಹಿನ್ನೆಲೆ ಯಲ್ಲಿ ವಿನೋದ್ ಕುಮಾರ್ ಪತ್ನಿ ಜೊತೆ ಧೀರಜ್ ಸಲುಗೆಯಿಂದ ಇದ್ದನೆನ್ನಲಾಗಿದೆ.

ಕೆಲವು ದಿನಗಳ ಹಿಂದೆ ವಿನೋದ್ ಕುಮಾರ್ ತನ್ನ ಪತ್ನಿಯೊಂದಿಗೆ ಸಲುಗೆಯಿಂದ ಇದ್ದುದ್ದನ್ನು ಪ್ರಶ್ನಿಸಿದ್ದಕ್ಕೆ ಧೀರಜ್ ಕುಡಿದು ಬಂದು ಮನೆಯ ಮುಂದೆ ಗಲಾಟೆ ಮಾಡಿದ್ದ, ನಿನ್ನ ಪತ್ನಿಯನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ಇದನ್ನು ವಿರೋಧಿಸಿದರೆ ಕೊಲೆ ಮಾಡುವ ಬೆದರಿಕೆಯೊಡ್ಡಿ ಹೋಗಿದ್ದನೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ ವಿನೋದ್ ಹಾಗೂ ಆತನ ಪತ್ನಿ ಮೈಸೂರಿನ ಕುಂಬಾರಕೊಪ್ಪಲಿನಲ್ಲಿರುವ ಪತ್ನಿ ತವರು ಮನೆಗೆ ತೆರಳಿದ್ದರೆನ್ನಲಾಗಿದೆ.

ಆಕೆ ತವರು ಮನೆಯಲ್ಲೇ ಉಳಿದರೆ, ವಿನೋದ್ ಸ್ವಲ್ಪ ದಿನ ಬಿಟ್ಟು ಗ್ರಾಮಕ್ಕೆ ಹಿಂದಿರುಗಿದ್ದ. ಆಗ ಮನೆ ಬಳಿ ಬಂದು ಗಲಾಟೆ ಮಾಡಿದ್ದ ಧೀರಜ್‌ಗೆ ಬುದ್ಧಿವಾದ ಹೇಳಿ, ಹೊಡೆದು ಕಳುಹಿಸಲಾಗಿತ್ತು.

ವಿನೋದ್ ಕುಮಾರ್ ಪತ್ನಿ ಜೊತೆ ಮಾತನಾಡಲೂ ಅವಕಾಶ ನೀಡದಿದ್ದರಿಂದ ಧೀರಜ್‌ಗೆ ವಿನೋದ್ ಮೇಲೆ ದ್ವೇಷ ಬೆಳೆಯಲಾರಂಭಿಸಿತ್ತು. ಇದೇ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ 4.30 ಸಮಯದಲ್ಲಿ ವಿನೋದ್ ಕುಮಾರ್ ಶವ ಚೌಡಯ್ಯ ವೃತ್ತದ ಅಂಡರ್ ಪಾಸ್‌ನಲ್ಲಿ ಪತ್ತೆಯಾಗಿದ್ದು, ದ್ವೇಷದ ಹಿನ್ನೆಲೆಯಲ್ಲಿ ಧೀರಜ್ ಕೊಲೆ ಮಾಡಿದ್ದಾನೆಂದು ಮೃತನ ಸಹೋದರ ಪೊಲೀಸರಿಗೆ ದೂರು ನೀಡಿದ್ದಾರೆ.

ಸ್ಥಳಕ್ಕೆ ಜಿಲ್ಲಾ ಎಸ್ಪಿ ವಿಷ್ಣುವರ್ಧನ್, ಎಎಸ್‌ಪಿ ಮಲ್ಲಿಕ್, ವೃತ್ತ ನಿರೀಕ್ಷಕ ಧನಂಜಯ್, ಪಿಎಸ್‌ಐ ಜಗದೀಶ್ ದೂಳ್‌ಶೆಟ್ಟಿ ಭೇಟಿ ನೀಡಿ ಪರಿಶೀಲಿಸಿದರು. ಶ್ವಾನದಳ ಮೃತದೇಹ ಇದ್ದ ಸ್ಥಳದಿಂದ ಪಂಪ್ ಹೌಸ್ ಬಳಿ ತೆರಳಿ ಅಲ್ಲಿಂದ ಮುಂದೆ ಹೋಗದೇ ನಿಂತುಕೊಂಡವು. ಈ ಸಂಬಂಧ ತಿ.ನರಸೀಪುರ ಪಟ್ಟಣ ಠಾಣೆಯಲ್ಲಿ ದಾಖಲಾಗಿದ್ದು, ಕೇಸು ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ನೇರಳೆ ಗ್ರಾಮದ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರಾಗಿ ಪ್ರಕಾಶ್ ಅಯ್ಕೆ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.


ನಂಜನಗೂಡು: ತಾಲೂಕಿನ ನೇರಳೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗಾಗಿ ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಲ್.ಪ್ರಕಾಶ್, ಉಪಾಧ್ಯಕ್ಷರಾಗಿ ನಾಗರಾಜು ಅವಿರೋಧವಾಗಿ ಆಯ್ಕೆಯಾದರು.

12 ಸದಸ್ಯರು ಹಾಗೂ 2 ನಾಮನಿರ್ದೇಶನ ಸದಸ್ಯರು ಸೇರಿ 14 ಮಂದಿ ಸದಸ್ಯ ಬಲದ ಸಹಕಾರ ಸಂಘದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಲ್.ಪ್ರಕಾಶ್, ಉಪಾಧ್ಯಕ್ಷ ಸ್ಥಾನಕ್ಕೆ ನಾಗರಾಜು ಅವರನ್ನು ಹೊರತುಪಡಿಸಿ ಯಾರೂ ನಾಮಪತ್ರ ಸಲ್ಲಿಸದಿದ್ದರಿಂದ ಚುನಾವಣಾಧಿಕಾರಿ ಅಮೀದಾ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಪ್ರಕಾಶ್ ಮಾತನಾಡಿ ಸುತ್ತಮುತ್ತಲಿನ ಗ್ರಾಮದ ರೈತರನ್ನು ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಅನುಸರಿಸುವಂತೆ ಪ್ರೇರೇಪಿಸುವ ಮೂಲಕ ಗುಣಮಟ್ಟದ ಹಾಲು ಉತ್ಪಾದಿಸಲು ಕ್ರಮ ವಹಿಸುವ ಜೊತೆಗೆ ಸಂಘವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತೇನೆ ಎಂದರು.

ಈ ಸಂದರ್ಭದಲ್ಲಿ ಸದಸ್ಯರಾದ ಎಂ.ಮಹದೇವು, ನಾಗರಾಜಪ್ಪ, ಎನ್.ಎಸ್.ಸ್ವಾಮಿ, ಎನ್.ಎಸ್.ಕುಮಾರಸ್ವಾಮಿ, ಸೋಮಸುಂದರರಾಜು, ಕೆ.ಪ್ರಕಾಶ್, ಪುಟ್ಟಬಸಪ್ಪ, ಮಹ ದೇವಪ್ಪ, ಸೋಮೇಗೌಡ, ಮಾದಶೆಟ್ಟಿ, ಸುಬ್ಬನಾಯ್ಕ, ಮಹದೇವಮ್ಮ ಹಾಗೂ ಎಂ.ಎಸ್.ಮಧು ಉಪಸ್ಥಿತರಿದ್ದರು.

ವಸ್ತುಪ್ರದರ್ಶನಕ್ಕೆ ಡಾ.ಬಿ ಮನ್ಸೂರ್ ಆಲಿ ನೇಮಕ



ತಿ.ನರಸೀಪುರ, ಡಿ.13– ಮೈಸೂರು ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಸಾಂಸ್ಕೃತಿಕ ಉಪ ಸಮಿತಿಯ ಉಪಾಧ್ಯಕ್ಷರಾಗಿ ಮಸ್ಜಿದ್ ಎ ನೂರ್ ಮಸೀದಿಯ ಅಧ್ಯಕ್ಷ ಡಾ.ಬಿ ಮನ್ಸೂರ್ ಆಲಿ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

ಕೆ.ಆರ್.ನಗರದಲ್ಲಿ ವಿದ್ಯುತ್ ವ್ಯತ್ಯಯ

ಕೆ.ಆರ್.ನಗರ: ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕೈಗೊಳ್ಳಬೇಕಾಗಿರುವುದರಿಂದ ಡಿ.16ರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕೆ.ಆರ್ ನಗರ ಪಟ್ಟಣ ಹಾಗು ಚಂದಗಾಲು, ಹೆಬ್ಬಾಳು, ಸಿದ್ದಾಪುರ, ಬ್ಯಾಡರಹಳ್ಳಿ, ದೊಡ್ಡೇಕೊಪ್ಪಲು, ಲಾಳಂದೇವನಹಳ್ಳಿ ಗ್ರಾಮ ಪಂಚಾಯಿತಿಗಳಿಗೆ ಒಳಪಡುವ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬೆಟ್ಟದಪುರದಲ್ಲಿ ಅದ್ದೂರಿ ಹನುಮ ಜಯಂತಿ


ಹನುಮ ಭಕ್ತರಿಂದ ಹನುಮನ ಭವ್ಯ ಮೆರವಣಿಗೆ



ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಏಣಿ ಆಂಜನೇಯ ಸ್ವಾಮಿ ದೇವಾಲಯದ ಸಮಿತಿ ವತಿಯಿಂದ ಇಂದು ಅದ್ದೂರಿ ಹನುಮ ಜಯಂತಿಯನ್ನು ಆಚರಿಸಲಾಯಿತು.

ದೇವಾಲಯಕ್ಕೆ ವಿಶೇಷ ದೀಪಾಲಂಕಾರ, ಪುಷ್ಪಾಲಂಕಾರ ಮಾಡಲಾಗಿತ್ತು. ದೇವಾಲಯದಲ್ಲಿ ಅಂಜನೇಯ ಸ್ವಾಮಿಗೆ ವಿಶೇಷ ಅಭಿಷೇಕ ಪೂಜೆ ನೆರವೇರಿದವು. ವಿಶೇಷ ಅಭಿಷೇಕ ಪೂಜೆಯನ್ನು ಪ್ರಧಾನ ಅರ್ಚಕ ಮೋಹನನವರು ನೆರವೇರಿಸಿದರು. ಬೆಟ್ಟದಪುರದ ಸುತ್ತಮುತ್ತಲಿನ ಗ್ರಾಮಸ್ಥರು ಆಗಮಿಸಿ ದೇವರ ದರ್ಶನ ಪಡೆದರು ಗ್ರಾಮವನ್ನು ಕೇಸರಿ ಬಾವುಟಗಳಿಂದ ಸಂಪೂರ್ಣವಾಗಿ ಅಲಂಕರಿಸಲಾಗಿತ್ತು. ಹನುಮನ ಮೂರ್ತಿಯನ್ನು ಟ್ರ್ಯಾಕ್ಟರ್ ಮೇಲೆ ಕೂರಿಸಿ ಅಲಂಕರಿಸಿ ಡಿಜೆ ಹಾಗೂ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲಾಗಿತ್ತು. ಸಾವಿರಾರು ಮಂದಿ ಡಿಜೆ ಸೌಂಡಿಗೆ ನೃತ್ಯ ಮಾಡಿದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಕಳೆದ 9 ವರ್ಷಗಳಿಂದ ಬೆಟ್ಟದಪುರದ ಚನ್ನೇಗೌಡನ ಕೊಪ್ಪಲು ಗ್ರಾಮದ ಹನುಮ ಜಯಂತಿ ಸಮಿತಿಯವರು ಈ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದು, ಇಂದು ಸಹ ಅವರು ಅದ್ದೂರಿಯಾಗಿ ಈ ಕಾರ್ಯಕ್ರಮವನ್ನು ನೆರವೇರಿಸಿದರು ಭಕ್ತಾದಿಗಳಿಗೆ ವಿವಿಧ ರೀತಿಯ ಸಿಹಿ ಊಟವನ್ನು ಬಡಿಸಲಾಯಿತು. ಬೆಟ್ಟದಪುರ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದರು.

ಸೇವಾ ಕಾರ್ಯಕ್ರಮಗಳ ಮೂಲಕ ಹುಟ್ಟುಹಬ್ಬ ಆಚರಣೆ



ನಂಜನಗೂಡು ಶ್ರೀಕಂಠೇಶ್ವರ ದೇವಾಲಯದ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡರಾದ ಆರ್.ಇಂದನ್ ಬಾಬು ಅವರ ಜನ್ಮದಿನವನ್ನು ಸಾಮಾಜಿಕ ಚಟುವಟಿಕೆಗಳ ಮೂಲಕ ಅವರ ಅಭಿಮಾನಿಗಳು ವಿನೂತನವಾಗಿ ಆಚರಿಸಲಾಯಿತು. ಮೊದಲಿಗೆ ಶ್ರೀಕಂಠೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಕೇಕ್ ಕತ್ತರಿಸಿ, ಗಿಡ ನೆಡುವ ಮೂಲಕ ಅಚರಿಸಲಾಯಿತು. ಎನ್.ಟಿ.ಗಿರೀಶ್, ರವಿಪ್ರಕಾಶ್, ರವಿಕುಮಾರ್ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಪೊಲೀಸರ ಬಗ್ಗೆ ಅವಹೇಳನಕಾರಿ ಪೋಸ್ಟ್ ಹಾಕಿದ್ದವನ ಬಂಧನ



ಬೈಲಕುಪ್ಪೆ: ಸಾಮಾಜಿಕ ಜಾಲತಾಣದಲ್ಲಿ ಬೈಲಕುಪ್ಪೆ ಪೊಲೀಸರ ಬಗ್ಗೆ ಅವಹೇಳನಕಾರಿ ಪೋಸ್ಟ್ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವನನ್ನು ಬಂಧಿಸಲಾಗಿದೆ.

ಕಳೆದ ಎರಡು ಮೂರು ದಿನಗಳ ಹಿಂದೆ, ತನ್ನ ಫೇಸ್ ಬುಕ್ ಖಾತೆಯಲ್ಲಿ ಬೈಲಕುಪ್ಪೆ ಪೊಲೀಸರನ್ನು ಅವಾಚ್ಯ ಪದಗಳಿಂದ ನಿಂದಿಸಿ, ಅವರ ಬಗ್ಗೆ ಸಾರ್ವಜನಿಕರಲ್ಲಿ ಕೆಟ್ಟ ಅಭಿಪ್ರಾಯ ಬರುವಂತೆ ಮಾತನಾಡಿದ್ದಲ್ಲದೆ, ಪೊಲೀಸರಿಗೆ ವಾರ್ನ್ ಮಾಡುವ ಶೈಲಿಯಲ್ಲಿ ಶಬ್ದವನ್ನು ಬಳಸಿದ ಆರೋಪಿಯನ್ನು ಬೈಲುಕುಪ್ಪೆ ಪೊಲೀಸರು ಎರಡೇ ದಿನದಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪಿರಿಯಾಪಟ್ಟಣ ತಾಲೂಕು ಬೂತನಹಳ್ಳಿ ಗ್ರಾಮದ ನಿವಾಸಿ ದಿಲೀಪ್ ಗೌಡ (30) ಬಂಧಿತ ಆರೋಪಿ. ಇದೇ ಆರೋಪಿಯ ವಿರುದ್ಧ ಪಿರಿಯಾಪಟ್ಟಣ ಮತ್ತು ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ 5ರಿಂದ 6 ಪ್ರಕರಣಗಳು ದಾಖಲಾಗಿವೆ.

ಆರೋಪಿ ವಿರುದ್ಧ ಬೈಲಕುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಸಂದರ್ಭದಲ್ಲಿ ಬೈಲಕುಪ್ಪೆ ಪಿಎಸ್‌ಐ ರವಿಕುಮಾರ್, ಮುದ್ದುರಾಜು, ರಂಗಸ್ವಾಮಿ, ರವಿ ಇದ್ದರು.

ತಿ.ನರಸೀಪುರದ ಬಳಿ ಲಾರಿ ಡಿಕ್ಕಿ: ಬೈಕ್ ಸವಾರ ಸಾವು



ತಿ.ನರಸೀಪುರ, ಡಿ.13– ಲಾರಿ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಸೋಸಲೆ ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದೆ. ತಾಲೂಕಿನ ವೀರಪ್ಪ ಒಡೆಯರ ಹುಂಡಿ ಗ್ರಾಮದ ಶ್ರೀ ಕಂಠಸ್ವಾಮಿ ಎಂಬುವರ ಪುತ್ರ ಅಡುಗೆ ಕೆಲಸ ಮಾಡಿ ಕೊಂಡಿದ್ದ ಎಸ್.ಸಿದ್ದಲಿಂಗಸ್ವಾಮಿ(26) ಎಂಬುವವರೇ ರಸ್ತೆ ಅಪಘಾತದಲ್ಲಿ ಮೃತಪಟ್ಟ ಯುವಕ.

ಶನಿವಾರ ಮಧ್ಯಾಹ್ನ ವೀರಪ್ಪ ಒಡೆಯರ ಹುಂಡಿ ಗ್ರಾಮದಿಂದ ಸಿಡಿ 100 ಬೈಕಿನಲ್ಲಿ (CKL/9901) ಟಿ.ನರಸೀಪುರ ಕಡೆಗೆ ಹೊರಟಿದ್ದ ಸಿದ್ದಲಿಂಗಸ್ವಾಮಿಗೆ ಟಿ.ನರಸೀಪುರ ಕಡೆಯಿಂದ ಅತಿ ವೇಗ ಹಾಗೂ ಅಜಾಗರೂಕತೆಯಿಂದ ಲಾರಿ ಚಾಲನೆ ಮಾಡಿಕೊಂಡು ಬಂದ ಚಾಲಕ ಸೋಸಲೆ ಗ್ರಾಮದ ಮಿಲ್ಕ್ ಡೈರಿ ಬಳಿ ಬೈಕಿಗೆ ಮುಖಾಮುಖಿ ಡಿಕ್ಕಿ ಹೊಡೆಸಿದ ಪರಿಣಾಮ ತಲೆಗೆ ತೀವ್ರ ಪೆಟ್ಟು ಬಿದ್ದು ಸಿದ್ದಲಿಂಗಸ್ವಾಮಿ ಸ್ಥಳದಲ್ಲೇ ಮೃತಪಟ್ಟರು.

ಈ ಸಂಬಂಧ ಹಿಂಬದಿ ಸವಾರ ಕುಮಾರಸ್ವಾಮಿ ಬನ್ನೂರು ಪೊಲೀಸರಿಗೆ ದೂರು ನೀಡಿದ್ದು, ಕೇಸು ದಾಖಲಿಸಿಕೊಂಡಿರುವ ಪಿಎಸ್‌ಐ ಎಂ.ಆರ್.ಸುದರ್ಶನ್ ಮುಂದಿನ ಕ್ರಮ ಕೈಗೊಂಡಿದ್ದಾರೆ. ಪೊಲೀಸರು ಲಾರಿಯನ್ನು ವಶಪಡಿಸಿಕೊಂಡಿದ್ದಾರೆ.

ಬಾಲ್ ಬ್ಯಾಡ್ಮಿಂಟನ್‌ನಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು



ವಿನಯ್



ಐಶ್ವರ್ಯ

ಹೆಚ್.ಡಿ.ಕೋಟೆ: ತುಂಬಸೋಗೆ ಎಂಎಂಕೆ ಕಾಲೇಜಿನ ವಿದ್ಯಾರ್ಥಿಗಳು ಬಾಲ್ ಬ್ಯಾಡ್ಮಿಂಟನ್‌ನಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ತಾಲೂಕಿನ ತುಂಬಸೋಗೆ ಗ್ರಾಮದ ಬಳಿ ಇರುವ ಎಂಎಂಕೆ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಐಶ್ವರ್ಯ ಹಾಗೂ ವಿನಯ್ ಇಬ್ಬರು ಬಾಲ್ ಬ್ಯಾಡ್ಮಿಂಟನ್‌ನಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ ಯಾಗಿದ್ದು ತಾಲೂಕಿಗೆ ಹಾಗೂ ನಮ್ಮ ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಪ್ರಕಾಶ್ ತಿಳಿಸಿದ್ದಾರೆ.

ಇತ್ತೀಚೆಗೆ ಹಾಸನ ಜಿಲ್ಲೆಯಲ್ಲಿ ನಡೆದ ಪದವಿಪೂರ್ವ ಕಾಲೇಜುಗಳ ರಾಜ್ಯಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಮೈಸೂರು ಜಿಲ್ಲಾ ತಂಡವನ್ನು ಪ್ರತಿನಿಧಿಸಿ ಬಾಲಕಿಯರ ಹಾಗೂ ಬಾಲಕರ ವಿಭಾಗದಲ್ಲಿ ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಮೈಸೂರು ಜಿಲ್ಲಾ ತಂಡದ ಪರವಾಗಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಗಳಾದ ಐಶ್ವರ್ಯ, ನಿಸರ್ಗ, ರಮ್ಯಾ ಎನ್ ಎಸ್, ಸಿಂಚನ, ವರ್ಷಿತ ಹಾಗೂ ಬಾಲಕರ ತಂಡದಿಂದ ಆಯ್ಕೆಯಾಗಿದ್ದ ನಮ್ಮ ಕಾಲೇಜಿನ ಎ.ಸಿ. ವಿನಯ್ ಇವರು ಅತ್ಯುತ್ತಮ ಪ್ರದರ್ಶನ ನೀಡಿ ಮೈಸೂರು ಜಿಲ್ಲಾ ತಂಡಕ್ಕೆ ಪ್ರಶಸ್ತಿಯನ್ನು ತಂದಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳಾದ ಐಶ್ವರ್ಯ ಹಾಗೂ ವಿನಯ್ ಇಬ್ಬರು ಕೂಡ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ವಿಜೇತ ಕ್ರೀಡಾಪಟುಗಳನ್ನು ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೆ.ಆರ್.ಸತೀಶ್, ಉಪನ್ಯಾಸಕ ವೃಂದದವರು ವಿಜೇತ ವಿದ್ಯಾರ್ಥಿಗಳಿಗೆ ಅಭಿನಂದಿಸಿದರು.

ವಿಜ್ಞಾನ ವಸ್ತುಪ್ರದರ್ಶನದಿಂದ ಪ್ರತಿಭೆ, ಸೃಜನಶೀಲತೆ ಅನಾವರಣ

ಮಂಡ್ಯದ ಪಿಇಎಸ್ ಕಾಲೇಜಿನ ಅಧ್ಯಕ್ಷ ವಿಜಯ್ ಆನಂದ್ ಅಭಿಪ್ರಾಯ



ವಿಜ್ಞಾನ ವಸ್ತುಪ್ರದರ್ಶನವನ್ನು ಮಂಡ್ಯ ಪಿಇಎಸ್ ಕಾಲೇಜಿನ ಅಧ್ಯಕ್ಷ ಕೆ.ಎಸ್ ವಿಜಯ್ ಆನಂದ್ ಉದ್ಘಾಟಿಸಿದರು

ತಿ.ನರಸೀಪುರ, ಡಿ.13– ವಿಜ್ಞಾನ ವಸ್ತು ಪ್ರದರ್ಶನದಿಂದ ಮಕ್ಕಳಲ್ಲಿ ಹುದುಗಿರುವ ಪ್ರತಿಭೆ, ಸೃಜನಾತ್ಮಕತೆ, ವೈಜ್ಞಾನಿಕ ಮನೋಭಾವ, ಕೌಶಲ್ಯ ಹೊರಹೊಮ್ಮುತ್ತದೆ ಎಂದು ಮಂಡ್ಯದ ಪಿಇಎಸ್ ಕಾಲೇಜಿನ ಅಧ್ಯಕ್ಷ ಕೆ.ಎಸ್.ವಿಜಯ್ ಆನಂದ್ ತಿಳಿಸಿದರು.

ತಾಲೂಕಿನ ಬನ್ನೂರು ಹೋಬಳಿ ಕಂಚನಹಳ್ಳಿ ಗ್ರಾಮದ ಶ್ರೀ ಪ್ರಜ್ಞಾ ಗುರುಕುಲ ಐಸಿಎಸ್‌ಇ ಶಾಲೆಯಲ್ಲಿ ಶನಿವಾರ ಆಯೋಜಿಸಲಾಗಿದ್ದ ಇಂಟರ್ ಸ್ಕೂಲ್ ವಿಜ್ಞಾನ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಗಾದೆ ಮಾತಿನಂತೆ ವಿಜ್ಞಾನ ವಸ್ತುಪ್ರದರ್ಶನದಿಂದ ಮಕ್ಕಳಲ್ಲಿನ ನೈಜತೆ, ಕ್ರಿಯಾತ್ಮಕ ಚಟುವಟಿಕೆ ಹಾಗೂ ಮಕ್ಕಳ ಸುಪ್ತ ಪ್ರತಿಭೆ ಅರಳುತ್ತದೆ. ಇಂದಿನ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕಿದೆ ಎಂದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲ ವಿಷಯಗಳ ಜ್ಞಾನ ಬಹಳ ಅವಶ್ಯವಿದೆ. ವಿದ್ಯಾರ್ಥಿಗಳು ಯಾವುದೇ ವಿಷಯವನ್ನು ನಿರ್ಲಕ್ಷ್ಯ ಮಾಡದೆ ಪ್ರತಿಯೊಂದು ವಿಷಯಗಳ ಅಧ್ಯಯನ ಮಾಡಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸು ಸಾಧಿಸಬೇಕು ಅಂದರೆ ಜ್ಞಾನ ಸಂಪಾದಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶ್ರೀ ಬುಂಡೇಗೌಡ ಮೆಮೋರಿಯಲ್ ಟ್ರಸ್ಟ್ ಅಧ್ಯಕ್ಷ ಡಾ.ಕೆ.ಬಿ.ಸಿದ್ದೇಗೌಡ ಮಾತನಾಡಿ, ವಿಜ್ಞಾನ ವಿಷಯಗಳ ಮಾದರಿ ಪ್ರದರ್ಶನ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದರಿಂದ ವಿಷಯಗಳ ಬಗ್ಗೆ ಹೆಚ್ಚಿನ ಜ್ಞಾನ ಪಡೆದುಕೊಳ್ಳಲು ಸಾಧ್ಯ ಆದ್ದರಿಂದ ಎಲ್ಲ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಮುಂದೆ ಬರಬೇಕು ಎಂದು ಹೇಳಿದರು.

ಪ್ರಜ್ಞಾ ಗುರುಕುಲ ಶಾಲೆಯ ಪ್ರಾಂಶುಪಾಲ ಡಾ.ಶಂಕರೇಗೌಡ ಮಾತನಾಡಿ ಮಕ್ಕಳ ಜ್ಞಾನ ವೃದ್ಧಿಗೆ ವಿಜ್ಞಾನ ಪ್ರದರ್ಶನ ಗಳು ಪೂರಕವಾಗಿವೆ. ಅವರಲ್ಲಿ ತಂತ್ರಜ್ಞಾನ, ಪರಿಸರ ಕಾಳಜಿ ಹಾಗೂ ಚರಿತ್ರೆಯ ಬಗ್ಗೆ ಆಸಕ್ತಿ ಬೆಳೆಯುತ್ತದೆ. ಅವರಲ್ಲಿರುವ ಸೃಜನಶೀಲತೆಗೆ ಉತ್ತೇಜನ ಸಿಗುತ್ತದೆ. ವಿಜ್ಞಾನ ಎಂದರೆ ಒಂದು ಸಂಜೀವಿನಿಯಂತೆ ಬದುಕಿನಲ್ಲಿ ನಮಗೆ ಜ್ಞಾನ ಹಾಗೂ ಸರಿಯಾದ ಪ್ರಶ್ನೆ ಬರಬೇಕೆಂದರೆ ವಿಜ್ಞಾನದ ಅವಶ್ಯಕತೆ ಇದೆ ಎಂದರು.

ಗಮನ ಸೆಳೆದ ವಸ್ತುಪ್ರದರ್ಶನ...: ಶ್ರೀ ಪ್ರಜ್ಞಾ ಗುರುಕುಲ ಶಾಲಾವರಣದಲ್ಲಿ ಆಯೋಜಿಸಿದ್ದ ವಿಜ್ಞಾನ ವಸ್ತು ಪ್ರದರ್ಶನ ಗಮನ ಸೆಳೆಯಿತು. ಈ ವಸ್ತು ಪ್ರದರ್ಶನದಲ್ಲಿ ಎಲ್‌ಕೆಜಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳು ಪಾಲ್ಗೊಂಡು ವಿಜ್ಞಾನದ ಹಲವು ಮಾದರಿಗಳನ್ನು ಪ್ರದರ್ಶಿಸಿ ಮೆಚ್ಚುಗೆಗೆ ಪಾತ್ರರಾದರು.

ಶಾಲೆ ಶಿಕ್ಷಕರು ಮತ್ತು ಪೋಷಕರ ಮಾರ್ಗದರ್ಶನದಲ್ಲಿ ಮಕ್ಕಳು ವಿಜ್ಞಾನದ ಮಾದರಿಗಳನ್ನು ತಯಾರು ಮಾಡಿದ್ದರು. ವಸ್ತು ಪ್ರದರ್ಶನ ನೋಡಲು ಆಗಮಿಸಿದ ಸಾರ್ವಜನಿಕರಿಗೆ ಮಕ್ಕಳು ಉತ್ತಮವಾಗಿ ವಿವರಣೆ ನೀಡಿದರು. ಈ ವೇಳೆ ಶ್ರೀ ಬುಂಡೇಗೌಡ ಮೆಮೋರಿಯಲ್ ಟ್ರಸ್ಟ್ ಕಾರ್ಯದರ್ಶಿ ಹೆಚ್.ತೇಜ ಸಿದ್ದೇಗೌಡ, ಮುಖ್ಯೋಪಾಧ್ಯಾಯರಾದ ಗಗನ, ಅಧ್ಯಾಪಕಿ ಸುನೀತಾ, ಯುವರಾಜ ಕಾಲೇಜಿನ ಮಿಥುನ್ ಹೊಸಕೋಟೆ, ಪ್ರಿಯಾಂಕ, ಶಿಕ್ಷಕ ಸತ್ಯರಾಜ್, ದೈಹಿಕ ಶಿಕ್ಷಕ ಚಂದ್ರು, ಗೀತಾ, ನಾಗಶ್ರೀ, ಸುನೀಲ್, ಕಾವ್ಯ, ತನುಶ್ರೀ ಹಾಜರಿದ್ದರು.

ಮೈಸೂರು ಮಿತ್ರ

ಭಾನುವಾರ 14 ಡಿಸೆಂಬರ್ 2025

ವೀರಶೈವ ಲಿಂಗಾಯತ ಮುಖಂಡರ ಸಭೆಯಲ್ಲಿ ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷರು, ಜಿಲ್ಲಾಧ್ಯಕ್ಷರ ಬಗ್ಗೆ ಚರ್ಚೆಯಾಗಿಲ್ಲ

● ಅತೃಪ್ತರಿಂದ ದಿಕ್ಕು ತಪ್ಪಿಸುವ ಹುನ್ನಾರ, ಆ ಹೇಳಿಕೆಗೂ ನಮಗೂ ಸಂಬಂಧವಿಲ್ಲ ● ಬಿಜೆಪಿಯ ವೀರಶೈವ ಲಿಂಗಾಯತ ಮುಖಂಡರ ಸ್ಪಷ್ಟನೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಬಿ.ಎನ್.ಸದಾನಂದ ಮಾತನಾಡಿದರು.

ಮೈಸೂರು, ಡಿ.13(ಜಿಎ)–ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ (ಡಿ.12) ನಡೆದ ವೀರಶೈವ ಲಿಂಗಾಯತ ಮುಖಂಡರ ಸಭೆಯಲ್ಲಿ ಬಿಜೆಪಿ ಪಕ್ಷ, ಪಕ್ಷದ ರಾಜ್ಯಾಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ. ಯಾರೋ ಅತೃಪ್ತರು ತಪ್ಪು ಪ್ರತಿಕಾ ಪ್ರಕಟಣೆ ನೀಡಿ ದಿಕ್ಕು ತಪ್ಪಿಸಿದ್ದಾರೆ. ಈ ಹೇಳಿಕೆಗೂ ನಮಗೂ ಸಂಬಂಧವಿಲ್ಲ ಎಂದು ಬಿಜೆಪಿಯ ವೀರಶೈವ ಲಿಂಗಾಯಿತ ಮುಖಂಡರು ಸ್ಪಷ್ಟ ಪಡಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಬಿ.ಎನ್.ಸದಾನಂದ ಮಾತನಾಡಿ, 'ಬಿಜೆಪಿಯಲ್ಲಿ ವೀರಶೈವ ಲಿಂಗಾಯತರ ಕಡೆಗಣನೆ ಆರೋಪ: ತಟಸ್ಥರಾಗುಳಿಯುವ ನಿರ್ಧಾರ' ಎಂಬ ಶೀರ್ಷಿಕೆ ಅಡಿ ಇಂದಿನ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿದೆ. ಇದು ಸಭೆಯಲ್ಲಿ ಭಾಗ ವಹಿಸಿದ್ದ ಎಲ್ಲಾ ಬಿಜೆಪಿಗರಿಗೂ ಬೇಸರ ವಾಗಿದೆ. ನಾವೆಲ್ಲರೂ ಸಭೆಯಲ್ಲಿ ಭಾಗವಹಿಸಿರುವುದು ನಿಜ. ಆದರೆ. ಅಲ್ಲಿ ಪಕ್ಷದ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ. ಬದಲಾಗಿ ಕೇವಲ ಸಮುದಾಯ ಚಿಂತನ ಮಂಥನ ಸಭೆ ನಡೆಸಲಾಯಿತು ಎಂದರು.

ಸಭೆಯಲ್ಲಿ ಪ್ರಮುಖವಾಗಿ ಸಮುದಾಯದ ಯುವಕರಿಗೆ ಅರಿವು ಮೂಡಿಸುವುದರ ಜೊತೆಗೆ ಪಕ್ಷಾತೀತವಾಗಿ ಹೇಗೆ ಸಮುದಾಯವರು ಬೆನ್ನೆಲುಬಾಗಿ ನಿಲ್ಲಬೇಕು ಎಂಬುದರ ಬಗ್ಗೆ ಚರ್ಚೆ ಮಾಡಲಾಯಿತು. ರಾಜಕೀಯ ಚರ್ಚೆಯಾಗಿಲ್ಲ. ಆದರೆ, ಪತ್ರಿಕೆಗಳಲ್ಲಿ ಬಂದಿರುವ ವರದಿಗೂ ವ್ಯತ್ಯಾಸ ಬಂದಿದೆ. ಬೇಕೆಂದು ಅತೃಪ್ತ ಆತ್ಮಗಳು ಈ ರೀತಿ ಹೇಳಿಕೆ ನೀಡಿವೆ ಎಂದು ಕಿಡಿಕಾರಿದರು.

ನಂತರ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿಯಾಗಿ ನಂಜನಗೂಡಿನ ಎನ್.ವಿ. ವಿನಯ್ ಕುಮಾರ್ ಮಾತನಾಡಿ, ಸಭೆಯಲ್ಲಿ ಯಾವುದೇ ರಾಜಕೀಯ ಚರ್ಚೆಯೇ ಮಾಡಿಲ್ಲ ಆದರೂ, ತಪ್ಪು ಸಂದೇಶ ನೀಡಲಾಗಿದೆ. ವಾಸ್ತವಾಂಶ ಅರಿಯದೇ ಈ ರೀತಿ ಮಾಡಲಾಗಿದೆ. ಸಭೆಯಲ್ಲಿ ಬಿಜೆಪಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅತೃಪ್ತರು ಈ ರೀತಿ ಪತ್ರಿಕಾ ಹೇಳಿಕೆಗೆ ವಿರೋಧವಿದೆ ನಮಗೂ ಈ ವರದಿಗೂ ಸಂಬಂಧವಿಲ್ಲ ಎಂದರು.

ನಾವೆಲ್ಲರೂ ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಅವರೊಟ್ಟಿಗೆ ಪಕ್ಷವನ್ನು ಬಲಗೊಳಿಸಲು ಹೆಜ್ಜೆ ಹಾಕುತ್ತಿದ್ದೇವೆ. ಈ ಹಿಂದಿನಿಂದಲೂ ಬಿಜೆಪಿ ಪಕ್ಷ ಯಾರಿಗೂ ಮೋಸ ಮಾಡಿಲ್ಲ. ವೀರಶೈವ ಲಿಂಗಾಯತರಿಗೆ ಗ್ರಾಮಾಂತರ ಭಾಗದಲ್ಲಿ ಹೆಚ್ಚುವರಿಯಾಗಿ ಹುದ್ದೆಗಳನ್ನು ನೀಡಿದ್ದಾರೆ. ಹಾಗೇ ನಗರಾಧ್ಯಕ್ಷರು ಸಹ ಸಮನಾಗಿ ಹುದ್ದೆಗಳನ್ನು ನೀಡಿದ್ದಾರೆ. ಯಾರಿಗೂ ದ್ರೋಹ ಬಗೆದಿಲ್ಲ. ಎಲ್ಲಾ ಸಂದರ್ಭದಲ್ಲಿ ಸಮುದಾಯಕ್ಕೆ ಸ್ಥಾನ ಮಾನ ನೀಡಿದೆ. ಯಾರಿಗೆ ಪಕ್ಷದ ಬಗ್ಗೆ ಅಸಮಧಾನವಿದೆ ಅವರು ನೇರವಾಗಿ ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡಿ ನಿಮ್ಮ ಬೇಸರವನ್ನು ತೋಡಿಕೊಳ್ಳಿ. ಆದರೆ, ಈ ರೀತಿ ಸಮಾಜಕ್ಕೆ ತಪ್ಪು ಸಂದೇಶ ನೀಡಬೇಡಿ ಎಂದು ತಿಳಿಸಿದರು.

ವೀರಶೈವ ಲಿಂಗಾಯತ ಮುಖಂಡರು ಸಭೆಯಲ್ಲಿ ಭಾಗವಹಿಸುವಂತೆ ಬಹುತೇಕರಿಗೆ ಶರತ್ ಪುಟ್ಟಬುದ್ಧಿ, ಗೆಜ್ಜಗಳ್ಳಿ ಮಹೇಶ್ ಅವರೇ ಆಹ್ವಾನ ನೀಡಿದ್ದಾರೆ. ಸಮುದಾಯದ ಪರವಾಗಿ ಆಹ್ವಾನಿಸಿದ ಸಭೆಗೆ ಹೋಗುವುದು ಮುಖ್ಯವಾಗಿರುವುದರಿಂದ ಈ ನಿಟ್ಟಿನಲ್ಲಿ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದೇವು ಅಷ್ಟೇ. ಅಲ್ಲಿ ಪಕ್ಷದ ಬಗ್ಗೆ ಚರ್ಚೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸಿದ್ದಪ್ಪ, ಸ್ವಪ್ನ ನಾಗೇಶ್, ಕೆಂಪಣ್ಣ, ರೇಣುಕಾ ರಾಜು, ರುದ್ರ ಮೂರ್ತಿ, ದಯಾನಂದ ಪಾಟೀಲ್, ದಾಕ್ಷಾಯಣಿ, ಅರ್ಜುನ್ ಪಾರ್ಥ, ಪವಿತ್ರ, ಮಾಲಿನಿ ಪಾಲಾಕ್ಷ, ಸಂತೋಷ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾಸೇನಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಡೆವಿಲ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕಿಸ್ ಕಿಸ್ಕೋ ಪ್ಯಾರ್ ಕರೂ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಖಂಡ–2 (ತೆ)	4 ಪ್ರದರ್ಶನಗಳು
ಸಂಗಂ	
ಡೆವಿಲ್ (ಕ)	3 ಪ್ರದರ್ಶನಗಳು
ಲಿಡೋ	
ಅಖಂಡ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

ರಾಹುಲ್ ಗಾಂಧಿಗೆ ಪ್ರಧಾನಿಯಾಗುವ ಹುಚ್ಚು! ಹಾಗಾಗಿ ಮತಗಳ್ಳತನ ಆರೋಪ ಮಾಡ್ತಿದ್ದಾರೆ!



ಮೈಸೂರು, ಡಿ.13(ಎಂಟಿವೈ)– ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಿಗೆ ಪ್ರಧಾನಿಯಾಗುವ ಹುಚ್ಚು ಹೆಚ್ಚಾಗಿರುವುದರಿಂದಲೇ ಮತಗಳ್ಳತನ ಆರೋಪ ಮಾಡುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿ ಮಾಡಿರುವ ಮತಗಳ್ಳತನ ಆರೋಪ ಆಧಾರ ರಹಿತ. ಹುಚ್ಚು ಬಿಡೋ ತನಕ ಮದುವೆ ಆಗಲ್ಲ, ಮದುವೆ ಆಗೋ ತನಕ ಹುಚ್ಚು ಬಿಡಲ್ಲ ಎಂಬ ಗಾದೆಗೆ ಅನುಗುಣವಾಗಿ ರಾಹುಲ್ ಗಾಂಧಿ ಪ್ರಧಾನಿ ಆಗೋವರೆಗೂ ಇಂತಹ ಹುಚ್ಚು ಬಿಡಲ್ಲ. ರಾಹುಲ್‌ಗೆ ಪ್ರಧಾನಿಯಾಗುವ ಹುಚ್ಚು ಹಿಡಿದಿದೆ. ರಾಹುಲ್ ಪ್ರಧಾನಿ ಆಗೋದಿಲ್ಲ. ಹಾಗಾಗಿ ಅವರ ಹುಚ್ಚು ಬಿಡೋದಿಲ್ಲ ಎಂದು ಟೀಕಿಸಿದರು.

ಹಿರಿಯ ಮುತ್ಸದ್ದಿ ಶಿವರಾಜ ಪಾಟೀಲ್ ನಿಧನಕ್ಕೆ ಸುತ್ತೂರು ಶ್ರೀಗಳ ಸಂತಾಪ



ಬೆಂಗಳೂರಿನಲ್ಲಿ 2006ರಲ್ಲಿ ನಡೆದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಯಂತಿ ಮಹೋತ್ಸವದಲ್ಲಿ ಶಿವರಾಜ್ ಪಾಟೀಲ್‌ರವರು ಪಾಲ್ಗೊಂಡಿದ್ದಾಗ, ಶ್ರೀ ಸುತ್ತೂರು ಶ್ರೀಗಳು ಹಾಗೂ ಎಸ್.ಎಂ. ಕೃಷ್ಣ ಅವರೊಂದಿಗಿನ ಸಾಂದರ್ಭಿಕ ಚಿತ್ರ

ಮೈಸೂರು, ಡಿ. 13– ಕೇಂದ್ರದ ಮಾಜಿ ಸಚಿವರು ಹಾಗೂ ಕಾಂಗ್ರೆಸ್ಸಿನ ಹಿರಿಯ ರಾಜಕಾರಣಿಯೂ ಆಗಿದ್ದ ಶಿವರಾಜ ಪಾಟೀಲರ ನಿಧನಕ್ಕೆ ಸುತ್ತೂರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ಶ್ರೀ ಶಿವರಾಜ ಪಾಟೀಲರು ಮಹಾರಾಷ್ಟ್ರದ ಲಾತೂರ್ ಕ್ಷೇತ್ರದಿಂದ ಸತತವಾಗಿ ಏಳು ಬಾರಿ ವಿಜಯಿಗಳಾಗಿದ್ದ ಜನಪ್ರಿಯ ಧುರೀಣರು. ಲೋಕಸಭೆ ಮತ್ತು ರಾಜ್ಯಸಭೆ ಎರಡು ಕಡೆಗಳಲ್ಲೂ ಛಾಪು ಮೂಡಿಸಿದ್ದ ಪ್ರತಿಭಾನ್ವಿತರು. ಎರಡು ಬಾರಿ ಮಹಾರಾಷ್ಟ್ರ ವಿಧಾನ ಸಭಾ ಸದಸ್ಯರೂ ಆಗಿದ್ದರು. ಮಧ್ಯಮ ವರ್ಗದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ದೀರ್ಘಕಾಲದ ರಾಜಕೀಯ ಜೀವನದಲ್ಲಿ ನಿಷ್ಠಾವಂತ ಕಾಂಗ್ರೆಸ್ಸಿಗರಾಗಿದ್ದರು. ಹಲವಾರು ಪ್ರತಿಷ್ಠಿತ ಹುದ್ದೆಗಳನ್ನು ಅಲಂಕರಿಸಿದವರು. 2008ರಲ್ಲಿ ಗೃಹಸಚಿವರಾಗಿದ್ದಾಗ ಕೆಲವು ಭದ್ರತಾ ಲೋಪಗಳಾದಾಗ ನೈತಿಕ ಹೊಣೆಗಾರಿಕೆಯಿಂದ ರಾಜೀನಾಮೆ ನೀಡಿದ ಸಂವೇದನಾಶೀಲರು.

ರಕ್ಷಣಾ ಇಲಾಖೆಯ ರಾಜ್ಯ ಸಚಿವರಾಗಿ, ವಾಣಿಜ್ಯ, ನಾಗರಿಕ ವಿಮಾನಯಾನ, ಬಾಹ್ಯಾಕಾಶ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. ಕೇಂದ್ರ ಸರ್ಕಾರದ ಹಲವಾರು ಉನ್ನತ ಸ್ಥಾಯಿ ಸಮಿತಿಗಳಲ್ಲಿ ಸದಸ್ಯರಾಗಿದ್ದರು. ಲೋಕಸಭೆಯ ಸಭಾಪತಿಗಳೂ ಆಗಿದ್ದರು. ಆಳವಾದ ಪರಿಜ್ಞಾನ, ಪರಿಣಿತಿ, ಮುನ್ನೋಟಗಳನ್ನು ಹೊಂದಿದ್ದರು; ಸದಾ ಅಧ್ಯಯನಶೀಲರಾಗಿದ್ದರು. ವಿನಯ, ವಿವೇಕಗಳ ಸಾಕಾರ ಮೂರ್ತಿ, ಅಜಾತಶತ್ರು ಅತ್ಯುನ್ನತ ಸಂಸದರೆಂಬ ಪುರಸ್ಕಾರಕ್ಕೂ ಪಾತ್ರರಾಗಿದ್ದರು. ರಾಜಕೀಯ ಸೇವಾವಧಿಯ ಕೊನೆಯಲ್ಲಿ ಪಂಜಾಬಿನ ರಾಜ್ಯಪಾಲರೂ ಆಗಿದ್ದರು.

ಶಿವರಾಜ ಪಾಟೀಲರು ಬೆಂಗಳೂರಿನಲ್ಲಿ ನಡೆದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಯಂತಿ ಹಾಗೂ ಸುತ್ತೂರಿನ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಮತಮಾನ್ಯಗಳು ಹಾಗೂ ಗುರುಹಿರಿಯರ ಬಗೆಗೆ ಅಪಾರ ಗೌರವ ಹೊಂದಿದ್ದರು. ತುಂಬು ಜೀವನ ನಡೆಸಿದವರು. ರಾಜಕೀಯ ಸಜ್ಜನಿಕೆಯ ಅಪರೂಪದ ಉದಾಹರಣೆಯಂತಿದ್ದರು. ಅವರ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬ ವರ್ಗದವರು ಮತ್ತು ಬಂಧು ಬಾಂಧವರಿಗೆ ಅಗಲಿಕೆಯ ದುಃಖವನ್ನು ಭರಿಸಲು ಭಗವಂತನು ಶಕ್ತಿಯನ್ನು ನೀಡಲೆಂದು ಶ್ರೀಗಳು ಹಾರೈಸಿದ್ದಾರೆ.

ಹಿರಿಯ ಸಾಧಕಿ ಪ್ರಶಸ್ತಿಗೆ ಆಹ್ವಾನ

ಮೈಸೂರು, ಡಿ. 13– 'ಲೇಖಿಕಾ ಸಾಹಿತ್ಯ ವೇದಿಕೆ'ಯು ಸಾವಿತ್ರಮ್ಮ ಅಪ್ಪಯ್ಯ ಹಿರಿಯ ಸಾಧಕಿ ಪ್ರಶಸ್ತಿ –2025 ನೀಡಲಿದೆ. ಸಾಮಾಜಿಕ– ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ 70 ವರ್ಷ ದಾಟಿದ ಸಾಧಕಿಯರ ವಿವರಗಳನ್ನು ಮೊ.9916378955 ವಾಟ್ಸ್ ಆಪ್ ಮೂಲಕ ಕಳಿಸಬಹುದು.

ಪ್ರಶಸ್ತಿಯು ಸ್ಮರಣಿಕೆ, ಶಾಲು, ಫಲತಾಂಬೂಲ, ಅಭಿನಂದನಾಪತ್ರ ಹಾಗೂ ಪ್ರಯಾಣಭತ್ಯೆ ಒಳಗೊಂಡಿರುತ್ತದೆ ಎಂದು 'ಲೇಖಿಕಾ ಸಾಹಿತ್ಯ ವೇದಿಕೆ'ಯ ಸಂಚಾಲಕಿ ಶೈಲಜಾ ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಧರ ಸ್ವಾಮಿಗಳ ಜಯಂತಿ ಆಚರಣೆ



ಆಧ್ಯಾತ್ಮಿಕ ಚಿಂತಕರಾದ ಶ್ರೀಮತಿ ಸುಮತಿ ಹಾಗೂ ಸುಬ್ರಹ್ಮಣ್ಯ ದಂಪತಿಗೆ 'ಶ್ರೀಧರ ಸ್ವಾಮಿ ಸದ್ಭಾವನಾ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು, ಡಿ.13– ಮೈಸೂರಿನ ಕುವೆಂಪು ನಗರದ ಸ್ವಾನಂದ ಯೋಗ ಶಾಲೆಯಲ್ಲಿ ವೆಲ್‌ನೆಸ್ ಸೆಂಟರ್ ಹಾಗೂ ಶ್ರೀ ವಾಸುದೇವ ಮಹಾರಾಜ್ ಫೌಂಡೇಶನ್ ಸಹಯೋಗದೊಂದಿಗೆ ಶ್ರೀಧರ ಸ್ವಾಮಿಗಳ ಜಯಂತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಮಾಜ ಸೇವಕ ಡಾ.ರಘುರಾಮ್ ವಾಜಪೇಯಿ, ಆಧ್ಯಾತ್ಮಿಕ ಸಾಧನೆಯಲ್ಲಿ ಉತ್ತುಂಗಕೇರಿದ ಶ್ರೀಧರ ಸ್ವಾಮಿಗಳು ಸಂತ ಶ್ರೇಷ್ಠರು. 1960ರ ದಶಕದಲ್ಲಿ ಮೈಸೂರಿಗೂ ಭೇಟಿ ನೀಡಿ ಭಕ್ತರನ್ನು ಅನುಗ್ರಹಿಸಿದ್ದರು ಎಂದು ತಿಳಿಸಿದರು.

ಶ್ರೀಧರ ಸ್ವಾಮಿಗಳ ಆಶ್ರಮದ ಟ್ರಸ್ಟಿಯೂ ಆದ ಕೈಗಾರಿಕೋದ್ಯಮಿ ಎಸ್.ಎನ್. ಪಾರ್ಶ್ವನಾಥ್ ಮಾತನಾಡಿ, ನಮ್ಮ ಕುಟುಂಬ ನಾಲ್ಕು ತಲೆಮಾರುಗಳಿಂದಲೂ ಶ್ರೀಧರ ಸ್ವಾಮಿಗಳ ಅನನ್ಯ ಭಕ್ತರಾಗಿ ಸೇವೆ ಮಾಡಿಕೊಂಡು ಬಂದಿದ್ದು, ಮುಂದೆಯೂ ಸ್ವಾಮಿಗಳ ತತ್ವಾದರ್ಶಗಳನ್ನು ಅನುಸರಿಸಿಕೊಂಡು ಹೋಗುವುದಾಗಿ ಹೇಳಿ, ಶ್ರೀಧರ ಸ್ವಾಮಿಗಳ ಜೀವನ ದೃಷ್ಟಾಂತಗಳನ್ನು ವಿವರಿಸಿದರು.

ಇದೇ ವೇಳೆ ಆಧ್ಯಾತ್ಮಿಕ ಚಿಂತಕರಾದ ಶ್ರೀಮತಿ ಸುಮತಿ ಹಾಗೂ ಸುಬ್ರಹ್ಮಣ್ಯ ದಂಪತಿಗೆ 'ಶ್ರೀಧರ ಸ್ವಾಮಿ ಸದ್ಭಾವನ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಒಂಟಿಕೊಪ್ಪಲು ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಖಜಾಂಚಿ ಶ್ರೀಮತಿ ರಾಧಿಕಾ ರವಿ, ನಾಗೇಂದ್ರ ಬಾಬು ಮತ್ತಿತರರು ಉಪಸ್ಥಿತರಿದ್ದರು.

ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳಿಂದ ಮೆಸ್ ವೆಚ್ಚ ವಸೂಲು ಮಾಡಬಾರದು

ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ ಸೂಚನೆ

ಮೈಸೂರು, ಡಿ.13(ಬಿಎಲ್‌ಯು)– ವಿಶ್ವವಿದ್ಯಾನಿಲಯಗಳ ಹಾಸ್ಟೆಲ್‌ಗಳಲ್ಲಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಂದ ಮೆಸ್ ವೆಚ್ಚವನ್ನು ವಸೂಲು ಮಾಡದಂತೆ ವಿಶ್ವವಿದ್ಯಾನಿಲಯಗಳಿಗೆ ಸೂಚನೆ ನೀಡಲಾಗುವುದು ಎಂದು ಮೈಸೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ ಭರವಸೆ ನೀಡಿದ್ದಾರೆ

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಮಾಜ ಕಲ್ಯಾಣ ಇಲಾಖೆ ನಿಗದಿಪಡಿಸಿರುವ ದರಗಳಲ್ಲಿ ಊಟದ ವೆಚ್ಚವನ್ನು ಈ ಮೊದಲು ನೇರವಾಗಿ ಸಂಬಂಧಪಟ್ಟ ವಿದ್ಯಾರ್ಥಿನಿಲಯಗಳ ಖಾತೆಗೆ ನೇರವಾಗಿ ಬಿಡುಗಡೆ ಮಾಡಲಾಗುತ್ತಿತ್ತು ಎಂದು ಹೇಳಿದ್ದಾರೆ.

ಆದರೆ ಏಪ್ರಿಲ್ 1, 2005 ರಂದು ಸದರಿ ಲೆಕ್ಕ ಶೀರ್ಷಿಕೆ ಸ್ಥಗಿತವಾಗಿತ್ತು. ಈ ಹಿನ್ನೆಲೆ ಸಮಾಜ ಕಲ್ಯಾಣ ಇಲಾಖೆ ಭೋಜನಾ ವೆಚ್ಚವನ್ನು ನೀಡಲಿದೆ. ಈ ಹಣವನ್ನು ಬಿಡುಗಡೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಅಲ್ಲಿಯವರೆಗೆ ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳಿಂದ ಮೆಸ್ ವೆಚ್ಚವನ್ನು ವಸೂಲಿ ಮಾಡದಂತೆ ಸೂಚನೆ ನೀಡಲಾಗಿದೆ ಎಂದು ರಂಗೇಗೌಡರು ಹೇಳಿದ್ದಾರೆ.

ಸ್ಯಾಂಡಲ್ ರೋಸ್ ಕಾನ್ವೆಂಟ್‌ನಲ್ಲಿ ಜಾನಪದ ವೈಭವ; ವಾರ್ಷಿಕೋತ್ಸವ



ಸ್ಯಾಂಡಲ್ ರೋಸ್ ಕಾನ್ವೆಂಟ್‌ನ ಜಾನಪದ ವೈಭವ–ವಾರ್ಷಿಕೋತ್ಸವವನ್ನು ಪಶುಪಾಲನಾ ಇಲಾಖೆ ಉಪನಿರ್ದೇಶಕ ಡಾ.ನಾಗರಾಜು ಉದ್ಘಾಟಿಸಿದರು. ಸ್ಯಾಂಡಲ್ ರೋಸ್ ಕಾನ್ವೆಂಟ್‌ನ ವಿದ್ಯಾರ್ಥಿಗಳು ಜಾನಪದ ವೈಭವ ನಡೆಸಿಕೊಟ್ಟರು.

ಮೈಸೂರು, ಡಿ. 13– ಈಗ ಪ್ರಪಂಚದ ಜೊತೆ ಸ್ಪರ್ಧಿಸಬೇಕಿರುವುದರಿಂದ ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಓದಬೇಕು ಎಂದು ಪಶುಪಾಲನಾ ಇಲಾಖೆಯ ಉಪ ನಿರ್ದೇಶಕ ಡಾ.ನಾಗರಾಜು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಡಿ. ಸಾಲುಂಡಿಯ ಸ್ಯಾಂಡಲ್ ರೋಸ್ ಕಾನ್ವೆಂಟ್ ವತಿಯಿಂದ ಉದ್ಬೂರು ಗೇಟ್ ಬಳಿಯ ಡಾ.ವಿಷ್ಣುವರ್ಧನ್ ಸ್ಮಾರಕ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಜಾನಪದ ವೈಭವ– ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಮಕ್ಕಳ ಬುದ್ಧಿಮತ್ತೆ ಚೆನ್ನಾಗಿದೆ. ಹದಿಹರೆಯದಲ್ಲಿ ದಾರಿ ತಪ್ಪಬಾರದು. ಭವಿಷ್ಯಕ್ಕೆ ಶಿಕ್ಷಣವೇ ಬುನಾದಿ ಎಂಬುದನ್ನು ಮರೆಯಬಾರದು ಎಂದರು.

ಸಾಕಷ್ಟು ಮಂದಿ ಸಾಧಕರನ್ನು ನೋಡಿದಾಗ ಅವರೆಲ್ಲಾ ಗ್ರಾಮೀಣ ಪ್ರದೇಶದಿಂದಲೇ ಬಂದವರಾಗಿದ್ದಾರೆ. ಶೋಭಾ ಅವರು ಗ್ರಾಮೀಣ ಪ್ರದೇಶದಲ್ಲಿ ಈ ಶಾಲೆಯನ್ನು ಆರಂಭಿಸಿ, ಅತ್ಯುತ್ತಮ ಫಲಿತಾಂಶದೊಂದಿಗೆ ಮುನ್ನಡೆಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರ ವಾಣಿಜ್ಯೀಕರಣಗೊಂಡಿರುವಾಗ ಈ ಸಂಸ್ಥೆಯು ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.

ಮುಖ್ಯ ಅತಿಥಿಯಾಗಿದ್ದ ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ಹೆಚ್. ಪ್ರಕಾಶ್ ಮಾತನಾಡಿ, ಪ್ರಾಮಾಣಿಕತೆ ಮತ್ತು ಪರಿಶ್ರಮದಿಂದ ಓದಬೇಕು. ಜೊತೆಗೆ ಸಂಸ್ಕಾರವನ್ನು ರೂಢಿಸಿಕೊಳ್ಳಬೇಕು ಎಂದರು.

ಕರ್ನಾಟಕ ಮಹಿಳಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ, ಮಹಾರಾಣಿ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ. ಕಾವೇರಿ ಪ್ರಕಾಶ್ ಸನ್ಮಾನ ಸ್ವೀಕರಿಸಿ ಮಾತನಾಡಿ, ತಾಳ್ಮೆ ಮತ್ತು ಏಕಾಗ್ರತೆಯಿಂದ ಓದಬೇಕು ಎಂದರು.

ಮತ್ತೋರ್ವ ಸನ್ಮಾನಿತರಾದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಈಗ ಚೆನ್ನಾಗಿ ಓದಿದರೆ ಎಲ್ಲಿ ಬೇಕಾದರೂ ಉದ್ಯೋಗ ಸಿಗುತ್ತದೆ. ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಬಸವೇಶ್ವರ ಎಜುಕೇಷನಲ್ ಟ್ರಸ್ಟ್ ಕಾರ್ಯದರ್ಶಿ ಶೋಭಾ ಶಿವರಾಜ್ ಮಾತನಾಡಿ, ಗ್ರಾಮೀಣ ಪ್ರದೇಶದ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಸಂಸ್ಥೆ ಕೆಲಸ ಮಾಡುತ್ತಿದೆ. ಇದಕ್ಕೆ ಪೋಷಕರ ಸಹಕಾರವೂ ಬೇಕು ಎಂದರು.

ಗಾಯಕಿ ಗೀತಾ ಶ್ರೀಧರ್ ಅವರು ಹಾಡುವ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು.

ಸಂಸ್ಥೆಯ ಅಧ್ಯಕ್ಷ ಬಿ. ಬಸವಯ್ಯ, ಖಜಾಂಚಿ ಎಂ. ಶಿವರಾಜ್, ದಿವ್ಯಜ್ಯೋತಿ ಶಾಲೆಯ ಮುಖ್ಯಸ್ಥೆ ಜಯಶೀಲಾ, ನಿವೃತ್ತ ಪೊಲೀಸ್ ಅಧಿಕಾರಿ ಕರೀಗೌಡ, ಧನಗಳ್ಳಿ ಗ್ರಾಪಂ ಉಪಾಧ್ಯಕ್ಷೆ ಸವಿತಾ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಡಿ.17ರಿಂದ ಐದು ದಿನ ನಿರಂತರ ರಂಗ ಉತ್ಸವ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಿರಂತರ ರಂಗ ಉತ್ಸವದ ಪೋಸ್ಟರ್ ಅನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು.

ಮೈಸೂರು, ಡಿ.13(ಜಿಎ)–ನಿರಂತರ ಫೌಂಡೇಶನ್ ವತಿಯಿಂದ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನ ಹಾಗೂ ನವದೆಹಲಿಯ ಸಂಸ್ಕೃತಿ ಸಚಿವಾಲಯ ಸಹಯೋಗದಲ್ಲಿ ಡಿ.17ರಿಂದ 21ರವರೆಗೆ ಕಲಾಮಂದಿರ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ನಿರಂತರ ರಂಗ ಉತ್ಸವ ಆಯೋಜಿಸಲಾಗಿದೆ ಎಂದು ನಿರಂತರದ ಅಧ್ಯಕ್ಷ ಎಂ.ಎಂ. ಸುಗುಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.17ರಂದು ಸಂಜೆ 5:30ಕ್ಕೆ ಹಾಸನ ಮಾನವ ತಂಡದಿಂದ ಜಡೆ ಕೋಲಾಟ ನಡೆಯಲಿದೆ. ನಂತರ ಸಂಜೆ 6.15ಕ್ಕೆ ನಿರಂತರ ರಂಗ ಉತ್ಸವವನ್ನು ಸಂಸ್ಕೃತಿ ಚಿಂತಕ ಎಸ್.ಜಿ.ಸಿದ್ದರಾಮಯ್ಯ, ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಉದ್ಘಾಟಿಸಲಿದ್ದಾರೆ. 7 ಗಂಟೆಗೆ ಬೆಂಗಳೂರಿನ ಕಲಾಮಾಧ್ಯಮ ತಂಡದಿಂದ ರಾಜೇಶ್ವರಿ ತೇಜಸ್ವಿ ಅವರ ಆತ್ಮಕಥೆ ಆಧಾರಿತ 'ನನ್ನ ತೇಜಸ್ವಿ' ನಾಟಕ ಪ್ರದರ್ಶನವಿದೆ ಎಂದರು.

ಡಿ.18ರಂದು ಸಂಜೆ 5:30ಕ್ಕೆ ಬಿ.ವಿ.ಕಾರಂತರ ರಂಗ ಗೀತೆಗಳನ್ನು ದೇವಾನಂದ್ ವರಪ್ರಸಾದ್ ಮತ್ತು ನಿರಂತರ ತಂಡ ಪ್ರಸ್ತುತ ಪಡಿಸಲಿದೆ. ನಂತರ ಸಂಜೆ 6:15ಕ್ಕೆ ಸಭಾ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಜಿ.ಪಿ.ಬಸವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ ಭಾಗವಹಿಸಲಿದ್ದಾರೆ. ಸಂಜೆ 7ಗಂಟೆಗೆ ನಾದಸಂಜೆ–ರವಿಶಂಕರ್ ಮಿಶ್ರಾ ಅವರ ಕೊಳಲು ಹಾಗೂ ಜುನೈನ್ ಖಾನ್ ಅವರ ಸಿತಾರ್ ಜುಗಲ್ ಬಂದಿ ನಡೆಯಲಿದೆ. ಡಿ.19 ರಂದು ಸಂಜೆ 5:30ಕ್ಕೆ ಶ್ರೀನಿವಾಸ್ ಭಟ್ ಚೀನಿ ಅವರ ರಂಗ ಗೀತೆಗಳನ್ನು ದೇವಾನಂದ್ ವರಪ್ರಸಾದ್ ಮತ್ತು ನಿರಂತರ ತಂಡದವರು ಹಾಡುವರು.

ಸಂಜೆ 6:15ಕ್ಕೆ ಸಭಾ ಕಾರ್ಯಕ್ರಮದಲ್ಲಿ ನಾಟಕಕಾರ ರಾಜಪ್ಪ ದಳವಾಯಿ, ನಿರಂತರದ ಶ್ರೀನಿವಾಸ ಪಾಲಹಳ್ಳಿ ಭಾಗವಹಿಸುವರು. ಸಂಜೆ 7ಗಂಟೆಗೆ ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣದಿಂದ 'ಪ್ರತಿ ಗಂಧರ್ವ'' ನಾಟಕ ಪ್ರದರ್ಶನ ಇದೆ ಎಂದು ತಿಳಿಸಿದರು.

ಡಿ.20 ರಂದು ಸಂಜೆ 5.30ಕ್ಕೆ ಜನಪದ ಮತ್ತು ತತ್ವಪದ ಗಾಯನವನ್ನು ದೇವಾನಂದ್ ವರಪ್ರಸಾದ್ ಮತ್ತು 'ನಿರಂತರ' ಗೆಳೆಯರು ನಡೆಸಿಕೊಡುವರು. 6:15ಕ್ಕೆ ಸಭಾ ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜಿನ ಪ್ರಾಧ್ಯಾಪಕಿ ಡಾ.ಡಿ.ವಿಜಯಲಕ್ಷ್ಮಿ, ಕನ್ನಡ ಮತ್ತು ಸಂಸ್ಕೃ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಭಾಗವಹಿಸುವರು. ನಂತರ 'ನಿರಂತರ' ರಂಗತಂಡವು ಗೊರೂರು ನಾಟಕ ಪ್ರದರ್ಶಿಸಲಿದೆ.

ಡಿ.21 ರಂದು ಸಂಜೆ 5:30ಕ್ಕೆ ಕಡೂರಿನ ನವೀನ್ ಕುಮಾರ್ ಮತ್ತು ತಂಡದವರು ವೀರಗಾಸೆ ಪ್ರದರ್ಶಿಸುವರು. ಸಂಜೆ 6:15ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಹಿರಿಯ ರಂಗಕರ್ಮಿ ಎ.ಜಿ.ಚಿದಂಬರರಾವ್ ಜಂಬೆ, ಸಂಸ್ಕೃತಿ ಚಿಂತಕ ದೇವನೂರ ಬಸವರಾಜು ಮತ್ತಿತರರು ಭಾಗವಹಿಸುವರು. ನಂತರ ಶ್ರೀರಂಗಪಟ್ಟಣ ಶೆಟ್ಟಿಹಳ್ಳಿಯ ನಿರ್ದಿಗಂತ ತಂಡವು 'ಕೊಡಲ್ಲ ಅಂದ್ರೆ ಕೊಡಲ್ಲ' ನಾಟಕ ಪ್ರದರ್ಶಿಸಲಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ನಿರಂತರ ರಂಗ ಉತ್ಸವದ ಪೋಸ್ಟರ್ ಅನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಬಿಡುಗಡೆ ಮಾಡಿದರು. ಈ ವೇಳೆ ಶ್ರೀನಿವಾಸ ಪಾಲಹಳ್ಳಿ, ಕೆಂಪರಾಜು, ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಮಾಗಿ ಸಂಭ್ರಮ

ಅವರೇಕಾಯಿ, ತೊಗರಿಕಾಯಿ ಸೇರಿದಂತೆ ವಿವಿಧ ಕಾಳು–ಕಾಯಿಪಲ್ಯ ಮಾರಾಟ



ಮೈಸೂರಿನ ನಂಜರಾಜ ಕಲ್ಯಾಣ ಮಂಟಪದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ಮಾಗಿ ಸಂಭ್ರಮ ಮೇಳದಲ್ಲಿ ಅವರೆಕಾಯಿ, ಗೆಡ್ಡೆ–ಗೆಣಸು ಮಾರಾಟ ಮಾಡುತ್ತಿರುವುದು

ಮೈಸೂರು, ಡಿ.13(ಎಂಟಿವೈ)– ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಆರಂಭವಾದ ಎರಡು ದಿನಗಳ ಮಾಗಿ ಸಂಭ್ರಮದಲ್ಲಿ ಅವರೇಕಾಯಿ, ತೊಗರಿಕಾಯಿ ಸೇರಿದಂತೆ ವಿವಿಧ ಕಾಳುಗಳ ಮಾರಾಟ ಜೋರಾಗಿದೆ.

ಸಹಜ ಸಮೃದ್ಧ ಸಂಸ್ಥೆ ಆಯೋಜಿಸಿರುವ ಈ ಮೇಳದಲ್ಲಿ ವಿವಿಧೆಡೆಯಿಂದ ಆಗಮಿಸಿರುವ ರೈತರು ಹಾಗೂ ವಿವಿಧ ಸಂಸ್ಥೆಗಳು ಅವರೆಕಾಳು, ತೊಗರಿಕಾಳು ಸೇರಿದಂತೆ ಚಳಿಗಾಲದಲ್ಲಿ ಬಳಸುವ ಕಾಳು, ತರಕಾರಿ, ಸೊಪ್ಪು ಸೇರಿದಂತೆ ವಿವಿಧ ಬಗೆಯ ಕಾಳು, ವಿವಿಧ ಬಗೆಯ ಅಕ್ಕಿ, ಸಿರಿಧಾನ್ಯ ಮಾರಾಟಕ್ಕಿಟ್ಟಿದ್ದಾರೆ. ಮೇಳದಲ್ಲಿ 25ಕ್ಕೂ ಹೆಚ್ಚು ಮಳಿಗೆಗಳಿದ್ದು, ಗ್ರಾಹಕರನ್ನು ಆಕರ್ಷಿಸುತ್ತಿವೆ.

ಪ್ರಮುಖವಾಗಿ ಅವರೆಕಾಯಿಗೆ ಪ್ರಾಧಾನ್ಯತೆ ನೀಡಿ ಆಯೋಜಿಸಿರುವ ಮೇಳದಲ್ಲಿ ಅವರೆಕಾಯಿ, ಅವರೆಕಾಳು, ಚಿತ್ರವರೆಕಾಳು ಮಾರಾಟದೊಂದಿಗೆ ಅವರೆಕಾಳಿನಲ್ಲಿ ಮಾಡಿರುವ ಕರಿದ ಉತ್ಪನ್ನಗಳು, ಕರಿದಕಾಳು, ಉಪ್ಪಿನ ಕಾಯಿ, ಗೆಡ್ಡೆ–ಗೆಣಸು ಸೇರಿದಂತೆ ಇನ್ನಿತರ ವಸ್ತುಗಳನ್ನು ಖರೀದಿಸಲು ಗ್ರಾಹಕರು ಮುಗಿಬಿದ್ದಿದ್ದಾರೆ.

ಇಂದು ಬೆಳಗ್ಗೆ ನಡೆದ ಮಾಗಿ ಸಂಭ್ರಮ ಅವರೆಕಾಳು ಮೇಳಕ್ಕೆ ಜೆಎಸ್‌ಎಸ್ ಆಯುರ್ವೇದ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ.ಶಿವಪ್ರಸಾದ್ ಚಾಲನೆ ನೀಡಿ ಮಾತನಾಡಿ, ಚಳಿಗಾಲದಲ್ಲಿ ಪ್ರೋಟೀನ್ ಅವಶ್ಯಕತೆಯಿದೆ. ಆ ಕಾರಣದಿಂದ ಪ್ರೋಟೀನ್‌ಯುಕ್ತ ಅವರೆಕಾಯಿ ಸೇರಿದಂತೆ ಇನ್ನಿತರ ಕಾಳುಗಳನ್ನು ಸೇವಿಸಬೇಕಾಗಿದೆ. ನೈಸರ್ಗಿಕವಾಗಿ ಚಳಿಗಾಲದಲ್ಲಿ ಬೆಳೆಯುವ ಕಾಳುಗಳನ್ನು ಸೇವಿಸುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ಸೀಜನ್‌ನಲ್ಲಿ ಬರುವ ಎಣ್ಣೆಕಾಳುಗಳನ್ನು ಬಳಸಬೇಕು. ಸೀಜನ್ ಇಲ್ಲದೇ ಇರುವಾಗ ಹೈಬ್ರೀಡ್ ಬಿತ್ತನೆ ಬೀಜ ಬಳಸಿ ಬೆಳೆದ ಪದಾರ್ಥಗಳು ದೊರಕುತ್ತವೆಯಾದರೂ, ಸೀಜನ್‌ನಲ್ಲಿ ಬೆಳೆಯುವ ಪದಾರ್ಥಗಳಷ್ಟು ಆರೋಗ್ಯಕ್ಕೆ ಪೂರಕವಾಗಿರುವುದಿಲ್ಲ ಎಂದರು.

ಮೇಳದಲ್ಲಿ ವಿವಿಧ ಬಗೆಯ ಹಣ್ಣು, ತರಕಾರಿಯ ಗಿಡ, ಹೂವಿನ ಗಿಡಗಳ ಬೀಜ, ಸೋರೆಕಾಯಿಯಿಂದ ತಯಾರಿಸಿದ ಕ್ರಿಸ್ಮಸ್ ಕಲಾಕೃತಿಗಳನ್ನು ಮಾರಾಟಕ್ಕಿಡಲಾಗಿದೆ. ಮಾಗಿ ಸಂಭ್ರಮದ ಮೇಳ ಭಾನುವಾರ ರಾತ್ರಿ 8.30ರವರೆಗೂ ವೀಕ್ಷಿಸಬಹುದಾಗಿದೆ.

ಶತಾಯುಷಿ ಶಾಂತಿ ಕಾರ್ಯಕ್ರಮ

ಶ್ರೀಮತಿ ಗಿರಿಜಾ ಹೆಗ್ಡೆ – 100



ನಮ್ಮ ಪೂಜ್ಯ ತಾಯಿಯವರಾದ ಶ್ರೀಮತಿ ಮೊಳಹಳ್ಳಿ ಕ್ಯೊಕಾಡಿ ದೊಡ್ಮನೆ ಗಿರಿಜಾ ಹೆಗ್ಡೆ (ದಿ। ನೈಲಾಡಿ ಕುಶಲ ಹೆಗ್ಡೆಯವರ ಧರ್ಮಪತ್ನಿ)

ಕುಟುಂಬಸ್ಥರ ಪರವಾಗಿ : ಎಂ. ಭಾಸ್ಕರ ಹೆಗ್ಡೆ, ಎಂ. ಶ್ರೀಧರ ಹೆಗ್ಡೆ

ಶ್ರೀಮತಿ ಗಿರಿಜಾ ಹೆಗ್ಡೆ

ಮೊ: 9448270893, 9342182526

FOR SALE

20x30 Old Houses @ Kuvempunagar, RK Nagar

30x40 Duplex House @ Dattagalli

40x120 Site@ 80 Feet Road in Dattagalli

33x40 South West Corner Site @ Kabini Layout, Srirampura.

40x60@ JP Ngr, Shardha Lyt

35x60 Commercial, 20x30/40x60/50x80 Sites @ Srirampura

20x30 Properties @ VijayaNagar

PRAKRUTHI PROPERTIES

95386 90359, 90359 90359

HOUSE FOR SALE IN GATED- COMMUNITY

As Per Your Requirement Architect Designed Near St, Joseph School, Mysore

20x40 39.6 Lakhs

30x50 75.5 Lakhs

7259348777

ಕಟ್ಟಡ ಬಾಡಿಗೆಗೆ ಇದೆ

* 3 ಮಹಡಿಗಳಿಗೆ ಲಿಫ್ಟ್ ಸೌಲಭ್ಯವಿದೆ
* 15 ರೂಮ್‌ಗಳಿಗೂ ಅಟ್ಯಾಚ್ಡ್ ಬಾತ್‌ರೂಮ್
* ನೆಲ ಮಹಡಿ ಹೋಟೆಲ್/ ರೆಸ್ಟೋರೆಂಟ್‌ಗೆ ಸೂಕ್ತವಾಗಿದೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

9448047319, 9620202992

ಗೋಪಾಲಗೌಡ ಆಸ್ಪತ್ರೆ ಕ್ಯಾಂಟೀನ್

1) ಊಟ ಸರ್ವ್ ಮಾಡಲು 25 ವರ್ಷದೊಳಗಿನ ಹುಡುಗಿಯರು ಬೇಕಾಗಿದ್ದಾರೆ. ತಿಂಡಿ, ಊಟ ವ್ಯವಸ್ಥೆಯೊಂದಿಗೆ 10 ಸಾವಿರ ರೂ ಸಂಬಳವಿರುತ್ತದೆ. 2) ಸಸ್ಯಹಾರಿ ಅಡುಗೆ ಮಾಡಲು ಭಟ್ಟರು ಬೇಕಾಗಿದ್ದಾರೆ. ತಿಂಡಿ ಊಟ, ವಸತಿ ಸೌಲಭ್ಯವಿರುತ್ತದೆ. 22 ಸಾವಿರ ರೂ. ಸಂಬಳ

9663150577

HOUSE FOR RENT

(Only for Brahmins)

Brokers Excuse

2 BHK, North facing, first floor, independent house, near Marimallappa High School, Sitavilasa Road, Mysuru.

Mob: 8762926337

ನಿವೃತ್ತರಿಗೆ ಸುವರ್ಣಾವಕಾಶ

ನಿವೃತ್ತರು, ವಿದ್ಯಾವಂತರು, ಗೃಹಿಣಿಯರು, ಬಿಸಿನೆಸ್ ವಲಯದವರಿಗೆ ಆಹ್ವಾನ 15–12–2025, ಸೋಮವಾರ, ಬೆಳಿಗ್ಗೆ 11 ಗಂಟೆಗೆ. ಸ್ಥಳ: ಮೌರ್ಯ ರೆಸಿಡೆನ್ಸಿ ಹೋಟೆಲ್, ಶ್ರೀ ಹರ್ಷ ರಸ್ತೆ, ಮೈಸೂರು, ಗೋವರ್ಧನ ಹೋಟೆಲ್ ಪಕ್ಕ. ತಮಗೆ ಸ್ಯಾಲರಿ, ಪಿಎಫ್, ಇಎಸ್‌ಐ, ಇನ್ಸೆಂಟೀವ್ ಮತ್ತು ಇತರೆ ಸೌಲಭ್ಯವಿರುತ್ತದೆ. ಸೆಮಿನಾರ್ ಮುಗಿದ ನಂತರ ಊಟದ ವ್ಯವಸ್ಥೆ ಇದೆ. ಸಂಪರ್ಕಿಸಿ: ರವೀಂದ್ರ

Mob: 9845244373

NOT GETTING YOUR STAR OF MYSORE & ಮೈಸೂರು ಮಿತ್ರ

Call: 98452-96447 / 99003-82840

ಕಾರಂಜಿ ಮತ್ತು ಸಿದ್ದಾರ್ಥನಗರ ತೆರಿಗೆದಾರರ ಸಂಘ (ರಿ.)

ಶ್ರೀ ಸಿದ್ಧಿವಿನಾಯಕ ದೇವಸ್ಥಾನ, ಪಿ.8, ವಿನಾಯಮಾರ್ಗ, ಸಿದ್ದರ್ಥನಗರ, ಮೈಸೂರು – 570011

2025-2030ನೇ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ

ಗೌರವಾನ್ವಿತ ಸದಸ್ಯ ಬಂಧುಗಳೇ,

ದಿನಾಂಕ : 14–12–2025 ಭಾನುವಾರದಂದು ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ 5 ವರ್ಷಗಳ ಅವಧಿಗಾಗಿ ನಡೆಯುವ ನಿರ್ದೇಶಕರುಗಳ ಚುನಾವಣೆಗೆ ಮಾಜಿ ನಿರ್ದೇಶಕರುಗಳ ಮಂಡಳಿ ಒಳಗೊಂಡಂತೆ ಈ ಮೇಲ್ಕಂಡ ನಾವುಗಳು ಸ್ಪರ್ಧಿಸಿರುತ್ತೇವೆ ಇನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಕಾರ್ಯ ಮಾಡುವ ಗುರಿಯಿಂದ. ದಯವಿಟ್ಟು ನಮ್ಮ ಈ ಕೆಳಕಂಡ 12 ಜನರ ಗುಂಪಿನ ಸದಸ್ಯರುಗಳಿಗೆ ಅವರ ನಂಬರ್, ಹೆಸರು, ಚಿಹ್ನೆಯ ಮುಂದೆ ⊗ ಈ ರೀತಿ ಮುದ್ರೆ ಒತ್ತುವುದರ ಮೂಲಕ ನಮ್ಮನ್ನು ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮಾಡಲು ಅವಕಾಶ ಮಾಡಿ ಕೊಡಬೇಕಾಗಿ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ.

ಕ್ರ.ಸಂ.	ಅಭ್ಯರ್ಥಿ ಭಾವಚಿತ್ರ	ಅಭ್ಯರ್ಥಿ ಹೆಸರು	ಚಿಹ್ನೆ	ಮುದ್ರೆ
1		**ಆರ್. ಅಮರ್‌ನಾಥ್ (ಬಾಬು)** ಮಾಜಿ ಅಧ್ಯಕ್ಷರು, ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ | ಮೊ : 9449019196	ಸೇಬು	⊗
4		**ಎಂ. ಗೌತಮ್** ಸಿವಿಲ್ ಕಂಟ್ರಾಕ್ಟರ್, ಸಂಸ್ಥಾಪಕ ಅಧ್ಯಕ್ಷರು ಶ್ರೀ ಸಿದ್ಧಿವಿನಾಯಕ ದೇವಸ್ಥಾನ ದಿ|| ಅಪ್ಪಾಜಪ್ಪರವರ ಮೊಮ್ಮಗ | ಮೊ : 9900898555	ಗಾಳಿಪಟ	⊗
5		**ಜಯಕುಮಾರ್** ಮಾಜಿ ಅಧ್ಯಕ್ಷರು, ದಿ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಹಾಗೂ ಮಾಜಿ ಸದಸ್ಯರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, | ಮೊ : 9886016271	ಗುಲಾಬಿ ಹೂ	⊗
7		**ಜೀವನ್ .ವಿ** ಮಾಲೀಕರು, ರಾಘವೇಂದ್ರ ಕಾಫಿ ವರ್ಕ್ಸ್ | ಮೊ : 8217404721	ಗೋಪುರ	⊗
9		**ಎನ್. ನಂಜುಂಡೇಗೌಡ** ಪ್ರಥಮ ದರ್ಜೆ ವಿದ್ಯುತ್‌ಗುತ್ತಿಗೆದಾರರು | ಮೊ : 9886514933	ಕ್ರಿಕೇಟ್ ಬ್ಯಾಟ್	⊗
12		**ಎನ್. ಮಣಿಕಂಠಸ್ವಾಮಿ** ಮಾಜಿ ಕಾರ್ಯದರ್ಶಿ, ಶ್ರೀ ಸಿದ್ಧಿವಿನಾಯಕ ದೇವಸ್ಥಾನ ಹಾಗೂ ಮಾಲೀಕರು ಮಣಿಕಂಠಸ್ವಾಮಿ ಸಿವಲ್ ಪ್ಲಾನರ್ & ಪ್ರಮೋಟರ್ಸ್ | ಮೊ : 9740015350	ಬಸ್	⊗
13		**ಜಿ.ಆರ್. ಮನು** ಎಂ.ಜಿ.ಆರ್. ಫೋಟೋ ಗ್ರಾಫಿ & ಇವೆಂಟ್ ಪ್ಲಾನರ್ | ಮೊ : 9019959879	ಬಲೂನ್	⊗
16		**ಡಾ|| ಎಂ. ಮಂಜುನಾಥ್** ಎಂ. ಫಾರ್ಮ, ಪಿ.ಹೆಚ್.ಡಿ., ಪ್ರಾಧ್ಯಾಪಕರು ಮತ್ತು ಪ್ರಾಂಶುಪಾಲರು ಮಾಜಿ ಅಧ್ಯಕ್ಷರು ಶ್ರೀ ಸಿದ್ಧಿವಿನಾಯಕ ದೇವಸ್ಥಾನ ದಿ|| ಎಂ.ಪಿ. ಮಲ್ಲಪ್ಪರವರ ಮಗ | ಮೊ : 9845588725	ಅಂಚೆ ಪೆಟ್ಟಿಗೆ	⊗
17		**ಎಂ.ಡಿ. ಮಂಜುನಾಥ್** ರೀಜನಲ್ ಮ್ಯಾನೇಜರ್ ಫಾರ್ಮ ಕಂಪನಿ | ಮೊ : 9845785727 ಮಾಜಿ ಅಧ್ಯಕ್ಷರು ಶ್ರೀ ಸಿದ್ಧಿವಿನಾಯಕ ದೇವಸ್ಥಾನ ದಿ|| ದಕ್ಷಿಣ ಮೂರ್ತಿರವರ ಮಗ	ಕಪಾಟು	⊗
19		**ಕೆ.ಎಸ್. ರವಿ** ವಾಣಿಜ್ಯ ಉದ್ಯಮಿ | ಮೊ : 9448819759	ಕ್ಯಾಲ್ಕುಲೇಟರ್	⊗
20		**ರಾಗಿಣಿ** ಪಿ.ನರೇಶ್ ರವರ ಧರ್ಮ ಪತ್ನಿ | ಮೊ : 9972006146	ಜೋಡಿ ದೀಪ	⊗
24		**ಹೆಚ್.ಪಿ. ಶಶಿಕಲಾ** ಡಾ. ಶಿವು ರವರ ಧರ್ಮ ಪತ್ನಿ | ಮೊ : 9449807738	ಡೋಲಿ	⊗

ನಮ್ಮ ಶ್ರೀ ಸಿದ್ಧಿವಿನಾಯಕಸ್ವಾಮಿ ಸ್ವಾಭಿಮಾನಿ ಸೇವಾ ಬಳಗಕ್ಕೆ

ಸಂಘದ ಹಿರಿಯ ನಿರ್ದೇಶಕರು, ಸದಸ್ಯರು ಹಾಗೂ ಹಿತೈಷಿಗಳ ಆಶೀರ್ವಾದ ಮತ್ತು ಸಹಕಾರದೊಂದಿಗೆ ಸ್ಪರ್ಧಿಸಲು ಶುಭಕೋರುವವರು

ಶ್ರೀ ದಿ॥ ಅಪ್ಪಾಜಪ್ಪ ರವರು
ಶ್ರೀ ಸುಬ್ಬೇಗೌಡರು ರವರು
ಶ್ರೀ ದಿ॥ ಪಿ. ಗೋವಿಂದರಾಜು ರವರು
ಶ್ರೀ ದಿ॥ ದಕ್ಷಿಣಾಮೂರ್ತಿ ರವರು
ಶ್ರೀ ದಿ॥ ಮಲ್ಲಪ್ಪ ರವರು
ಶ್ರೀ ಎಂ.ಎಸ್. ಬಸವಣ್ಣ ರವರು
ಶ್ರೀ ದಿ॥ ಪುಟ್ಟೇಗೌಡ್ರು ರವರು
ಶ್ರೀ ಕಮಲ್‌ರಾಜ್ ರವರು
ಶ್ರೀ ದಿನೇಶ್‌ಬಾಬು ರವರು
ಶ್ರೀಮತಿ ಪಾರ್ವತಿ ರವರು
ಶ್ರೀಮತಿ ರಾಧಾಮಣಿ ರವರು
ಡಾ. ಶಿವಮೂರ್ತಿ ರವರು
ಶ್ರೀ ದಿ॥ ಜಿ. ಬಸವಣ್ಣ ರವರು
ಶ್ರೀ ದಿ॥ ಮರಿ ಮಾದನಾಯಕ ರವರು
ಶ್ರೀ ರೇಣುಕುಂಚಂಗಿ ರವರು
ಶ್ರೀ ಯೋಗೇಶ್ ಬಾಬು ರವರು
ಶ್ರೀಮತಿ ಲಕ್ಷ್ಮಿ ಬಿ. ನಾಗರಾಜು ರವರು
ಶ್ರೀ ದಿ॥ ಆರ್.ಎನ್. ದಿನೇಶ್ ರವರು
ಶ್ರೀ ವಿಜಯ ನಾರಾಯಣ ರಾಜೇ ಅರಸ್ ರವರು

ಕೃತಜ್ಞತಾ ಪ್ರಕಟಣೆ : ಎನ್. ಮಣಿಕಂಠಸ್ವಾಮಿ ಮಾಜಿ ಕಾರ್ಯದರ್ಶಿ ಶ್ರೀ ಸಿದ್ಧಿವಿನಾಯಕ ದೇವಸ್ಥಾನ

ಕೈಗೊಂಡ ಕೆಲಸ ಕಾರ್ಯದ ವಿವರ

* ಭಕ್ತಾದಿಗಳ ಅನುಕೂಲಕ್ಕೆ ಪ್ರದಕ್ಷಿಣೆ ಮಾಡುವ ಸ್ಥಳಕ್ಕೆ ಮೇಲ್ಛಾವಣಿ ನಿರ್ಮಿಸಲಾಯಿತು.
* ಮೋದಕ ಪ್ರಿಯ ಪಾಕಶಾಲೆ ಕಟ್ಟಡ ನಿರ್ಮಿಸಲಾಯಿತು.
* ಶ್ರೀ ಸಿದ್ಧಿವಿನಾಯಕ ಗರ್ಭಗುಡಿಯ ದ್ವಾರಕ್ಕೆ ಬೆಳ್ಳಿ ಅಲಂಕಾರ ಮಾಡಲಾಯಿತು.
* ನಮ್ಮ ಕಾಲಾವಧಿಯಲ್ಲಿ ರಾಜಗೋಪುರ ನಿರ್ಮಾಣಕ್ಕೆ ನೀಲಿ ನಕ್ಷೆ ತಯಾರಿಸಿ ಅನುಮೋದನೆ ಪಡೆದು ರಾಜ ಗೋಪುರ ನಿಧಿಗೆ ಹಣ ಸಂಗ್ರಹಿಸಲಾಯಿತು.

ನಮ್ಮ ಸಿದ್ಧಿವಿನಾಯಕ ಸ್ವಾಮಿಯ ಸ್ವಾಭಿಮಾನಿ ಸೇವಾ ಬಳಗದ ಮುಂದಿನ ಯೋಜನೆಗಳು

* ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಸಭಾಂಗಣಕ್ಕೆ ಮಾರ್ಬಲ್ ಅಳವಡಿಸಲಾಗುವುದು.
* ಶುಭ ಕಾರ್ಯಗಳಾದ ಮದುವೆ, ಮುಂಜಿ, ನಾಮಕರಣ ಮತ್ತು ನಿಶ್ಚಿತಾರ್ಥ ಇಂತಹ ಸಣ್ಣ ಪುಟ್ಟ ಕಾರ್ಯಕ್ರಮಗಳಿಗೆ ನೂತನ ಸಭಾ ಭವನ ನಿರ್ಮಾಣ ಮಾಡಲಾಗುವುದು.
* ಪ್ರತಿ ಸಂಕಷ್ಟ ಚತುರ್ಥಿಯಂದು ಅನ್ನದಾನವನ್ನು ಅನ್ನದಾಸೋಹ ಭವನ ನಿರ್ಮಾಣ ಮಾಡಲಾಗುವುದು.
* ಬಡಾವಣೆಯ ಅಭಿವೃದ್ಧಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರಸ್ತೆ, ಚರಂಡಿ, ಪಾರ್ಕ್, ಲೈಟಿಂಗ್ ಇತ್ಯಾದಿ... ಪೌರ ಸೌಲಭ್ಯ ವಿಚಾರವಾಗಿ ಆದ್ಯತೆ ಮೇರೆಗೆ ಸ್ಪಂದಿಸಲಾಗುವುದು.

ಸಮಯ : : ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 2.00 ರವರೆಗೆ | ಸ್ಥಳ : ಶ್ರೀ ಸಿದ್ಧಿವಿನಾಯಕ ದೇವಸ್ಥಾನ, ಪಿ.8, ವಿನಾಯಮಾರ್ಗ, ಸಿದ್ದರ್ಥನಗರ, ಮೈಸೂರು - 570011

ವಿಶೇಷ ಪ್ರಕಟಣೆ : ಒಬ್ಬರಿಗೆ 15 ಮತ ಮಾಡಲು ಅವಕಾಶವಿರುತ್ತದೆ.

ಮತದಾನ ಮಾಡಲು ಬರುವಾಗ ಕಡ್ಡಾಯವಾಗಿ ಸಂಘದ ಗುರುತಿನ ಚೀಟಿ ಮತ್ತು ಆಧಾರ್‌ಕಾರ್ಡ್ ಅನ್ನು ತರತಕ್ಕದ್ದು.

ನಮ್ಮ ನಡೆ ಸಂಘ ಮತ್ತು ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಅಭಿವೃದ್ಧಿ ಕಡೆ

ಶ್ರದ್ಧಾಂಜಲಿ



ಶ್ರೀ ಎಲ್. ವೆಂಕಟಕೃಷ್ಣ ಶಾಸ್ತ್ರಿರವರು

ಸಂಸ್ಥೆಯಲ್ಲಿ ಗೌರವಾನ್ವಿತ ಅಧ್ಯಕ್ಷರು, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಹಾಗೂ ಹಾಲಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಎಲ್.ವೆಂಕಟಕೃಷ್ಣ ಶಾಸ್ತ್ರಿರವರು ದಿನಾಂಕ: 12–12–2025ರಂದು ದೈವಾಧೀನರಾಗಿದ್ದು, ಇವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇವೆ. ಹಾಗೂ ಭಗವಂತನು ಇವರ ಕುಟುಂಬವರ್ಗದವರಿಗೆ ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುವ

ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿವರ್ಗ ಹಾಗೂ ಸದಸ್ಯರು, ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಅ.., ಚಾಮರಾಜ ಜೋಡಿ ರಸ್ತೆ, ಮೈಸೂರು.

SITES FOR SALE

30x40 sites in D & E Block Vijayanagar 3rd Stage

Also available 20x30, 30x43, 40x50, 40x75, 46x83 MUDA Approved sites in Middle of Vasanth Nagar. 80% Bank loan available

Contact: 97389 09452 91415 55998

PUBLIC NOTICE

Our client Sri. Suresh, aged about 67 years, son of Late. Srikanta Rao. G.I., residing at # 2883, 4th Cross, Chamundipuram, Mysuru, is intending to purchase a unit of farm land measuring 7 guntas out of the property carved out of Sy.No. 67 morefully described in the schedule from R. Ashwath Kumar, son of Radhakrishna Rao, residing at Halebeedu Kavalu Village, Bilikere Hobli, Hunsur Taluk, Mysuru District. If anybody has got any claim over the schedule property, they can file their objection with authentic documents in support of their objection and claims if any, within 7 days from the date of this publication, failing which, my client will go ahead with the transaction with respect to the schedule property.

SCHEDULE

All that piece and parcel of the land bearing Sy.No.67 measuirng 1 Acre 19 Guntas situated at Halebeedu Kavalu Village, Bilikere Hobli, Hunsur Taluk, Mysuru District, bounded on:

East by: Property of Javaregowda;
West by: Property of Venkatashetty;
North by: Property of Tippur Venkatesh;
South by: Private property.

ADVOCATES.
O. Shama Bhat, B.A.,LL.B
O. Sathisha, . B.Sc., LL.B.

100% TEAK WOOD

FACTORY FINISH DOORS & WINDOWS @ FACTORY DEPOT RATES

10 YEARS WARRANTY*

9731591267
9901291267

PROPERTIES FOR SALE

Ready for Registration Prime Locations

43x93 East Facing Ashokapuram Railway Station 100 Mtr Near Bedarakanappa Temple.

40x60 Commercial Site East Facing Ramakrishna Nagar 'H' Block

(Brokers Excuse)

9008111454

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

BLESSED APARTMENT

4th Stage, Vijayanagar
2BHK - 1,160 Sq.Ft.

Price starts from 95 Lakhs*
Only 2 FLATS Available
• Yoga Space • CCTV • Gym • Swimming Pool

MUDA & RERA Approved

Call: 96069 07153

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

WANTED

We are Hiring below candidates for our reputed club

* **Business Development Officer** (Experience : 2 years minimum)
* **General Manager** (Experience: 3 yrs in relevant field)

Interested candidate email your resumes to: theclovers.mysore@gmail.com or Contact: 9606998085

COMMERCIAL SPACE FOR RENT

Basement: 2600 sq.ft.
Ground Floor: 2350 sq.ft.
First Floor: 2950 sq.ft.
Second Floor: 2950 sq.ft.
Roof Top: 2950 sq.ft.

9449254477, 9141446761

Address: KHB 80 Ft. Road, Hootagalli, Mysuru

FOR SALE

30x40 Sites Near RT Nagar BSNL Layout @ Just 22 Lakhs

20x30, 30x40 MUDA Approved Sites Near Rainbow School Bogadi

30x40|30x50 MUDA Sites KHB Attach, HD Kote Road. | 2 & 3 BHK Apartments @ Ramakrishna Ngr

Commercial Properties Also Available

PRAKRUTHI PROPERTIES

95386 90359, 90359 90359

G9 projects *Designing your Dreams* | Vee2 Developers

POORVA SHELTERS PHASE 1, 2, & 3

Affordable plots, peaceful living

20×30 | 30×40 & 20×40 | 30×50

Near to Marvel PU College Lalithadripura Ring road Mysuru

8088-707-707

ONLY ONE WAY TAXI CHARGE

Hi! TAXI

MYSORE to BANGALORE City drop or Pick up

BANGALORE to MYSORE Airport drop or Pick up MYSURU

9611177599

ಹಸಿರು ನಮ್ಮ ಉಸಿರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ **ಶ್ರೀನಿವಾಸ ಪಿ. ಮತ್ತು ಇತರರು**, ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತುಗಳ ಮಾಲೀಕರುಗಳಿಂದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೆಂಚಲಗೂಡು ಗ್ರಾಮದಲ್ಲಿರು ವಸತಿ ಪರಿವರ್ತನೆ ಗೊಂಡ ಸ್ವತ್ತುಗಳನ್ನು ನೊಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಈ ಕೆಳಕಂಡ ಷೆಡೂಲ್ ಸ್ವತ್ತುಗಳೀಗೆ ಸಂಬಂಧಿಸಿದಂತೆ ಮಾಲೀಕರುಗಳು ಅಲ್ಲದೇ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕುಗಳಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ, ಮೈನರ್ ಹಕ್ಕುಗಳಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ, ಈ ಕೆಳಕಂಡವರನ್ನು ಈ ಪ್ರಕಟಣೆಗೊಂಡ ದಿನದಿಂದ, 7 (ಏಳು) ದಿನಗಳ ಒಳಗಾಗೀ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಮೂಲ ದಾಖಲಾತಿಗಳೊಡನೆ ಖುದ್ದಾಗಿ ವಿಕಲ್ಪ **ಲೀಗಲ್ ಸೆಲ್ಯೂಷನ್ಸ್** ನಂ. 2796, 1ನೇ ಮಹಡಿ, 2ನೇ ಮುಖ್ಯ ರಸ್ತೆ, 3ನೇ ಮತ್ತು 4ನೇ ಕ್ರಾಸ್ ನಡುವೆ, ಜಯನಗರ, ಮೈಸೂರು – 570014 ದೂರವಾಣಿ: 0821–3567401, ಸಂಪರ್ಕಿಸಬಹುದು.

ಈ ಅವಧಿಯೊಳಗೆ ಯಾವುದೇ ಹಕ್ಕುಗಳು ಅಥವಾ ಆಕ್ಷೇಪಣೆಗಳು ಬರದಿದ್ದರೆ, ಆಸ್ತಿ ಮಾಲೀಕರು ಸ್ಪಷ್ಟ, ಸಂಪೂರ್ಣ ಮತ್ತು ಮಾರಾಟ ಮಾಡುವ ಅಧಿಕಾರ ಹೊಂದಿದ್ದಾರೆಂದು ಭಾವಿಸಿ ಕ್ರಯಕ್ಕೆ ಪಡೆಯಲು ಮುಂದುವರಿಯುತ್ತಾರೆ. ಮತ್ತು ಈ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಯುವುದು.

ಷೆಡ್ಯೂಲ್ ಸ್ವತ್ತು

1. **ಸರ್ವೆ ನಂ.** 75/4 ರಲ್ಲಿ ವೀಸ್ತೀರ್ಣ 18.08 ಗುಂಟೆ ಮತ್ತು ಸರ್ವೆ ನಂ. 75/1ಡಿ2 ರಲ್ಲಿ ವೀಸ್ತೀರ್ಣ 1 ಎಕರೆ ಅಳತೆಯ ಸ್ವತ್ತು ಪ್ರಸ್ತುತ ಶ್ರೀಮತಿ ಬೀನಾ ವಿ. ಶೆಟ್ಟಿ ಅವರ ಹೆಸರಿನಲ್ಲಿದೆ.
2. **ಸರ್ವೆ ನಂ.** 75/3 ರಲ್ಲಿ ವೀಸ್ತೀರ್ಣ 0.08 ಗುಂಟೆ ಮತ್ತು ಸರ್ವೆ ನಂ. 75/1ಡಿ1 0.04.08 ಗುಂಟೆಯ ಸ್ವತ್ತು, ಪ್ರಸ್ತುತ ಶ್ರೀಮತಿ ಎಂ. ಶಮಿತಾ ಅವರ ಹೆಸರಿನಲ್ಲಿದೆ.
3. **ಸರ್ವೆ ನಂ.** 75/1ಡಿ3 ರಲ್ಲಿ ವೀಸ್ತೀರ್ಣ 14 ಗುಂಟೆಯ ಸ್ವತ್ತು ಪ್ರಸ್ತುತ ಶ್ರೀ ಎಂ. ಶಕೀತ್ ಸಿಂಗ್ ರವರ ಹೆಸರಿನಲ್ಲಿದೆ.
4. **ಸರ್ವೆ ನಂ.** 75/1ಸಿ ರಲ್ಲಿ ವೀಸ್ತೀರ್ಣ 38 ಗುಂಟೆಯ ಸ್ವತ್ತು ಸದರಿ ಸ್ವತ್ತು ಮೆ. ದೈವಿಕ್ ಡೆವಲಪರ್ಸ್ ಅವರ ಹೆಸರಿನಲ್ಲಿದೆ.

ಸಹಿ/– ಯು.ಎಂ. ಕಲ್ಪನ, ವಕೀಲರು
ಮೊ.ನಂ. 9686667699
ಸ್ಥಳ: ಮೈಸೂರು ದಿನಾಂಕ: 12–12–2025

3ನೇ ವರ್ಷದ ಪುಣ್ಯಸ್ಮರಣೆ



ಎಲ್.ಎನ್.ಶಿವಯೋಗಿ

ಮಾಜಿ ಶಾಸಕರಾದ ದಿ.ಹೆಜ್ಜಿಗೆ ಎಂ.ಅಂಗಣ್ಣ ರವರ ಮಗ.
ನಂಜುಂಡೇಶ್ವರ ವಿದ್ಯಾವರ್ಧಕ ವಿದ್ಯಾ ಸಂಸ್ಥೆ ಮಾಜಿ ಅಧ್ಯಕ್ಷರು.
ಮರಣ : 14–12–2022

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮತ್ತು ನಿಮ್ಮ ನೆನಪಿನಲ್ಲಿ ಸದಾ ಜೀವಿಸುತ್ತಿದ್ದೇವೆ.


ದುಃಖತಪ್ತರು: ಪತ್ನಿ, ಮಕ್ಕಳು, ಅಳಿಯಂದಿರು, ಮತ್ತು ಮೊಮ್ಮಗ ಹಾಗೂ ಕುಟುಂಬ ವರ್ಗದವರು ಹೆಜ್ಜಿಗೆ ಗ್ರಾಮಸ್ಥರು, ನಂಜನಗೂಡು ಪಟ್ಟಣ

Beautiful Residential SITES FOR SALE by "DIRECT OWNER"

Site Measurements	Site Facing	Site Location
1) 40X60	NORTH	Manasi Nagar, Near Bhagat Singh Circle, Ring Road, Mysuru
2) 40X60	EAST	PAMA ENCLAVE in Bhugathagally next to MUDA Vasantha Nagar, Bannur Road, Mysuru

Contact (Call / WhatsApp): 9606797171 / (WhatsApp): +97477594674

6ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಪುಟ್ಟತಾಯಮ್ಮನವರು

(ಲೇ.ಎಂ.ಕರೀಗೌಡರ ಧರ್ಮಪತ್ನಿ)

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲೇ ಇರುವ

ದುಃಖತಪ್ತರು: ಶ್ರೀ ಕೆ. ವಜ್ರೇಗೌಡರು, ಪಿ.ಎಲ್.ಡಿ. ಬ್ಯಾಂಕ್ ಮಾಜಿ ಅಧ್ಯಕ್ಷರು ಮತ್ತು ಶ್ರೀ ಕೆ. ನಾಗೇಂದ್ರರವರು, ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು. ಶ್ರೀ ಮಹದೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್ ಸಿಬ್ಬಂದಿ ವರ್ಗ ಹಾಗೂ ಕಗ್ಗಲೀಪುರ ಗ್ರಾಮಸ್ಥರು ತಿ.ನರಸೀಪುರ ತಾಲ್ಲೂಕು...

REQUIRED
Social Media Professional

A reputed School in Mysuru is looking for a **Qualified & Creative SOCIAL MEDIA PROFESSIONAL** to manage the School's online presence & promotional content.

Qualification: Degree holder with experience in Digital Marketing / Content Creation preferred.

Interested candidates may send their resume on or **before 17th December 2025 to :**

Email Id: - marthomaeducationsociety@gmail.com

Mob : 99641 49158